ಸಂವಾದ

ಜೂನ್ ೨೦೦೬ ರೂ.೨೦

ಮೀಸಲಾತಿ ಚರ್ಚೆ

ನೀರಿನ ಖಾಸಗೀಕರಣ

ಅಗ್ನಿ ಮುಖದಲ್ಲಿ ಕರ್ನಾಟಕ

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೮
ಜೂನ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ☐ ಪತ್ರಗಳು ೩
- ☐ ಅಂತರಂಗ ೪
- ☐ ಹೈಟೆಕ್ ಮಾಲ್‌ಗಳೂ ಕಳಪೆ ಸಾಮರ್ಥ್ಯವೂ ೬
  - ○ ಪಿ. ಸಾಯಿನಾಥ್
- ☐ ಪೇಜಾವರರು ಮತ್ತು ಅಸ್ಪೃಶ್ಯತೆ ೮
  - ○ ನಾ. ದಿವಾಕರ
- ☐ ಮೀಸಲಾತಿ: ಪ್ರತಿಭಾನ್ವೇಷಣೆಗಾಗಿ ೧೦
  - ○ ದೇವನೂರು ಮಹಾದೇವ

- ☐ ಮೀಸಲಾತಿ ಮೀರಿದ ಮೀಸಲಾತಿ ೧೨
  - ○ ಎಸ್. ಗಂಗನಾಳ
- ☐ ಮೀಸಲಾತಿ ವಿರೋಧಿ ದನಿಯನ್ನು ಅಡಗಿಸಲು ೧೪
  - ○ ರಾಜಶೇಖರ್ ವುಂಡ್ರು
- ☐ ಉನ್ನತ ಶಿಕ್ಷಣ: ಮೀಸಲಾತಿ ಅನಿವಾರ್ಯ ೧೬
  - ○ ಪ್ರೊ॥ ರವಿವರ್ಮಕುಮಾರ್
- ☐ ಎತ್ತ ಸಾಗುತ್ತಿದೆ ಲ್ಯಾಟಿನ್ ಅಮೆರಿಕಾ? ೧೮
  - ○ ಜಾರ್ಜ್ ಹೇನ್
- ☐ ನೀರಿನ ಖಾಸಗೀಕರಣ ೨೨
  - ○ ಟಿ.ಎಸ್.ವಿವೇಕಾನಂದ
- ☐ ಮುಸ್ಲಿಂ ಮಹಿಳೆಯರ ಬದುಕು ೨೮
  - ○ ಕೆ. ಷರೀಫಾ

- ☐ ಬಾಬಾ ಸಾಹೇಬರ ಪ್ರಖರ ಆಧ್ಯಾತ್ಮಿಕತೆ ೩೧
  - ○ ಪದ್ಮಲಯ ನಾಗರಾಜ
- ☐ ವೃತ್ತಿಪರ ಶಿಕ್ಷಣದಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ೩೪
  - ○ ಡಾ॥ ಯು.ಪಿ. ಚಂದ್ರಶೇಖರ್
- ☐ ದಲಿತ್ ಡೈರಿ ೩೮
  - ○ ಚಂದ್ರಭಾನ್ ಪ್ರಸಾದ್
- ☐ ಬುದ್ಧಾಯಣ ೪೨
  - ○ ಸಿ. ಎಚ್. ರಾಜಶೇಖರ್

ಕವನಗಳು : ☐ ಕಾರ್ಮಿಕನೊಬ್ಬನ ಮೋಜಿನ ಹಾಡು ೧೫ ☐ ಝೂನ್ ಗಜಲು ೩೦
☐ ಕಲಾವಿದನ ಆತ್ಮ ಲಹರಿ ೩೬ ☐ ಕಾಲದ ಕಟಕಟೆಯ ಮುಂದೆ ೩೭

ಮುಖಪುಟ ಕಲೆ: ವೆಂಕಟಾಚಲಪತಿ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

'ಇಡಿ–ಬಿಡಿ' ವಿವಾದ ಕುರಿತು...

ನ್ಯ ಸಂಪಾದಕರೇ,

ಡಿ.ಎಸ್. ನಾಗಭೂಷಣ ಅವರು ವಾದದಲ್ಲಿ ಬರೆದ ಚಳುವಳಿಗಳ ಬಲಿ ಸುವ ಜಾತಿ ರಾಜಕಾರಣ" ಎಂಬ ಖನಕ್ಕೆ ಡಾ॥ ಮೂಡ್ನಕೂಡು ಚಿನ್ನ ಮಿಯವರು ನೀಡಿದ ಪ್ರತಿಕ್ರಿಯೆ; ಅದಕ್ಕೆ ತ್ತಿ ಮರು ಪ್ರತಿಕ್ರಿಯೆಯಾಗಿ ನಾಗಭೂಷ ು ಬರೆದ ಟಿಪ್ಪಣಿಗಳನ್ನು ಗಮನಿಸಿದಾಗ ನೆ ಹೊಳೆದ ಕೆಲವು ವಿಚಾರಗಳು ವೆ.

ಪ್ರಜಾಪ್ರಭುತ್ವದ ದಿಕ್ಕು ಮತ್ತು ನೆಲೆ ಡನ್ನು ತಪ್ಪಿಸುತ್ತಿರುವ ಹುಸಿ ಜಾತಿರಾಜ ಣದ ಈ ಹೊತ್ತಿನಲ್ಲಿ ಅಹಿಂದ ಚಳು ಯನ್ನು ಕುರಿತ ನಾಗಭೂಷಣರ ಒಳ ಟಗಳನ್ನು ಅಲಕ್ಷಿಸುವಂತಿಲ್ಲ. ಬ್ರಾಹ್ಮೇ ತರ ಚಳುವಳಿಯ ಇತಿಹಾಸವನ್ನು ಯುವಾಗ ಕರಾರುವಕ್ಕಾಗಿ ಮಾಹಿತಿಗ ನ್ನು ಹೆಕ್ಕುವಾಗ ನಾಗಭೂಷಣರು ಯೋ ನೆಲೆ ಕಳೆದುಕೊಂಡವರಂತೆ ಡ್ಡಾಡಿ ಬಿಟ್ಟಿದ್ದು ಗಮನಕ್ಕೆ ಬರುತ್ತದೆ.

ಚಳುವಳಿಗಳ ಬಗೆಗಿನ ಅವರ ಕೆಗಳಲ್ಲಿಯೇ ಅಸ್ಪಷ್ಟಗೊಂದಲಗಳು, ರ್ವಾಗ್ರಹಪೀಡಿತ ದೋಷಗಳು ಕಂಡು ುತ್ತವೆ. ಮೊದಲ ಲೇಖನದಲ್ಲಿ ತುಂಬಾ ವಧಾನ ಚಿತ್ತದಿಂದ ವಾದ ಮಂಡಿ ುರುವಂತೆ ಕಾಣಿಸಿಕೊಳ್ಳುವ ಅವರು ಣಿ ನೀಡುವ ಸಂದರ್ಭದಲ್ಲಿ ಎಕ್ಸ್‌ಪೋ ಗಿ ಬಿಟ್ಟಿದ್ದಾರೆ. ಇದು ಬಹುತೇಕ ಎಲ್ಲ ಹಿಯಾ ವಾದಿಗಳ ಸದ್ಯದ ಸ್ಥಿತಿ ದು ತೋರುತ್ತದೆ.

ಮೊದಲನೆಯದಾಗಿ ನಾಗಭೂಷಣ ರು ತಮ್ಮ ಮರು ಪ್ರತಿಕ್ರಿಯೆಯಲ್ಲಿ ಂಬೇಡ್ಕರ್‌ರನ್ನು ಬಿಡಿ ನಾಯಕರು ದು ಹೇಳಿದಂತಿದೆ ಎಂಬ ಅರ್ಥ ಅನಿಸಿಕೆಯ ಆಧಾರದ ಮೇಲೆ ಅವರು ತಮ್ಮ ಪ್ರತಿಕ್ರಿಯೆ ಬೆಳೆಸಿದ್ದಾರೆ. ಆದರೆ ಲೇಖನದಲ್ಲೆಲ್ಲೂ ನಾನು ಹಾಗೇ ಗುರುತಿಸುವ ಪ್ರಯತ್ನ ಮಾಡಿಲ್ಲ" ಎನ್ನುತ್ತಾರೆ. ಖಂಡಿತ ನಾಗಭೂಷಣರು ಅಂಬೇಡ್ಕರ್‌ರನ್ನು ಹೆಸರಿಸಿ ಅವರನ್ನು ಬಿಡಿ ನಾಯಕರು ಎಂದು ಹೇಳಿರಲಿಕ್ಕಿಲ್ಲ; ಆದರೆ ತಮ್ಮ ಮೊದಲ ಲೇಖನದಲ್ಲಿ ಅವರು ವಾದ ಮಂಡಿಸುವಾಗ "ಬುದ್ಧ, ಬಸವ, ವಿವೇಕಾನಂದ ನಾರಾಯಣಗುರುಗಳನ್ನು ನೆನಸಿಕೊಳ್ಳುವುದು ಎಂದರೆ ಮುಖ್ಯವಾಗಿ ಎರಡು ವಿಷಯಗಳನ್ನು ನೆನೆಪಿಸಿಕೊಂಡಂತೆ.

ಒಂದು ಅವರೆಲ್ಲರೂ ಇಡೀ ಸಮಾಜವನ್ನು ಮುಟ್ಟಿನೆಡೆಸುವ 'ಇಡಿ' ನಾಯಕರಾಗಿದ್ದರು. ಎಂದೂ ವರ್ಗದ ಸಮಾಜದ ಒಂದು ಭಾಗದ ಬಿಡಿ ನಾಯಕರಾಗಿ ಗುರುತಿಸಿಕೊಂಡು ತಮ್ಮ ದರ್ಶನವನ್ನು ರೂಪಿಸಿಕೊಡಲಿಲ್ಲ" ಎಂದು ಬರೆಯುತ್ತಾರೆ. ಪರೋಕ್ಷವಾಗಿ ಇಲ್ಲಿ ಬುದ್ಧ, ಬಸವ, ವಿವೇಕಾನಂದ, ನಾರಾಯಣಗುರು ಹೊರತುಪಡಿಸಿ ಉಳಿದವರೆಲ್ಲ ಬಿಡಿ ನಾಯಕರೇ ಎಂಬ ಇಂಗಿತ ಧ್ವನಿತವಾದಂತೆ ಚಿನ್ನಸ್ವಾಮಿಯವರಿಗೆ ಅನಿಸಿದ್ದರೆ ಅದು ಅಕಾರಣವೇನಲ್ಲ. ನಮ್ಮ ನಡುವಿನ ಅತ್ಯಂತ ಸಂವೇದನಾಶೀಲ ಲೇಖಕರಾಗಿ ಹೊರಹೊಮ್ಮುತ್ತಿರುವ ಚಿನ್ನಸ್ವಾಮಿಯವರ ಅನಿಸಿಕೆಗಳಿಗೆ ತುಂಬಾ ಸಂಕೀರ್ಣವಾದ ಚಾರಿತ್ರಿಕ ಕಾರಣಗಳಿವೆ ಎಂಬ ಸತ್ಯ ಗೋಚರವಾಗದಿದ್ದರೆ ಮತ್ತೆ ಶತಮಾನ ಹಿಂದಿನ ನಿಗೂಢಿಕರಣ ಆಧ್ಯಾತ್ಮವಾದಿ ವ್ಯಸನಕ್ಕೆ ಬಲಿಬಿದ್ದಂತೆಯೇ ಸರಿ. ಸರ್. ಎಂ. ವಿಶ್ವೇಶ್ವರಯ್ಯನವರನ್ನು ಬ್ರಾಹ್ಮಣೇತರ ಚಳುವಳಿಯ ಮೊದಲ ಬಲಿ ಎಂದು ಹೇಳುವುದು ತುಂಬಾ ಬೀಸು ಹೇಳಿಕೆಯಾದೀತು. ಚರಿತ್ರೆಯನ್ನು ಇಷ್ಟು ಅಮಾಯಕ ಕಣ್ಣುಗಳಿಂದ ನೋಡಬೇಕಾದ ಅವಶ್ಯಕತೆಯಿಲ್ಲ.

ಅಷ್ಟಕ್ಕೂ ಭಾರತದ ಜಾತಿ ಪದ್ಧತಿಯನ್ನು ಪ್ರಜಾಪ್ರಭುತ್ವದ ಈ ಸಾಧ್ಯತೆಗಳ ನಡುವೆ ಅರ್ಥೈಸಿಕೊಳ್ಳುವಾಗಲೂ ಬಸವಣ್ಣನ ವಿನಯಪೂರಿತ ವ್ಯವಧಾನ ಮತ್ತು ಅಂಬೇಡ್ಕರ್‌ರ ಸ್ವಯಂ ನೋವಿನ ಸಾತ್ವಿಕ ಸಿಟ್ಟು; ಇವೆರಡನ್ನೂ ಒಟ್ಟೊಟ್ಟಿಗೆ ಆವಾಹಿಸಿಕೊಳ್ಳದಿದ್ದರೆ ಜಾಗತಿಕರಣದ ಈ ಮಾಯಾಬಜಾರಿನಲ್ಲಿ ನಮ್ಮ ಸಮಾನತೆಯ ಕನಸುಗಳು ಲಾಭದ ದಂಧೆಯಲ್ಲಿ ಬಿಕರಿಯಾಗಿ ಬಿಡುತ್ತವೆ.

ಎರಡನೆದಾಗಿ ಹಿಂದೂ ಧರ್ಮದ ಬಗೆಗೆ ಚಿನ್ನಸ್ವಾಮಿಯವರು ಕಿಡಿಕಾರಿದ್ದಾರೆ ಎಂಬ ಗ್ರಹಿಕೆಯಲ್ಲಿಯೇ ನಾಗಭೂಷಣರಿಗೆ ಅನಾವಶ್ಯಕ ಗೊಂದಲಗಳು ಕಾಡಿದಂತಿದೆ. ಈ ಕಾರಣವಾಗಿಯೇ ಅವರು "ಗಾಂಧೀಜಿ ಕುರಿತ ಚಿನ್ನಸ್ವಾಮಿಯವರ ಅಭಿಪ್ರಾಯಕ್ಕೆ ಸಂಪೂರ್ಣ ಅವರೇ

ಪತ್ರಗಳು

ಹೊಣೆ" ಎಂದು ಗಾಬರಿಗೆ ಬಿದ್ದವರಂತೆ ಬರೆಯುತ್ತಾರೆ. ನಾನು ಗಮನಿಸಿರುವಂತೆ ಗಾಂಧೀಜಿ ಬಗೆಗಿನ ಚಿನ್ನಸ್ವಾಮಿಯವರ ಅಭಿಪ್ರಾಯಗಳು ಮಾರ್ಕ್ ಲಿಂಡಲೆ ಅವರ ಪುಸ್ತಕ 'ಗಾಂಧಿ ಚಿಂತನೆಯಲ್ಲಿ ಬದಲಾವಣೆ'ಯಲ್ಲಿಂದ(ಅನು: ಕೆ.ವಿ. ಸುಬ್ಬಣ್ಣ ಮಾನವ ಮಂಟಪ ಪ್ರಕಾಶನ) ಎತ್ತಿಕೊಂಡಂತೆ ಇದೆ. ಜಾತಿ ಬಗೆಗಿನ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀ, ನಾರಾಯಣಗುರು ಮುಂತಾದ ಹಲವರ ಗ್ರಹಿಕೆಗಳು ಚಳುವಳಿ ಹಂತದಲ್ಲಿನ ಮಜಲುಗಳು. ಆದಾಗ್ಯೂ ಅವೆಲ್ಲ ಸಮಕಾಲೀನ ಸಂದರ್ಭಕ್ಕೆ ಸ್ವಯಂಸಿದ್ಧ ಮಾದರಿಗಳಾಗಬೇಕೆಂದೇನೂ ಇಲ್ಲ. ಹತ್ತಾರು ಸಂಘಟಿತ ಚಳುವಳಿಯ ಮೂಲಕ ಹಾದು ಬಂದಿರುವ ನಾಗಭೂಷಣ ಮತ್ತು ಚಿನ್ನಸ್ವಾಮಿ ಇಬ್ಬರಿಗೂ ಜಾತಿರಾಜಕಾರಣದ ಶಕ್ತಿ ಮತ್ತು ಮಿತಿ ಅರಿಯದೇನಲ್ಲ.

ಮೂರನೆಯದಾಗಿ ದಲಿತರ ಮತಾಂತರ ಕುರಿತಂತೆ ನಾಗಭೂಷಣ ಅವರು ತುಂಬಾ ದುಡುಕಿನ ಹೇಳಿಕೆಯನಿತ್ತು ವಾಸ್ತವದ ಬಿಕ್ಕಟ್ಟುಗಳಿಂದ ದೂರ ನಿಲ್ಲುವ ಭೋಳೆತನ ತೋರಿದ್ದಾರೆ. ಮತಾಂತರ ಯಾವುದೇ ಸಾರ್ವಕಾಲಿಕ ಸಮಸ್ಯೆಗಳಿಗೆ ಶಾಶ್ವತ ಪರಿವಾರವಾಗಲಿಕ್ಕಿಲ್ಲ. ಎಲ್ಲ ಸಮಕಾಲೀನ ಮತಧರ್ಮಗಳು, ದರ್ಶನಗಳು, ವಾದಗಳನ್ನ ತಲಸ್ಪರ್ಶಿ ಜಾಲಾಡಿ ಅಧ್ಯಯನ ಮಾಡಿದ್ದ ಅಂಬೇಡ್ಕರ್‌ರವರಿಗೆ ಇದು ತಿಳಿಯದ ಸಂಗತಿಯೇನಾಗಿರಲ್ಲಿಲ್ಲ. ಆದರೆ ಸಮಕಾಲೀನ ಸಾಮಾಜಿಕ ಒತ್ತಡಗಳು ನಿರ್ಮಿಸುವ ಬಿಕ್ಕಟ್ಟುಗಳಿರುತ್ತವೆಯಲ್ಲ. ಅವು ವರ್ತಮಾನದ ತಕ್ಷಣದ ಬಿಡುಗಡೆಗಾಗಿ ನೂರು ಹಾದಿಗಳನ್ನು ಸೃಷ್ಟಿಸಿಕೊಳ್ಳುತ್ತವೆ. ತಳಸಮುದಾಯಗಳು ತಮ್ಮ ಅಸ್ತಿತ್ವಕ್ಕಾಗಿ ನಡೆಸುವ ಹುಡುಕಾಟವನ್ನು ನಿರುಪಯುಕ್ತ ಎಂದು ಹೇಳುವಂತಿಲ್ಲ.

ಮೂಲತಃ 'ಚಳುವಳಿ' ಎಂಬುದು ಒಂದು ನಿರ್ದಿಷ್ಟ ಘಟನೆ 'ಯಾ' ಅಂದಂದಿನ ಸಂಕಥನ ಮಾತ್ರವಲ್ಲ ಅದೊಂದು ನಿರಂತರ ಪ್ರಕ್ರಿಯೆ. ಆದ್ದರಿಂದ ಅದಕ್ಕೆ ಸೋಲು, ಗೆಲುವು, ಎಂಬುದಾಗಲಿ, ಬಲಿ, ಹಿರಿಮೆ ಎಂಬುದಾಗಲಿ ಇರುವುದಿಲ್ಲ. ಪ್ರತಿಯೊಂದು ಚಳುವಳಿಯು ಭೂತವನ್ನು ಘರ್ಷಿಸುತ್ತ ವರ್ತಮಾನದ ಜರೂರಿಗಳನ್ನು ಭರಿಸಿಕೊಳ್ಳುವ, ತನ್ಮೂಲಕ ಭವಿಷ್ಯವನ್ನು ಕ್ರಿಯಾಶೀಲವಾಗಿಡಬೇಕೆಂಬ ವಿದ್ಯಮಾನವಾಗಿರುತ್ತದೆ.

ಹೀಗೆ ಹೊರಡುವಾಗ ಹತ್ತಾರು ಸಂಕೀರ್ಣ ಹರಕತ್ತು, ಹಿಕ್ಮತ್ತುಗಳನ್ನು ಆಯಾ ಕಾಲ ಘಟ್ಟದಲ್ಲಿ ತಾತ್ಕಾಲಿಕ ಪರಿಹಾರದ ಸೂತ್ರಗಳಾಗಿ ಒಳ ನುಸುಳಿರುತ್ತವೆ. ಈ ಹಿಕ್ಮತ್ತುಗಳು ಪ್ರಶ್ನಾತೀತವೆಂದೇನೂ ಅಲ್ಲ. ಅಷ್ಟಕ್ಕೂ ಪ್ರತಿಯೊಂದು ಚಳುವಳಿಯ ನಡೆ ಗತದ ಪುಟಗಳಿಂದ ಪಾಠ ಕಲಿಯುತ್ತಲೆ ಮುಂದಡಿಯಿಡುತ್ತದೆ. ಈ ಎಲ್ಲ ಸಂಗತಿಗಳನ್ನು ಗಂಭೀರವಾಗಿಯೇ ಪರಿಗಣಿಸಿರುವ ನಾಗಭೂಷಣ ಅವರು ಸ್ಥಿತ್ಯಾಂತರದ ಹೊತ್ತಲ್ಲಿನ ಚಿನ್ನಸ್ವಾಮಿಯಂಥವರ ಸೂಕ್ಷ್ಮ ಸಂವೇದನೆಗಳನ್ನು ವಾದ ಲಹರಿಗೆ ಅಥವಾ ಭಿನ್ನ ಸಾಧ್ಯತೆಗೆ ಅವಕಾಶ ಮಾಡಿಕೊಡದೆ ವ್ಯಸನ ಸಂತೋಷಿಗಳು ಎಂದು ಕರೆದಿರುವುದು ಫ್ಯಾಸಿಸ್ಟ್ ಮನೋಭಾವವಲ್ಲವೇ?

ಹೀಗಾದರೆ ನಾವೆಲ್ಲ ಎಷ್ಟೇ ಪ್ರಗತಿಪರರೆಂದು ಫೋಜು ಕೊಡುತ್ತಿರುವಾಗಲೂ ನಮ್ಮ ಬುದ್ಧಿವಂತಿಕೆಯ ಕಸರತ್ತುಗಳು ನಮಗರಿವಿರದಂತೆ ಹಿಂದುತ್ವವಾದಿಗಳ ಅವಕಾಶವಾದಿತನಕ್ಕೆ ಒದಗಿ ಬಂದು ಮತ್ತೊಂದು ಚಾರಿತ್ರಿಕ ಪ್ರಮಾದ ಘಟಿಸಬಾರದಲ್ಲವೇ?

ಡಾ॥ ಮೀನಾಕ್ಷಿ ಬಾಳಿ, ಗುಲ್ಬರ್ಗಾ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ



ಅಂತರಂಗ



ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ...

ಕಳೆದ ತಿಂಗಳ ಕಡೇವಾರ ಭಾರತದ ಸಾಮಾಜಿಕ ಬದುಕಿನಲ್ಲೊಂದು ಅದ್ಭುತ ಘಟನೆ ನಡೆಯಿತು. ಶತಮಾನಗಳ ಕಾಲದಿಂದಲೂ ಐಷಾರಾಮಿ ಜೀವನ ನಡೆಸಿಕೊಂಡು ಬರುತ್ತಿದ್ದ ಜನವರ್ಗವೊಂದು ಕೈಯಲ್ಲಿ ಪೊರಕೆ ಹಿಡಿದು ಬೀದಿ ಗುಡಿಸಿತು. ಐತಿಹಾಸಿಕವಾದ ಈ ಕೆಲಸವನ್ನು ನೋಡಿ ಕೆಲವರು ನೊಂದುಕೊಂಡರೆ, ಬಹು ಸಂಖ್ಯಾತರು ಖುಷಿಪಟ್ಟರು. ವಿಚಿತ್ರ ಎಂದರೆ ಹೀಗೆ ಕಸ ಗುಡಿಸಿದ ವೈದ್ಯ ವಿದ್ಯಾರ್ಥಿಗಳಿಗೆ ತಮ್ಮ ನಡತೆಯಿಂದ ನಾಡಿನ ಬಹು ಸಂಖ್ಯಾತ ಸಮುದಾಯಗಳಿಗೆ ಅವಮಾನ ಮಾಡುತ್ತಿದ್ದೇವೆಂಬ ಅರಿವಾಗಲಿ, ನಾಚಿಕೆಯಾಗಲಿ ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ ತಾವೇನೋ ಸಾಧಿಸಿದೆವೆಂಬ ಹೆಮ್ಮೆ ಇತ್ತು. ನಿಜ ಹೇಳಬೇಕೆಂದರೆ ಆ ವಿದ್ಯಾರ್ಥಿಗಳು ತಮಗಷ್ಟೇ ಅಲ್ಲ ಭಾರತದ ಸಂವಿಧಾನಕ್ಕೆ ಅವಮಾನ ಮಾಡಿದ್ದರು. ವೃತ್ತಿ ಗೌರವಕ್ಕೆ ಅವಮಾನ ಮಾಡಿದ್ದರು. ಜಾತಿ ಮದದ ಅಣಕು ಪ್ರದರ್ಶನಕ್ಕೆ ಈ ಘಟನೆ ಬಹಿರಂಗ ಸಾಕ್ಷಿಯಾಯಿತು.

ಮೀಸಲಾತಿ ವಿರೋಧಿಸಿ ನಡೆಯುತ್ತಿರುವ ಚಳವಳಿ ಅತ್ಯಂತ ಅಪ್ರಜಾಸತ್ತಾತ್ಮಕ ಹಾಗೂ ಸಂವಿಧಾನ ವಿರೋಧಿಯಾಗಿದೆ. ಸಂವಿಧಾನಕ್ಕೆ ತಂದ ೯೩ನೇ ತಿದ್ದುಪಡಿಯಲ್ಲಿ, ಉನ್ನತ ಶಿಕ್ಷಣವೂ ಸೇರಿದಂತೆ ಎಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶಗಳನ್ನು ಮೀಸಲಿಡುವ ಅವಕಾಶವನ್ನು ಮಾಡಿಕೊಡಲಾಗಿದೆ. ಕಳೆದ ಫೆಬ್ರವರಿಯಲ್ಲಿ ಅಂಗೀಕರಿಸಲಾದ ಈ ತಿದ್ದುಪಡಿಗೆ ಎಲ್ಲ ಪಕ್ಷಗಳು ಸರ್ವಾನುಮತದ ಒಪ್ಪಿಗೆ ನೀಡಿವೆ. ಹೀಗೆ ಸಂವಿಧಾನ ದತ್ತವಾದ ಅವಕಾಶವೊಂದನ್ನು ನಿರಾಕರಿಸುವ ಮೂಲಕ ಹಾಗೂ ಅದನ್ನು ವಿರೋಧಿಸುವ ಮೂಲಕ ರಾಜ್ಯಾಂಗದ ಆಶಯಗಳಿಗೆ ವಿರುದ್ಧವಾಗಿ ಈ ಪ್ರತಿಭಾವಂತರು ನಡೆದುಕೊಳ್ಳುತ್ತಿದ್ದಾರೆ.

ಮೀಸಲಾತಿಯನ್ನು ವಿರೋಧಿಸುವವರ ವಾದಗಳನ್ನು ಪರಿಶೀಲಿಸಿದರೆ ಅವರ ಇಬ್ಬಂದಿತನ ಬಯಲಾಗುತ್ತದೆ. ಒಂದು ಕಡೆ ಹಿಂದುಳಿದವರಿಗೆ ಮೀಸಲಾತಿ ನೀಡಿದರೆ 'ಪ್ರತಿಭೆ' ಹಾಳಾಗುತ್ತದೆ, ದೇಶ ಎಕ್ಕುಟ್ಟಿ ಹೋಗುತ್ತದೆ ಅಂತ ಬೊಬ್ಬಿರಿಯುತ್ತಾರೆ. ಅದೇ ಕ್ಯಾಪಿಟೇಷನ್ ಮೂಲಕ ಸೀಟು ಪಡೆದವರ ವಿರುದ್ಧ ಚಕಾರ ಕೂಡ ಎತ್ತುವುದಿಲ್ಲ! ವಿಚಿತ್ರ ಎಂದರೆ ನೂರಕ್ಕೆ ೫೦ ರಷ್ಟು ಸೀಟುಗಳನ್ನು ದುಡ್ಡು ಕೊಟ್ಟು ಕೊಳ್ಳುವ ಈ 'ಕ್ಯಾಪಿಟೇಷನ್ ಕುಳಗಳಿಗೆ' ಮಾನದಂಡವೇ ಇಲ್ಲ. ಯಾರೊಂದಿಗೂ ಸ್ಪರ್ಧಿಸಬೇಕಾಗಿಲ್ಲ. ಮೆರಿಟ್ ಇತ್ಯಾದಿಯಂತೂ ಅಗತ್ಯವೇ ಇಲ್ಲ. ಅರ್ಹತೆಯ ಕನಿಷ್ಠ ಅಂಕಗಳನ್ನು ಪಡೆದು ಪಾಸಗಿದ್ದರೆ ಸಾಕು!

ಆಡಳಿತ ವರ್ಗದ ಸೀಟುಗಳೆಂದು ಕರೆಸಿಕೊಳ್ಳುವ ಈ ಸೀಟುಗಳನ್ನು ಪಡೆಯಲು ಬೇಕಾದ ಒಂದೇ ಒಂದು ಅರ್ಹತೆ ಎಂದರೆ ಹಣ! ಸಾಮಾನ್ಯವಾಗಿ ಈ ಕ್ಯಾಪಿಟೇಷನ್ ಕುಳಗಳೆಲ್ಲಾ 'ಪ್ರತಿಭೆ'ಯಿಂದ ಬಹಳ ದೂರ ಇರುವವರು. ಅವರು ಹಣಕೊಟ್ಟು ಸೀಟು ಪಡೆಯುತ್ತಾರೆ. ಹಾಗೇ ಹಣ ಕೊಟ್ಟು ವೈದ್ಯ-ಇಂಜಿನಿಯರ್‌ಗಳು ಆಗುತ್ತಾರೆ!

ಪ್ರತಿಭೆಯ ಮಾತಾಡುವ 'ದೇಶ ಭಕ್ತ'ರಿಗೆ ಇದು ಕಾಣಿಸುವುದೇ ಇಲ್ಲ.

ಇವರದ್ದು ಇನ್ನೊಂದು ವಿತಂಡ ವಾದವೂ ಇದೆ. 'ಜನರಲ್ ಮೆರಿಟ್‌ಗೂ-ಮೀಸಲಾತಿಯಲ್ಲಿ ಆಯ್ಕೆಯಾಗುವವರ ಮೆರಿಟ್‌ಗೂ ಅಜಗಜಾಂತರ ಅಂತರವಿದೆ. ಸೇ. ೪೦ ಅಂಕ ಪಡೆದ ವ್ಯಕ್ತಿ ವೈದ್ಯನಾದರೆ ರೋಗಿಗಳ ಗತಿ ಏನು?' ಎಂದು ಪ್ರಶ್ನಿಸುತ್ತಾರೆ. ಅವರ ವಾದ ಸುಳ್ಳೆಂದು ಅವರಿಗೆ ತಕ್ಷಣವೇ ಗೊತ್ತಾಗುತ್ತದೆ. ಯಾಕೆಂದರೆ ವೈದ್ಯಕೀಯ ಶಿಕ್ಷಣದ ಸೀಟು ತಡೆಯಲು ಪರಿಶಿ[...] ಜಾತಿಯ ವಿದ್ಯಾರ್ಥಿ ಕೂಡ ಕನಿಷ್ಟ ೮೦-೯೦ ಅಂಕಗಳ[...] ತೆಗೆಯಲೇ ಬೇಕಾದಂತ ಪರಿಸ್ಥಿತಿ ಇದೆ. ಹಾಗೆ ತೆಗೆಯುತ್ತಿದ್ದಾ[...] ಕೂಡ. 'ಅಂಕಗಳ ಶೇಕಡವಾರು ಅಂತರ ಬಹಳ ಕಡಿಮೆ ಇದೆಯ[...] ಪ್ರತಿಭೆ ಹಾಳಾಗುವ ಪ್ರಶ್ನೆ ಎಲ್ಲಿ ಬಂತು?' ಎಂದು ಪ್ರಶ್ನಿಸಿದ[...] 'ಹಾಗಾದರೆ ಜನರಲ್ ಕ್ಯಾಟಗರಿಯಲ್ಲೇ ಸ್ಪರ್ಧಿಸಬಹುದ[...] ಮೀಸಲಾತಿ ಯಾಕೆ?' ಎಂದು ಪ್ರಶ್ನಿಸುತ್ತಾರೆ. ಒಟ್ಟಾರೆ ಸಮಾಜ[...] ತಳಸಮುದಾಯದ ಜನ ಇದರೊಂದಿಗೆ ಸರಿಸಮವಾಗಿ ಬರಬಾರದು[...] ಅಷ್ಟಕ್ಕೆ ಏನು ಬೇಕೋ ಅದೆಲ್ಲವನ್ನು ಇವರು ಯಾವ ನಾಚಿ[...] ಇಲ್ಲದೆಯೂ ಮಾಡುತ್ತಾರೆ.

ಒಂದು ಅಂಕಿ ಅಂಶವನ್ನು ಪರಿಶೀಲಿಸಬಹುದು. ಕೇಂ[...] ಸರ್ಕಾರ ಈಗ ಶೇ.೨೨.೫ ರಷ್ಟು ಪ್ರವೇಶಾವಕಾಶಗಳನ್ನು ಪರಿಶಿ[...] ಜಾತಿ/ವರ್ಗಕ್ಕೆ ಮೀಸಲಿರಿಸಿದೆ. ಉದ್ದೇಶಿತ ಪ್ರಸ್ತಾವನೆಯಲ್ಲಿ ಶೇ. ೨[...] ರಷ್ಟು ಪ್ರವೇಶಾವಕಾಶಗಳನ್ನು ಇತರೆ ಹಿಂದುಳಿದ ವರ್ಗಗಳಿ[...] ಮೀಸಲಿರಿಸಲು ತೀರ್ಮಾನಿಸಿದೆ. ಅಂದರೆ ಒಟ್ಟು ಶೇ. ೪೯.೫ ರಷ[...] ಪ್ರವೇಶಾವಕಾಶಗಳು ಮೀಸಲಾಗುತ್ತವೆ. ಆದರೆ ಈ ಶೇ.೪೯.೫ ರಷ[...] ಪ್ರವೇಶಾವಕಾಶಗಳು ಜನಸಂಖ್ಯೆಯ ಶೇ. ಎಷ್ಟು ಜನರಿಗೆ ದೊರೆಯು[...]ತ್ತವೆ ಅನ್ನುವುದು ಮುಖ್ಯ. ದಲಿತರು, ಹಿಂದುಳಿದವರು ಎಲ್ಲ ಸೇ[...]ದರೆ ದೇಶದ ಒಟ್ಟು ಜನಸಂಖ್ಯೆಯ ಶೇ.೮೫ ರಷ್ಟಿದ್ದಾರೆ, ಅಂದ[...] ಶೇ. ೮೫ ರಷ್ಟು ಜನರಿಗೆ ಈಗಿನ ಪ್ರಸ್ತಾಪದ ಶೇ. ೨೭ ಮೀಸಲಾ[...] ನೀಡಿದರೂ ಸಿಗುವುದು ಕೇವಲ ಶೇ. ೪೯.೫ ಮಾತ್ರ, ಉಳಿದ[...] ಕೇವಲ ಶೇ. ೧೫ ರಷ್ಟು ಜನರಿಗೆ ಇನ್ನೂ ಶೇ.೫೦.೫ ರಷ್ಟು ಪ್ರವೇ[...]ಗಳು ಮುಕ್ತವಾಗಿಯೇ ಇವೆ. ಅಂದರೆ ಈಗಿನ ಪ್ರಸ್ತಾಪಿತ ಮೀಸಲಾ[...] ಜಾರಿ ಮಾಡಿದರೂ ಸಿಂಹ ಪಾಲು ಸಿಗುವುದು ಈ ಶೇ.೧೫ ರ[...] ದೇಶ ಭಕ್ತರಿಗೇ !

ಶೇ. ನೂರಕ್ಕೆ ನೂರು ಮೀಸಲಾತಿ ಉಣ್ಣುತ್ತಿದ್ದ ಈ ದೇಶ[...] ಭಕ್ತರು ಈ ದೇಶವನ್ನು ಮುನ್ನಡೆಸುವಲ್ಲಿ ಸೋತಿರುವುದು ನಮ್ಮ ಕಣ್ಣ[...] ಮುಂದೇ ಇದೆ. ಇವರಿಗೆ ದೇಶವನ್ನು ರಕ್ಷಿಸಲಾಗುವುದಿಲ್ಲ. ಉತ್ಪಾದನ[...] ಮಾಡಲಾಗುವುದಿಲ್ಲ. ಅಕ್ಷರವನ್ನೇ ಗುತ್ತಿಗೆ ಮಾಡಿಕೊಂಡಿದ್ದ ಇವರಿಗ[...] ಒಂದು ನಾಗರಿಕ ಸಂವಿಧಾನ ರಚನೆಯೂ ಸಾಧ್ಯವಾಗಲಿಲ್ಲ[...] ಇವರೆಲ್ಲಾ ವಿಕೃತಗೊಳಿಸಿ ಆರಾಧಿಸುತ್ತಿರುವ ರಾಮಾಯಣ ಮಹಾ[...]ಭಾರತಗಳನ್ನೂ ಇವರಿಗೆ ದಲಿತರೇ ಬರೆದು ಕೊಡಬೇಕಾಯಿತು. ಪ್ರತಿ[...] ಒಲಂಪಿಕ್ಸ್‌ಗಳಲ್ಲೂ ಈ ನಾಡಿನ ಮೂಲ ನಿವಾಸಿಗಳಷ್ಟೇ ಈ ದೇಶದ[...] ಮರ್ಯಾದೆಯನ್ನು ಉಳಿಸಬೇಕಾಗಿದೆ. ಪ್ರತಿಭೆ ಬಗೆಗೆ ಉದ್ದುದ್ದ[...] ಮಾತನಾಡುವ ಇವರಿಗೆ, ಹೊಲದ ಒಂದು ಬದುವಿನಿಂದ[...] ಇನ್ನೊಂದು ಬದುವಿಗೆ ನೇಗಿಲಿನಿಂದ ಇಂಚು ಪಟ್ಟಿ ಹಿಡಿದು ಗೆರೆ[...] ಎಳೆದಂತೆ ಸಾಲು ಹೊಡೆಯುವ ರೈತ ಪ್ರತಿಭಾವಂತನಂತೆ ಕಾಣುವು[...]ದಿಲ್ಲ. ಒಂದು ಸಣ್ಣ ಹಾಳೆಯಲ್ಲೂ ಇಂಚು ಪಟ್ಟಿಯಿಲ್ಲದೆ ನೇರ ಗೆರೆ[...] ಎಳೆಯಲಾರದ ಇಂಜಿನಿಯರ್ ಪ್ರತಿಭಾವಂತನನಂತೆ ಕಾಣುತ್ತಾನೆ! ಇಂಥ ಜಾಣ ಕುರುಡಿಗೆ ಏನೆನ್ನಬೇಕು?

ಭಾರತ ಇಂದು ಜಾಗತಿಕ ಮಟ್ಟದಲ್ಲಿ ಇಷ್ಟು ಪ್ರಮಾಣದಲ್ಲಿ ತಲೆ ಎತ್ತಿ ನಿಲ್ಲಲು ಸಾಧ್ಯವಾದದ್ದು ಸ್ವಾತಂತ್ರ್ಯಾನಂತರ ತಳ ಸಮುದಾಯಕ್ಕೆ ಸಿಕ್ಕ ಅವಕಾಶಗಳಿಂದ ಮಾತ್ರ. ತಳ ಸಮುದಾಯದ ನಿರಂತರ ದುಡಿಮೆಯೇ ಭಾರತವನ್ನು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದೆ. ದೇಶದ ಮುಖ್ಯ ವಾಹಿನಿಯಲ್ಲಿ ತಳ ಸಮುದಾಯಗಳು ಪರಿಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಭಾರತ ಅತ್ಯಂತ ಬಲಿಷ್ಟ ರಾಷ್ಟ್ರವಾಗಿ ಹೊರಹೊಮ್ಮುವುದು ಸಾಧ್ಯ.

ಮಾತೆತ್ತಿದರೆ ಅಮೆರಿಕಾದತ್ತ ಮುಖ
ಡುವ ನಮ್ಮ ಐಟಿ-ಬಿಟಿ ಜನಗಳು ಅಲ್ಲಿನ
ರ್ಸಿಟಿ ಮತ್ತು ಅಫರ್‌ಮೇಟಿವ್ ಆ್ಯಕ್ಷನ್'
ರ್ಯಕ್ರಮಗಳ ಬಗ್ಗೆ ಮಾತ್ರ ಕಂಡೂ ಕಾಣ
ತೆ ಮಾಡುತ್ತಾರೆ. ಅಮೆರಿಕದಲ್ಲಿ ಅಲ್ಲಿನ ಕರಿ
ರು ಮತ್ತು ಮೂಲ ನಿವಾಸಿಗಳಿಗಾಗಿ
ರ್ಕಾರ ಕಟ್ಟು ನಿಟ್ಟಿನ 'ಮೀಸಲಾತಿ' ಕ್ರಮ
ಪಿಸಿದೆ. ಸರ್ಕಾರ ಹಾಗೂ ಖಾಸಗಿ ಕ್ಷೇತ್ರ
ರಡರಲ್ಲೂ ಸಮರ್ಥವಾಗಿ ಅದನ್ನು ಜಾರಿಗೆ
ಲಾಗಿದ್ದು, ಹಾಲಿವುಡ್‌ನಂಥ ಸಿನಿಮಾ
ದಲ್ಲೂ ಈ ಕಾರ್ಯಕ್ರಮ ಸಮರ್ಥವಾಗಿ
ರಿಯಾಗುತ್ತಿದೆ. ಜಗತ್ತಿನ ನಂ.೧ ಶ್ರೀಮಂತ
ನಿಸಿಕೊಂಡಿರುವ ಮೈಕ್ರೋ ಸಾಫ್ಟ್
ಪನಿಯ ಬಿಲ್‌ಗೇಟ್ಸ್ ತನ್ನ ಕಂಪೆನಿಯಲ್ಲಿ
ನ ಕರಿಯರು ಮತ್ತು ಮೂಲ ನಿವಾಸಿ
ಗೆ ಅವಕಾಶ ಮಾಡಿಕೊಟ್ಟಿದ್ದಾನೆ. ಅಷ್ಟೇ
ತಾನು ಜಗತ್ತಿನ ನಂ.೧ ಶ್ರೀಮಂತ
ಗಲು ಇಲ್ಲಿನ ಕರಿಯರು ಮತ್ತು ಮೂಲ
ವಾಸಿಗಳಿಗೆ ತನ್ನ ಸಂಸ್ಥೆಯಲ್ಲಿ ಅವಕಾಶ
ಮಾಡಿಕೊಟ್ಟಿದ್ದೇ ಕಾರಣ ಎಂದು ಹೇಳಿ
ಕೊಂಡಿದ್ದಾನೆ. ಆದರೆ ಬಿಲ್‌ಗೇಟ್ಸ್‌ನ ಖಾಸ
ದೋಸ್ತಿಗಳೆಂದು ಬೀಗುವ ಇನ್ಫೋಸಿಸ್‌ನ
ನಾರಾಯಣಮೂರ್ತಿ, ವಿಪ್ರೋ ಪ್ರೇಂಜಿಗಳಿ
ಗೆ ಇದು ಅರ್ಥವಾಗುತ್ತಿಲ್ಲ! ಮೀಸಲಾತಿ
ನೀಡಿದರೆ ಗುಣಮಟ್ಟ ಹಾಳಾಗುವುದೆಂದು ಬಾಯಿ
ಬಡಿಯುವ ಇವರುಗಳಿಗೆ 'ಪ್ರತಿಭೆ'ಯನ್ನು
ಗುರುತಿಸಿಕೊಳ್ಳುವ 'ಪ್ರತಿಭೆ'ಯೇ ಇಲ್ಲ ಅನ್ನುವುದು
ಇದರಿಂದ ಸ್ಪಷ್ಟವಾಗುತ್ತದೆ. ಅಭಿವೃದ್ಧಿಯ ಆಧುನಿಕ
ಮಾನದಂಡಗಳಾದ ವಿಜ್ಞಾನ-ತಂತ್ರಜ್ಞಾನಗಳ
ಬಾಗಿಲು ತಳ ಸಮುದಾಯಕ್ಕೆ ತೆರೆದಾಗ ಮಾತ್ರ
ದೇಶ ಬಲಿಷ್ಠವಾಗಲು ಸಾಧ್ಯ ಎನ್ನುವುದಕ್ಕೆ ಇದ
ಕ್ಕಿಂತ ಬೇರೆ ಉದಾರಹರಣೆ ಬೇಕೆ?

ಉನ್ನತ ಶಿಕ್ಷಣದಲ್ಲಿ ಸಮಾಜದ ಎಲ್ಲ
ವರ್ಗಗಳಿಗೆ ಜಾತಿಗಳಿಗೆ ಅವರ ಜನಸಂಖ್ಯೆಗೆ
ಅನುಗುಣವಾಗಿ ಮೀಸಲಾತಿಯನ್ನು ನೀಡಲೇ
ಬೇಕು. ದೇಶದ ಅಸಮಾನ ಸಾಮಾಜಿಕ ವ್ಯವಸ್ಥೆಗೆ
ಚಿಕಿತ್ಸೆ ನೀಡಲು ಇದು ಅನಿವಾರ್ಯವಾಗಿ
ಮಾಡಲೇ ಬೇಕಾದ ಕೆಲಸ. ಹಾಗೆ ಮೀಸಲಾತಿ ನೀಡುವ
ಮೂಲಕ ಕೆಲವೇ ಜನರ ಕಪಿಮುಷ್ಟಿಯಲ್ಲಿ ಸಿಲುಕಿ
ನರಳುತ್ತಿರುವ ಉನ್ನತ ಶಿಕ್ಷಣ ನಿಜವಾದ ಪ್ರತಿಭಾ
ವಂತರಿಗೆ ತೆರೆದುಕೊಳ್ಳತ್ತದೆ. ಆ ಮೂಲಕ ವಿಕಸನ
ಗೊಳ್ಳುವ ಪ್ರತಿಭೆ ಇಡೀ ದೇಶದ ಪ್ರಗತಿಗೆ ಬಹುದೊಡ್ಡ
ಕೊಡುಗೆಯನ್ನು ನೀಡುತ್ತದೆ. ಜನ ಸಂಖ್ಯೆ ಆಧಾರಿತ
ಅವಕಾಶಗಳ ಹಂಚಿಕೆಯಿಂದ ಯಾರಿಗೂ ಅನ್ಯಾಯ
ವಾಗುವುದಿಲ್ಲ. ಬದಲಾಗಿ ಅಲಕ್ಷಿತ ಜನ ಸಮುದಾಯಕ್ಕೆ,
ಅವಕಾಶ ವಂಚಿತ ಪ್ರತಿಭೆಗಳಿಗೆ ನ್ಯಾಯ ಒದಗಿಸಿ
ದಂತಾಗುತ್ತದೆ. ನಿಜವಾಗಿಯೂ ಪ್ರತಿಭೆಗೆ ಮಾತ್ರ
ಮನ್ನಣೆ ಬೇಕೆಂದರೆ ಸರ್ಕಾರ ಮೊದಲು ಈ ಕೆಲಸಕ್ಕೆ
ಮುಂದಾಗಬೇಕಾಗಿದೆ. 'ಪ್ರತಿಭೆ'ಯ ಗುತ್ತಿಗೆದಾರರಾದ
'ದೇಶ ಭಕ್ತರೂ' ಇದಕ್ಕೆ ಸಹಕರಿಸಬೇಕಾಗಿದೆ.

ದೆಹಲಿ ವಿ.ವಿ ಉನ್ನತ ಶಿಕ್ಷಣದಲ್ಲಿನ ಸೀಟುಗಳ ವಿವರ

ಕೋರ್ಸ್‌ಗಳು	ಒಟ್ಟು ಸೀಟು	ಎಸ್.ಸಿ.ಗಳಿಗೆ ದೊರೆತದ್ದು (ಶೇ.ವಾರು)	ಎಸ್.ಟಿ. ಗಳಿಗೆ ದೊರೆತದ್ದು (ಶೇ.ವಾರು)
ಪದವಿ	೬೮,೯೯,೧೦೦	೮.೩೭	೩.೦೦
ಸ್ನಾತಕೋತ್ತರ	೭,೫೮,೦೦೦	೮.೦೦	೧.೪೦
ಸಂಶೋಧನೆ	೬೮,೩೯೯	೨,೭೭	೧.೦೦
ಒಟ್ಟು	೭೭,೩೩,೬೧೨	೮.೧೮	೨.೦೦

(ಎಸ್.ಸಿ/ಎಸ್.ಟಿ ಗಳಿಗೆ ನಿಗದಿ ಪಡಿಸಿದಂತೆ ಒಟ್ಟು ಶೇ.೨೨.೫ರಷ್ಟು ಸ್ಥಾನಗಳು ಸಿಗಬೇಕಾಗಿತ್ತು. ಸಿಕ್ಕಿರುವುದು ಕೇವಲ ಶೇ.೧೦.೧೮ ಮಾತ್ರ)
ಮಾಹಿತಿ: ಪರಿಶಿಷ್ಟ ಜಾತಿ/ವರ್ಗಗಳ ರಾಷ್ಟ್ರೀಯ ಆಯೋಗದ ಆರನೇ ವರದಿ ೧೯೯೯-೨೦೦೦ ಮತ್ತು ೨೦೦೦-೨೦೦೧

ಮೀಸಲಾತಿಯ ಬಗ್ಗೆ ತಲೆತಟ್ಟಿಗೆ ಒಂದೊಂದು ಅಭಿಪ್ರಾಯ-ಮಾತುಗಳು ಕೇಳುಬರುತ್ತಿವೆ. ಆದರೆ ತಳ ಸಮುದಾಯಗಳಲ್ಲಿ ಹುದುಗಿರುವ ಅಗಾಧ ಪ್ರತಿಭೆಯನ್ನು ಹೆಕ್ಕಿ ತೆಗೆಯಲು ಮೀಸಲಾತಿಗಿಂತ ಬೇರೊಂದು ಉತ್ತಮ ಮಾರ್ಗ ನಮ್ಮ ಮುಂದೆ ಸದ್ಯಕ್ಕಂತೂ ಇಲ್ಲ. ಸಾವಿರಾರು ವರ್ಷಗಳಿಂದ ನಿರಂತರ ದೌರ್ಜನ್ಯದಿಂದ ಹೆಪ್ಪುಗಟ್ಟಿರುವ ಈ ಪ್ರತಿಭೆಗೆ ಅವಕಾಶ ಒದಗಿಸಿಕೊಡುವುದೇ ಈಗ ಆಗ ಬೇಕಾಗಿರುವ ಕೆಲಸ. ಅದೇ ನಿಜವಾದ ದೇಶ ಸೇವೆ. ಪ್ರಗತಿಯ ಇನ್ನೊಂದು ಹೆಸರೇ ಮೀಸಲಾತಿ. ಮೀಸ ಲಾತಿಯ ಇನ್ನೊಂದು ಹೆಸರೇ ಪ್ರತಿಭಾನ್ವೇಷಣೆ.

ಮೀಸಲಾತಿಗೆ ಕಾಲ ಮಿತಿ ಬೇಡವೇ? ಎಂದು ಬಹಳ ಜನ ವಾದಿಸುತ್ತಾರೆ. ಇದು ಆಕರ್ಷಕ ವಾದ ಕೂಡ. ಆದರೆ ಹೀಗೆ ಪ್ರಶ್ನೆ ಮಾಡುವ ಜನ ಎಂದಾದರೂ ಮೀಸಲಾತಿ ಪ್ರಾಮಾಣಿಕವಾಗಿ ಜಾರಿಯಾಗಿದೆಯೇ? ಎಂದು ಪ್ರಶ್ನಿಸಿಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ. ನನ್ನ ಮುಂದಿರುವ ಅಂಕಿ ಅಂಶಗಳಂತೂ ಇಡೀ ಮೀಸಲಾತಿ ಕೇವಲ ಕಣ್ಣೊರೆಸುವ ತಂತ್ರವಾಗಿ ಮಾತ್ರ ಚಾಲ್ತಿಯಲ್ಲಿದೆಯೇ ಹೊರತು ಪ್ರಾಮಾಣಿಕ ಪ್ರಯತ್ನವಾಗಿ ಅಲ್ಲ ಎಂಬುದನ್ನು ಸಾರಿ ಹೇಳುತ್ತಿವೆ. ಮೀಸಲಾತಿಯನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಬಹುತೇಕ ಮೇಲ್ಜಾತಿಯ ಜನರೇ ತುಂಬಿರುವುದರಿಂದ ವ್ಯವಸ್ಥಿತವಾಗಿ ಅದು ಜಾರಿಯಾಗದಂತೆ ತಡೆ ಯಲಾಗುತ್ತಿದೆ. ಇರುವ ಮೀಸಲಾತಿಯೇ ಜಾರಿಯಾಗದಿರುವಾಗ, ಮೀಸಲಾತಿ ಎಷ್ಟು ದಿನ ಮುಂದುವರೆಸಬೇಕೆಂದು ಕೇಳುವುದು ಅಸಂಬದ್ಧ ಹಾಗೂ ಕುಹಕದ ಪ್ರಶ್ನೆಯಾ ಗುತ್ತದೆ. ಸಮಾಜದಲ್ಲಿ ಸಾಮಾಜಿಕ ಅಸಮಾ ನತೆ ಇರುವವರೆಗೂ ಮೀಸಲಾತಿ ಇರಲೇ ಬೇಕಾಗುತ್ತದೆ.

ಇದೇ ಪುಟದಲ್ಲಿರುವ ಕೋಷ್ಟಕವನ್ನು ನೋಡಿದರೆ ಮೀಸಲಾತಿ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎನ್ನುವುದರ ಒಂದು ಸ್ಪಷ್ಟ ರೂಪ ನಿಮಗೆ ಸಿಗಬಹುದು. ಶಿಕ್ಷಣ ನೀಡಿಕೆ ಯಲ್ಲೇ ಇಷ್ಟೊಂದು ಅಸಮಾನತೆ ಇದ್ದರೆ ನೌಕರಿ ಮತ್ತಿತರ ಕ್ಷೇತ್ರಗಳ ಪಾಡೇನಾಗಿರ ಬಹುದು? ನೀವೇ ಯೋಚಿಸಿ.

ಮೀಸಲಾತಿಯೊಂದಿಗೆ ಸಮಾನ ಶಿಕ್ಷಣ ನೀತಿ ಕಡ್ಡಾಯವಾಗಿ ಜಾರಿಯಾಗ ಬೇಕು. ಎಲ್ಲ ಜಾತಿ-ವರ್ಗಗಳ ವಿದ್ಯಾರ್ಥಿಗಳಿಗೆ ಒಂದೇ ಬಗೆಯ ಶಿಕ್ಷಣ ದೊರೆಯಬೇಕು. ಜಾತಿ, ಮತ, ಧರ್ಮ, ಪ್ರದೇಶ, ಭಾಷೆ ಇತ್ಯಾದಿ ಅಸಮಾನ ತೆಗಳ ಮೂಲಕ ನೀಡಲಾಗುತ್ತಿರುವ ಈಗಿನ ಅಸಮಾನ ಶಿಕ್ಷಣ ವ್ಯವಸ್ಥೆ ಕೂಡಲೇ ರದ್ದಾಗ ಬೇಕು. ಇದು ಮೀಸಲಾತಿ ನೀಡುವಿಕೆಯಷ್ಟೇ ಪ್ರಮುಖ ಆದ್ಯತೆಯಾಗಬೇಕು.

ಈ ಎಲ್ಲದರ ಜತೆಗೆ ವ್ಯವಸ್ಥೆ ಒಂದು ಕಡೆ ದಲಿತರು ಮತ್ತು ಹಿಂದುಳಿದವರ ವಿರುದ್ಧ ಪಿತೂರಿ ಮಾಡುತ್ತಿದ್ದರೆ. ಮತ್ತೊಂದೆಡೆ ಈ ಪಿತೂರಿಯ ಭಾಗವಾಗಿ, ಸಾಂವಿಧಾನಿಕ ಸವಲತ್ತುಗಳು ತಳಸಮುದಾಯದವರಿಗಾಗಿ ಸಿಗದಂತೆ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವ ಅಧಿಕಾರಶಾಹಿ ಯಾವುದೇ ಶಿಕ್ಷೆಯಿಲ್ಲದೆ ತಪ್ಪಿಸಿಕೊಳ್ಳುತ್ತಿದೆ. ಸಂವಿಧಾನ ದತ್ತವಾದ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ವಿಫಲರಾಗುವ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ನೀಡಿದಾಗ ಮಾತ್ರ ಸಂವಿಧಾನದ ಆಶಯಗಳು ಈಡೇರಲು ಸಾಧ್ಯ. ಉತ್ತರದಾಯಿತ್ವವಿಲ್ಲದ ಯಾವುದೇ ಕಾರ್ಯಕ್ರಮಗಳು ಸಫಲವಾಗುವುದಿಲ್ಲ. ಈ ನಿಟ್ಟಿನಲ್ಲಿ ಪ್ರಮಾಣಿಕ ಕ್ರಮಕ್ಕೆ ಸರ್ಕಾರ ಮುಂದಾಗಬೇಕು. ಅದಕ್ಕೆ ಸಾರ್ವಜನಿಕರೂ ಕೈ ಗೂಡಿಸಬೇಕು.

○ ಇಂದೂಧರ ಹೊನ್ನಾಪುರ

ಹೈಟೆಕ್ ಮಾಲ್‌ಗಳೂ ಕಳಪೆ ಸಾಮರ್ಥ್ಯವೂ

ಪಿ. ಸಾಯಿನಾಥ್
ಅನು: ಸತ್ಯಪ್ರಕಾಶ್ ಎಂ.ಆರ್
ಎಸ್. ಕೃಷ್ಣಮೂರ್ತಿ ರಾವ್

"ಅಭಿವೃದ್ಧಿ ಪಥದಲ್ಲಿ ನಾವು ಇತರ ರಾಜ್ಯಗಳಿಗಿಂತ ಹಿಂದುಳಿದಿದ್ದೇವೆ. ಇಡೀ ಕೇರಳ ರಾಜ್ಯವನ್ನು ನಾವು ಇನ್ನೊಂದು ಬೆಂಗಳೂರನ್ನಾಗಿಸಬೇಕು". ಇದು ಇತ್ತೀಚೆಗೆ ಕೇರಳದಲ್ಲಿ ನಡೆದ ಚುನಾವಣಾ ಪ್ರಚಾರಗಳಲ್ಲಿ ಚರ್ಚೆಗೊಳಗಾದ ಪ್ರಮುಖ ವಿಷಯ. ಕೇರಳವನ್ನು ದುಬೈ ರೂಪಕದಲ್ಲಿ ನೋಡುವ ಧೋರಣೆಗಿಂತ ಇದು ಭಿನ್ನವಾದ ಯೋಜನೆಯಿರಬಹುದು. ಬಹುಶಃ ಮುಂಬೈ ನಗರವನ್ನು ಷಾಂಗೈ ನಗರವನ್ನಾಗಿಸುವ ಕನಸಿನಷ್ಟು ಅಸಂಬದ್ಧವಾದುದಲ್ಲ ಈ ದೃಷ್ಟಿಕೋನ. ಇತರರಂತಾಗುವ ಕನಸನ್ನು ಪಕ್ಕಕ್ಕಿಟ್ಟು ನೋಡಿದರೂ ಈಗಾಗಲೇ ಚಾಲ್ತಿಯಲ್ಲಿರುವ ರೇಸ್‌ಗೆ ಕೇರಳ ಹೊಸ ಸೇರ್ಪಡೆಯಷ್ಟೆ.

ಭಾರತದಲ್ಲಿ ಅಭಿವೃದ್ಧಿ ಬಗೆಗಿನ ಚರ್ಚೆ ದಶಕಗಳ ಹಿನ್ನಡೆ ಕಂಡಿದೆ. ಏಕಮುಖಿ ಅಭಿವೃದ್ಧಿ ವಾದವನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಇಂತಹ ಅಭಿವೃದ್ಧಿ ಮಾದರಿಗಳು ಯಶಸ್ವಿಯಾಗುತ್ತದೆಯೋ, ಇಲ್ಲವೋ ಎಂಬುದು ನಿಜವಾಗಿ ಚರ್ಚೆಗೊಳಗಾಗಬೇಕಾದ ವಿಷಯ. ಆದರೆ ದುರದೃಷ್ಟವಶಾತ್ ಸರ್ವಸಮ್ಮತವಾದ ಮಾದರಿಯನ್ನು ಪ್ರಶ್ನಿಸುವ ಪ್ರಯತ್ನ ವೈರುಧ್ಯದ ಸಂಕೇತವಾಗಿಬಿಡುತ್ತದೆ. ಜನರ ನೀರನ್ನು ಬರಿದು ಮಾಡಿ, ವಿಷತುಂಬುವ ಕೋಕಾ ಕೋಲಾದಂತಹ ಕಂಪನಿಗಳನ್ನು ವಿರೋಧಿಸಿದರೆ ಅದು ಅಭಿವೃದ್ಧಿ ವಿರೋಧಿ ಧೋರಣೆ ಎನಿಸಿಕೊಳ್ಳುತ್ತದೆ!

ಮುಖ್ಯಮಂತ್ರಿ ಈ ಮಾಜಿ ಓಮನ್ ಚಾಂದಿ ಹೇಳುವಂತೆ, ನಿರುದ್ಯೋಗ ಕೇರಳ ರಾಜ್ಯವನ್ನು ಕಾಡುತ್ತಿರುವ ಗಂಭೀರ ಸಮಸ್ಯೆಗಳಲ್ಲೊಂದು ಎನ್ನುವುದು ಅಕ್ಷರಶಃ ಸತ್ಯ. ಆದರೆ ಯುಡಿಎಫ್ ಕೇರಳವನ್ನು ಮತ್ತೊಂದು ಬೆಂಗಳೂರನ್ನಾಗಿಸುವ ಆಲೋಚನೆ ಹೊಂದಿದೆ ಎಂಬ ಮಾತನ್ನೂ ಅವರು ಆಡುತ್ತಾರೆ. ಇದು ಚಾಂದಿ ಅವರ ಅಭಿವೃದ್ಧಿಯ ವಿಚಾರ ಲಹರಿ! ಯಾವುದೇ ಅಭಿವೃದ್ಧಿ ಸೂಚಕಗಳಿಂದಲೂ ಕರ್ನಾಟಕ ಕೇರಳ ರಾಜ್ಯಕ್ಕಿಂತ ಮುಂದಿಲ್ಲ. ಬದಲಿಗೆ ಸಾಕ್ಷರತೆ, ಶಿಕ್ಷಣ, ಆರೋಗ್ಯ ಸ್ವಾಸ್ಥ್ಯ, ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆ, ಇವೇ ಮುಂತಾದ ಕ್ಷೇತ್ರಗಳಲ್ಲಿ ಕೇರಳ ಕರ್ನಾಟಕನ್ನು ಮೈಲು ದೂರ ಹಿಂದೆ ಹಾಕಿದೆ. ಆದರೂ ಸಹಾ ಚಾಂದಿ ಅವರ ಅಭಿವೃದ್ಧಿಯ ದೃಷ್ಟಿಕೋನ ಎಕ್ಸ್‌ಪ್ರೆಸ್ ಹೈವೇಗಳು, ಫ್ಲೈ-ಓವರ್‌ಗಳು, ಸ್ಮಾರ್ಟ್ ಸಿಟಿಗಳು ಮತ್ತು ಅದರ ಪಳೆಯುಳಿಕೆಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವುದು ವಿಪರ್ಯಾಸ. ಕೇರಳದಲ್ಲಿ ಇವ್ಯಾವುವೂ ಹೆಚ್ಚಿಗೆ ಇಲ್ಲವಲ್ಲ!

ಆದರೆ ಇಲ್ಲಿ ಅತ್ಯುತ್ತಮವಾದ ಗ್ರಾಮಾಂತರ ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ. ನೀವು ಮೈಸೂರಿನಿಂದ ವಯನಾಡ್‌ಗೆ ಮತ್ತು ವಯನಾಡ್‌ನಿಂದ ಮೈಸೂರಿಗೆ ಸಂಚರಿಸುವಾಗ, ಯಾವಾಗ ಗಡಿ ದಾಟುತ್ತೀರ ಎನ್ನುವುದನ್ನು ಗುರುತಿಸುವುದು ಸುಲಭವಾದ ವಿಷಯ. ಕಳಪೆಯಾದ ಹಳ್ಳ-ಕೊಳ್ಳಗಳ ರಸ್ತೆಗಳಾದರೆ ನೀವು ಕರ್ನಾಟಕದಲ್ಲಿದ್ದೀರ ಎಂದರ್ಥ. ಆದರೆ ಉತ್ತಮವಾದ ಗ್ರಾಮಾಂತರ ರಸ್ತೆಗಳು ಅಭಿವೃದ್ಧಿಯ ಸಂಕೇತಗಳಾಗುವುದಿಲ್ಲವಲ್ಲ? ಏನಿದ್ದರೂ ಬೃಹತ್ ಟ್ರಾಫಿಕ್ ಜಾಮ್‌ಗಳು ಮಾತ್ರ ಅಭಿವೃದ್ಧಿಯ ಸಂಕೇತವಾಗಬಹುದಷ್ಟೆ.

ನಿಯಂತ್ರಣ ತಪ್ಪಿದ ವಾಹನದಟ್ಟಣೆ, ಸಾಧಾರಣವಾದ ಸಾರ್ವಜನಿಕ ಸಂಚಾರ ವ್ಯವಸ್ಥೆ ಮತ್ತು ಖಾಸಗಿ 'ನಗರ'ಗಳಿಂದಾಗಿ ಬೆಂಗಳೂರಿನ ತಾಂತ್ರಿಕ ಯಶಸ್ಸುಸೊರಗಿಹೋಗಿದೆ. ಒಟ್ಟಾರೆ ಇದು ಅಸಮರ್ಥ ಹೈಟೆಕ್ ನಿವಾಸಿಗಳ ಕರಾಳ ನಗರ.

ಕೇರಳದ ಜನ ಉತ್ತಮವಾದ ಶಿಕ್ಷಣ ಮತ್ತು ಆರೋಗ್ಯದ ಫಲಾನುಭ ಪಡೆದವರು. ಇಡೀ ದೇಶದಲ್ಲೇ ವೈದ್ಯರಿಗಿಂತ ಹೆಚ್ಚು ನರ್ಸ್‌ಗಳನ್ನು ಸೃಷ್ಟಿಸು ರಾಜ್ಯ ಕೇರಳ. ಇಲ್ಲಿನ ನರ್ಸ್‌ಗಳು ಎಲ್ಲೆಡೆ ಇದ್ದಾರೆ. ಉನ್ನತ ಶಿಕ್ಷ ಪಡೆದ ಸಮರ್ಥ ನರ್ಸ್‌ಗಳು ಒಂದು ಕಾಲದ ಉತ್ತಮ ಶಿಕ್ಷಣ ವ್ಯವಸ್ಥೆ ಫಲಶ್ರುತಿ. ಆದರೆ ಇತ್ತೀಚೆಗೆ ಕೇರಳ ಕೂಡ ಕರ್ನಾಟಕದಂತೆ ಶಿಕ್ಷ ವ್ಯವಸ್ಥೆಯನ್ನು ವ್ಯಾಪಾರೀಕರಣಗೊಳಿಸುವ ಪ್ರಯತ್ನ ನಡೆಸಿತ್ತು. ಓಮ ಚಾಂದಿ ಅವರ ವಾದ ಇಷ್ಟೇ; ದುಬಾರಿ ಕೋರ್ಸ್‌ಗಳಿಗಾಗಿ ಕರ್ನಾಟಕ ವಲಸೆ ಹೋಗುತ್ತಿರುವ ಕೇರಳದ ವಿದ್ಯಾರ್ಥಿಗಳಿಂದ ಬರುವ ಆದಾಯವ ಕಳೆದುಕೊಳ್ಳುವುದೇಕೆ? ಅದನ್ನು ನಾವು ಇಲ್ಲೇ ಕಬಳಿಸಬಹುದಲ್ಲವೇ?

ಅದಕ್ಕಿಂತ ಉತ್ತಮ ದಾರಿಗಳೂ ಇಲ್ಲವೆಂದಿಲ್ಲ. ಮೂಲತಃ ಕೇರಳ ಯಶಸ್ಸಿಗೆ ಕಾರಣವಾದ ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ವಿಸ್ತರಿಸಿ ಬೆಳೆಸಬ ದಾಗಿತ್ತು. ಆದರೆ ಅದು ಅಭಿವೃದ್ಧಿ ವಿರೋಧಿ ನೀತಿಯಾಗುವುದಲ್ಲಾ? ಮಧ್ಯೆ ಕೃಷಿ ಸಂಬಂಧಿ ತೊಂದರೆಗಳಿಂದ ನೂರಾರು ಆತ್ಮಹತ್ಯೆಗಳು ಕೇ ಳದಲ್ಲಿ ನಡೆದಿವೆ. ಇಂತಹವರ ಮತ್ತು ಇವರಂತೆ ದಿವಾಳಿಯೆದ್ದ ರೈತ ಮಕ್ಕಳು ಕರ್ನಾಟಕದ ವ್ಯಾಪಾರಿ ವಿದ್ಯಾ ಸಂಸ್ಥೆಗಳಿಂದ ಬಲವಂತವಾ ಹೊರಬರುವಂತಾಗಿದೆ. ಶುಲ್ಕ ಪಾವತಿಸಲಾಗದೆ, ಠೇವಣಿ ಕಳೆದುಕೊಂಡ ಅರೆಬರೆ ವಿದ್ಯಾಭ್ಯಾಸ ಮುಗಿಸಿ ವಿದ್ಯಾರ್ಥಿಗಳು ಕಾಲೇಜು ಬಿಡುವಂತಾಗಿದ ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಶಾಲಾ ಸರ್ಟಿಫಿಕೇಟ್‌ಗಳನ್ನು ಹಿಂದಿರು ಪಡೆಯಲಾಗುವುದಿಲ್ಲ. ಕಾಲೇಜುಗಳು ಸಹಾ ಈಗಾಗಲೇ ಕಂಗಾಲಾಗಿರು ವಿದ್ಯಾರ್ಥಿಗಳಿಂದ ಇನ್ನಷ್ಟು ಹಣ ಬಾಚಿಕೊಳ್ಳಲು ಸರ್ಟಿಫಿಕೇಟ್‌ಗಳನ್ನು ನೀಡದೆ ಸತಾಯಿಸುತ್ತವೆ. ಇಂತಹ ವಿದ್ಯಾರ್ಥಿಗಳು ಎಲ್ಲಿಯೂ ಸಲ್ಲದವರಾಗುತ್ತಾರೆ. ತಾಯ್ನಾಡಿನ ಖಾಸಗಿ ಕಾಲೇಜುಗಳೂ ಇವರ ಕೈಗೆಟುಕುವುದಿಲ್ಲ ಭಾರತದ ಅದ್ಭುತ ನರ್ಸ್‌ಗಳ ಸಂಪತ್ತು ಈ ರೀತಿ ನಶಿಸಿಹೋಗುತ್ತಿದೆ

ಹಿಂದೊಮ್ಮೆ 'ಉದ್ಯಾನನಗರಿ'ಯಾಗಿದ್ದ ಬೆಂಗಳೂರು ಈ ಕಾಂಕ್ರೀಟ್ ಕೊಂಪೆಯಾಗಿ ಬೆಳೆಯುತ್ತಲೇ ಇದೆ. ಬಹಳಷ್ಟು ಕೆರೆಗಳನ್ನು ನುಂಗಿ ನೀರು ಕುಡಿದು ರಿಯಲ್ ಎಸ್ಟೇಟ್ ದಂಧೆ ಬೃಹದಾಕಾರವಾ ಬೆಳೆದು ನಿಂತಿದೆ. ಕೆರೆಗಳನ್ನೆಲ್ಲಾ ಬರಿದು ಮಾಡಿರುವುದರಿಂದ ವರ್ಷಪೂರ್ತಿ ನೀರಿನ ಸಮಸ್ಯೆಯಿಂದ ಬಳಲುವ ಲೆಕ್ಕವಿಲ್ಲದಷ್ಟು ಪ್ರದೇಶಗಳು ಇಲ್ಲಿವೆ ಮಳೆಗಾಲದಲ್ಲಿ ತತ್ತರಿಸುವ ಬಡಾವಣೆಗಳೂ ಸಾಕಷ್ಟಿವೆ. ಯಾಕೆಂದರೆ ಕೆರೆಗಳ ಮೇಲಲ್ಲವೇ ಕಟ್ಟಡಗಳೆದ್ದಿರುವುದು?! ಇದು ಮೂರ್ಖತನವಲ್ಲದೆ ಇನ್ನೇನು? ಆದರೂ ನಾವು ಇಂತಹ ಅಭಿವೃದ್ಧಿ ವಾದವನ್ನೇ ಒಪ್ಪಿಕೊಂಡಿದ್ದೇವೆ

ಮಾಧ್ಯಮದವರಿಗೆ ತಾಂತ್ರಿಕ ಬೆಳವಣಿಗೆಯಷ್ಟೇ ಅಭಿವೃದ್ಧಿ. ಮನುಷ್ಯ ಜೀವನಮಟ್ಟದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ತಂತ್ರಜ್ಞಾನದ ಸಾಮರ್ಥ್ಯದ ಪರೀಕ್ಷೆಗಳೂ ನಡೆಯುವುದಿಲ್ಲ. ಆದರೂ ಇಂತಹ ತಂತ್ರಜ್ಞಾನವಿಲ್ಲದ ಅಭಿವೃದ್ಧಿ ಕೆಲಸಗಳು ನಡೆಯುವುದಿಲ್ಲ. ಉದಾಹರಣೆಗೆ ಜನರ ನೀರಿನ ಅವಶ್ಯಕತೆಗಳನ್ನು ಪೂರೈಸುವ ಸ್ಥಳೀಯವಾದ ಪರಿಹಾರ ಮಾರ್ಗಗಳಿದ್ದರೂ ಅವು ಅಭಿವೃದ್ಧಿಪರ ಮಾರ್ಗಗಳಾಗಿರುವುದಿಲ್ಲ. ಆದರೆ ನೀವು ನಿಮ ಆಂತರಿಕ ಉತ್ಪನ್ನದ ಕಾಲು ಭಾಗವನ್ನು ಅಸಂಬದ್ಧವಾದ ನದಿ ಜೋಡಣ ಯೋಜನೆಗೆ ರಾಷ್ಟ್ರಮಟ್ಟದಲ್ಲಿ ವಿನಿಯೋಗಿಸಿದರೆ ಅದು ಅಭಿವೃದ್ಧಿಯೆನಿಸಿ ಕೊಳ್ಳುತ್ತದೆ. ಇಂತಹ ಯೋಜನೆಗಳ ಫಲಿತಾಂಶ ಏನಾಗುತ್ತದೆ ಎಂದು ಯಾವ ನರಪಿಳ್ಳೆಗೆ ಗೊತ್ತಿಲ್ಲದಿರುವುದು ಅಚ್ಚರಿಯ ವಿಷಯವಲ್ಲ. ಬೃಹತ್ ಕಾರ್ಪೊರೇಟ್ ಆಸ್ಪತ್ರೆಗಳು ಅಭಿವೃದ್ಧಿಯ ನಿಜವಾದ ಸಂಕೇತ! ಪ್ರಾಥಮಿಕ

ವಿಚಾರ

ಹಿಂದೊಮ್ಮೆ 'ಉದ್ಯಾನ ನಗರಿ'ಯಾಗಿದ್ದ ಬೆಂಗಳೂರು ಈಗ ಕಾಂಕ್ರೀಟ್ ಕೊಂಪೆಯಾಗಿ ಬೆಳೆಯುತ್ತಲೇ ಇದೆ. ಬಹಳಷ್ಟು ಕೆರೆಗಳನ್ನು ನುಂಗಿ ನೀರು ಕುಡಿದು ರಿಯಲ್ ಎಸ್ಟೇಟ್ ದಂಧೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಕೆರೆಗಳನ್ನೆಲ್ಲಾ ಬರಿದು ಮಾಡಿರುವುದರಿಂದ ವರ್ಷಪೂರ್ತಿ ನೀರಿನ ಸಮಸ್ಯೆಯಿಂದ ಬಳಲುವ ಲೆಕ್ಕವಿಲ್ಲದಷ್ಟು ಪ್ರದೇಶಗಳು ಇಲ್ಲಿವೆ. ಮಳೆಗಾಲದಲ್ಲಿ ತತ್ತರಿಸುವ ಬಡಾವಣೆಗಳೂ ಸಾಕಷ್ಟಿವೆ. ಯಾಕೆಂದರೆ ಕೆರೆಗಳ ಮೇಲಲ್ಲವೇ ಕಟ್ಟಡಗಳೆದ್ದಿರುವುದು?! ಇದು ಮೂರ್ಖತನವಲ್ಲದೆ ಇನ್ನೇನು? ಆದರೂ ನಾವು ಇಂತಹ ಅಭಿವೃದ್ಧಿ ವಾದವನ್ನೇ ಒಪ್ಪಿಕೊಂಡಿದ್ದೇವೆ!

ೀಗ್ಯ ಕೇಂದ್ರಗಳು, ಸಣ್ಣ ದವಾಖಾನೆಗಳು ಅಲ್ಲವೇ ಅಲ್ಲ.
ಸಣ್ಣ ಗಾಯಕ್ಕೆ ಅಂಗ ಜೋಡಣೆಯ ಸಾಧ್ಯತೆ ಇದ್ದಾಗ
ಡೇಜ್‌ಗಳ ಅವಶ್ಯಕತೆ ಇದೆಯೇ?! ವೈದ್ಯಕೀಯ ಪ್ರವಾ
ರ್‍ಯಮದಿಂದ ಕೆಲವರಾದರೂ ಅಗಾಧವಾಗಿ ಹಣ ಕೊಳ್ಳೆ
ಯುವಂತಹ ಸ್ಥಿತಿಗೆನಾವಾಗಲೇ ತಲುಪಿದ್ದೇವೆ. ದಲ್ಲಾಳಿ
ಮೋಪಿಹಾಕಿ ಮಾರಾಟ ಮಾಡುವ ಸೊಳ್ಳೆನಾಶಕ ಔಷಧಿ
ಡಿಸಿರುವ ಪರದೆಗಳಿಂದ ತಂತ್ರಜ್ಞಾನಕ್ಕೆ, ಕಾರ್ಪೊರೇಟ್
ಮಧ್ಯವರ್ತಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ ತಾನೆ ಲಾಭ.
ಗೆ ಇಲ್ಲದವರಿಗೆ ಸೊಳ್ಳೆ ಪರದೆಗಳೇಕೆ ಎಂದು ನೀವು
ಡಿಸಿಕೊಳ್ಳಬಾರದು ಅಥವಾ ಮಲೇರಿಯಾ ಪರಾವಲಂಬಿ
ತೀರ ಅಸಹಕಾರಿಗಳೆನ್ನುವುದು ಕೂಡ ಮುಖ್ಯವಲ್ಲ.
ಸಮಯದಲ್ಲಿ ನೀವು ತಣ್ಣಗೆ ಮಲಗಿರುವಾಗ ಹತ್ತಿರ
ಮದ ಇವು ಬೇರೆ ಸಮಯದಲ್ಲಿ ನಿಮ್ಮ ಮೇಲೆ ಆಕ್ರಮಣ
ಬಹುದು. ಆದರೆ ಅದು ಕೂಡಇಲ್ಲಿ ಮುಖ್ಯವಲ್ಲ.
ತರ ಕೆಲಸಗಾರರು ಹೊಲ-ಗದ್ದೆಗಳಿಗೆ ಹೊರಡುವ
ವಾಪಸ್ಸಾಗುವ ಸಮಯದಲ್ಲೇ ಹೆಚ್ಚಾಗಿ ರೋಗ ತಗುಲು
ನ್ನುವುದು ಸರಳವಾದ ವಿಷಯ. ಬೇಕಾದರೆ ಆಗಲೂ
ಸೊಳ್ಳೆ ಪರದೆ ಧರಿಸಿ ಹೊಸ ಫ್ಯಾಷನ್ ಮಾಡಬಹುದು,
ನೀವು ಬಿದಿರು ಕತ್ತರಿಸುವವರಾದರೆ ಕೊಂಚ
ದೀತು.

ಯಾವುದೇ ಒಂದು ಕಾರ್ಯನಿರ್ವಹಣೆಗೆ ಏಕಮುಖಿ
ರಣೆ ಮಾತ್ರ ಸರಿಯಾದ ಮಾರ್ಗ ಎಂಬ ನಂಬಿಕೆ
ಕ ಹಿನ್ನಡೆಯ ಹಿಂದೆ ಕೆಲಸ ಮಾಡುತ್ತದೆ. ಬೃಹತ್
ನ ಖಾಸಗೀಕರಣದ ದಾರಿ ಎಂದರೆ ಇದೇ. ಇವುಗಳಲ್ಲಿ
ೀಲಾದ ದೊಡ್ಡ ಹೆಸರುಗಳನ್ನು ನಾವು ಮರೆಯುವಂತಿಲ್ಲ.
ರ್ ಯುಗದಲ್ಲಿನ ಧಾಬೋಲ್ ಯೋಜನೆ ಇದಕ್ಕೆ ಒಂದು
ಮ ನಿದರ್ಶನ. ಸ್ವಲ್ಪ ಹಿಂದಕ್ಕೆ ಹೋಗಿ ಅವಲೋಕಿಸಿದರೆ
ಗುತ್ತದೆ. ಒಮ್ಮೆ ಲಾಭದಲ್ಲಿ ನಡೆಯುತ್ತಿದ್ದ ಮಹಾರಾಷ್ಟ್ರ
ಚ್ಛಕ್ತಿ ಮಂಡಳಿಗೆ ಕ್ರಮಬದ್ಧವಾಗಿ ಸಹಾಯಧನವನ್ನು
ಸಿದ್ದರೆ ಸಾವಿರಾರು ಕೋಟಿಗಟ್ಟಲೆ ಹಣ ಉಳಿಸಬಹುದಿತ್ತು.
ದರಿಂದ ಬಜೆಟ್‌ನಲ್ಲಿ ಜನಸಾಮಾನ್ಯರಿಗಾಗಿ ಮೀಸಲಿಟ್ಟ
ಭಿವೃದ್ಧಿ ಧನಸಹಾಯ ಸಿಗದಂತಾಗಿರುವುದು ಅತ್ಯಂತ
ದನ ಸಂಗತಿ. ನಾವು ವಿಶ್ವಮಟ್ಟಕ್ಕೆ ಏರುವ ತೆವಲಿನಲ್ಲಿ
ಚ್ಛಕ್ತಿಗೆ ಪ್ರಪಂಚದಲ್ಲೇ ಅತಿ ಹೆಚ್ಚು ಬೆಲೆ ತೆರಬೇಕಾಗಿ
ರೂ ಪರವಾಗಿಲ್ಲ ಅಲ್ಲವೆ?

ನರ್ಮದಾ ಸಂಬಂಧಿ ಅಭಿವೃದ್ಧಿ ಚರ್ಚೆಗೂ ಇದೇ
ನೀರಿನ ಬವಣೆಗೆ ಅಣೆಕಟ್ಟು ನಿರ್ಮಾಣವೊಂದೇ ಪರಿ
ಇನ್ನೆಲ್ಲವೂ ಗೌಣ! ಒಂದಷ್ಟು ಪುನರ್ವಸತಿ ನಾಟಕವಾಡಿ
ಸಾಕು. ನಿಜವಾದ ಕಾಳಜಿ ಅನುಷ್ಠಾನಗೊಳ್ಳದಿದ್ದರೂ
ಯಿಲ್ಲ. ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸು
ಅಸಾಧ್ಯ ಎನ್ನುವವಿಷಯ ಇಲ್ಲಿ ಅಪ್ರಸ್ತುತವಾಗುತ್ತದೆ.
ಯೋಜನೆಗಳು ಮತ್ತು ಅವು ತರುವ ಹಣ ಮಾತ್ರ
ವಾಗುತ್ತದೆ. ಜನಸಾಮಾನ್ಯರ ಕುಂದುಕೊರತೆಗಳು ಬರಿಯ
ಷ್ಟೇ. ಕಛ್ ಮತ್ತು ಸೌರಾಷ್ಟ್ರದ ನೀರನ್ನು ಬೇರೆ ಲಾಭದಾ
ದಿಕ್ಕುಗಳಿಗೆ ಹರಿಸುತ್ತಿರುವ ವಿಷಯ ಪ್ರಸ್ತಾಪದಅರ್ಹತೆಗೂ
ಯಕು. ಇದರಿಂದ ಉತ್ಪಾದಿಸಲ್ಪಟ್ಟ ಅನರ್ಘ್ಯ ವಿದ್ಯುಚ್ಛಕ್ತಿ
ಅತ್ಯಲ್ಪ! ಅಂದಹಾಗೆ ಇದಕ್ಕೂ ಅಭಿವೃದ್ಧಿಗೂ ಏನಾದರೂ
ಂಧವಿದೆಯೇ? ಜನರ ಒಪ್ಪಿಗೆ ಮತ್ತು ಅಭಿವೃದ್ಧಿಗೆ
ರ್ಥ ಸಂಬಂಧ ಇಲ್ಲಿ ಕಾಣಿಸುತ್ತಿಲ!ಒರಿಸ್ಸಾದ ಪೊಲೀಸರು
ನಗರದಲ್ಲಿ ೧೩ ಮಂದಿ ಆದಿವಾಸಿಗಳನ್ನು ಗುಂಡಿಟ್ಟು
ದರು. ಇಂತಹ ಘೋರ ಅಪರಾಧಕ್ಕೆ ನಾಲಿಗೆ ಲೊಚಗು
ಛೇ ಛೇ ಎಂದು ಕನಿಕರ ಮಾತ್ರ ಸೂಚಿಸಲಾಯಿತು.

ನೀರಿನ ಬವಣೆಗೆ ಅಣೆಕಟ್ಟು ನಿರ್ಮಾಣವೊಂದೇ ಪರಿಹಾರ, ಇನ್ನೆಲ್ಲವೂ ಗೌಣ! ಒಂದಷ್ಟು ಪುನರ್ವಸತಿ ನಾಟಕವಾಡಿದರೆ ಸಾಕು. ನಿಜವಾದ ಕಾಳಜಿ ಅನುಷ್ಠಾನ ಗೊಳ್ಳದಿದ್ದರೂ ಚಿಂತೆಯಿಲ್ಲ. ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವುದೇ ಅಸಾಧ್ಯ ಎನ್ನುವ ವಿಷಯ ಇಲ್ಲಿ ಅಪ್ರಸ್ತುತವಾಗುತ್ತದೆ. ಇಲ್ಲಿ ಯೋಜನೆಗಳು ಮತ್ತು ಅವು ತರುವ ಹಣ ಮಾತ್ರ ಮುಖ್ಯವಾಗುತ್ತದೆ. ಜನಸಾಮಾನ್ಯರ ಕುಂದುಕೊರತೆಗಳು ಬರಿಯ ನೆಪ ಅಷ್ಟೇ. ಕಛ್ ಮತ್ತು ಸೌರಾಷ್ಟ್ರದ ನೀರನ್ನು ಬೇರೆ ಲಾಭದಾಯಕ ದಿಕ್ಕುಗಳಿಗೆ ಹರಿಸುತ್ತಿರುವ ವಿಷಯ ಪ್ರಸ್ತಾಪದ ಅರ್ಹತೆಗೂ ನಾಲಾಯಕು. ಇದರಿಂದ ಉತ್ಪಾದಿಸಲ್ಪಟ್ಟ ಅನರ್ಘ್ಯ ವಿದ್ಯುಚ್ಛಕ್ತಿ ಕೂಡ ಅತ್ಯಲ್ಪ! ಅಂದಹಾಗೆ ಇದಕ್ಕೂ ಅಭಿವೃದ್ಧಿಗೂ ಏನಾದರೂ ಸಂಬಂಧವಿದೆಯೇ?

ದೊಡ್ಡ ದಿನಪತ್ರಿಕೆಯೊಂದು ತಕ್ಷಣ ತನ್ನ ಸಂಪಾದಕೀಯಕ್ಕೆ ಈ ವಿಷಯವನ್ನು ಆರಿಸಿಕೊಂಡು "ಅಭಿವೃದ್ಧಿ ಯೋಜನೆಗಳಿಂದ ಜನಸಾಮಾನ್ಯರು ನಿರಾಶ್ರಿತಗೊಳ್ಳುವುದು ಸಹಜ. ಇಲ್ಲಿ ಪ್ರಶ್ನೆ ಇರುವುದು ಅವರಿಗೆ ಹೇಗೆ ಪುನರ್ವಸತಿ ಕಲ್ಪಿಸುವುದು ಎಂದು. ಅಭಿವೃದ್ಧಿಗಾಗಿ ನಾವು ಇದೆಲ್ಲವನ್ನೂ ಎದರುರಿಸಲೇಬೇಕು" ಎಂದು ಬರೆದು ಬೇಜವಾಬ್ದಾರಿತನ ಮೆರೆದಿದೆ.

ಒರಿಸ್ಸಾದಂತಹ ರಾಜ್ಯದಲ್ಲಿ ಹಲವಾರು ಯೋಜನೆಗಳಿಗಾಗಿ ಸಾವಿರಾರು ಎಕರೆ ಪ್ರದೇಶವನ್ನು ಜನರಿಂದ ಕಿತ್ತುಕೊಳ್ಳಲಾಯಿತು. ಯಾವುದಕ್ಕಾಗಿ? ಅನುಷ್ಠಾನಗೊಳ್ಳದ ಯೋಜನೆಗಳಿಗಾಗಿ. ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಇದಕ್ಕೆ ಕೇವಲ ಒಂದು ಉದಾಹರಣೆಯಷ್ಟೆ ಎಚ್‌ಎಎಲ್‌ನ ಯೋಜನೆಗಳಿಗಾಗಿ ನಡೆದಿರುವ ಭೂಕಬಳಿಕೆ ಅಷ್ಟಿಷ್ಟಲ್ಲ. ಆದರೆ ನಂತರ ಯೋಜನೆ ಅನುಷ್ಠಾನಗೊಂಡಿದ್ದು ಬೆಂಗಳೂರು ಮತ್ತಿತರೆಡೆ ಹೊರತು ಒರಿಸ್ಸಾದಲ್ಲಲ್ಲ. ಕಬಳಿಸಲಾದ ಭೂಮಿಯನ್ನು ನಿರಾಶ್ರಿತಗೊಂಡ ಕುಟುಂಬಗಳಿಗೂ ವಾಪಸ್ಸು ಮಾಡಲಿಲ್ಲ. ಇದೇ ರಾಜ್ಯದಲಿ ಅನುಷ್ಠಾನಗೊಳ್ಳದ ಯೋಜನೆಗಳಿಗಾಗಿ ಒಂದೇ ಹಳ್ಳಿಯನ್ನು ಮೂರು ಬಾರಿ ಸ್ಥಳಾಂತರಿಸಲಾಗಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ೧೯೬೦ರ ಅಣೆಕಟ್ಟುಗಳು ನಿರ್ನಾಮ ಮಾಡಿರುವ ಹಳ್ಳಿಗಳ ಕುರುಹುಗಳು ಇಲ್ಲಿ ಇನ್ನೂ ಇವೆ ಎಚೆದರೆ ಈ ಯೋಜನೆಗಳ ಭೀಕರತೆ ನಿಮಗೆ ಅರಿವಾಗಬಹುದು. ಈ ರೀತಿಯ ಘಟನೆಗಳು ಮುಂಬೈನ ಮಲಬಾರ್ ಹಿಲ್ಸ್ ಮೇಲೆ ಬಿಡಿಗಾಸಿನಷ್ಟೂ ಪರಿಣಾಮ ಬೀರುವುದಿಲ್ಲ. ಯಾವಾಗ ನಾಗಪಟ್ಟಿಣಂನಲ್ಲಿ ಸುನಾಮಿಯಿಂದ ೩೦,೩೦೦ ಜನ ನೀರುಪಾಲಾದರೋ ಆಗ ಇದೇ ಮುಂಬಯಿಯಲ್ಲಿ ಮಲಬಾರ್ ಹಿಲ್ಸ್‌ಗೆ ಕಿಂಚಿತ್ತೂ ಅರಿವಾಗದ ರೀತಿಯಲ್ಲಿ ೮೪ ಸಾವಿರ ಬಡಜನರ ಮನೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ನೆಲಸಮ ಮಾಡಲಾಯಿತು. ಇದಕ್ಕೆ ಹಿನ್ನಡೆಯೆನ್ನದೆ ಏನೆನ್ನಬೇಕು?

ಈ ಹಿನ್ನಡೆ ಪ್ರಕ್ರಿಯೆಗಳು ಬೇರೇ ರೀತಿಯಲ್ಲೂ ಕಾಣಿಸಿಗುತ್ತವೆ. ಉದಾಹರಣೆಗೆ ಹೇಗೆ ಕೆಲವು ನೀರಸ ವಿಚಾರಗಳನ್ನು ಅತ್ಯುತ್ರೇಕ್ಷೆಗೊಳಿಸಲಾಗುತ್ತವೆ ನೋಡಿ, 'ಮಾಲ್'ಗಳು ಉತ್ಕೃಷ್ಟವೆನಿಸುವ ಸಾರ್ವಜನಿಕ ಸ್ಥಳಗಳಂತೆ. ಒಂದು ಇಂಗ್ಲಿಷ್ ದಿನಪತ್ರಿಕೆ ಮಾಲ್‌ಗಳ ಬಗ್ಗೆ ಬರೆದ ರೀತಿ ಪೇಲವವಾಗಿದೆ: 'ಸ್ನೇಹಪರ ಆಪ್ತ ಮಾಲ್‌ಗಳೆಂಬ ಅಡ್ಡೆಗಳಲ್ಲಿ ವಿಹಾರ... ಈ ಸುಂದರ ಮಾಲ್‌ಗಳು ಈಚೆಗೆ ಅಪರೂಪವಾದ, ಭ್ರಷ್ಟರಹಿತ, ಸುರಕ್ಷಿತ, ಸುಲಭ್ಯವಾದ ಅತ್ಯದ್ಭುತ ಆವಿಷ್ಕಾರಗಳು. ಇವು ಯಾವುದೇ ಒಂದು ವರ್ಗಕ್ಕೂ ಕೃಪೆಮಾಡದ ಒಂದು ಸಾರ್ವಜನಿಕ'ಅವಶ್ಯ ಸ್ಥಳ. ಇಲ್ಲಿ ಬಾತ್‌ರೂಂ ಮತ್ತು ಸಂಬಂಧಿತ ಕೆಲಸಗಳೆಲ್ಲ ಉಚಿತ. ಇಲ್ಲಿಯ ಕೆಲವು ಅಂಗಡಿಗಳು ಅತಿ ದುಬಾರಿಯ ಡೈಮಂಡ್‌ಗಳಿಂದ ಅಲಂಕೃತಗೊಂಡ ಪೆನ್‌ಗಳನ್ನು ಮಾರಿದರೂ ಯಾವುದೇ ಒಂದು ವರ್ಗಕ್ಕೆ ಮೀಸಲಿಲ್ಲವೆಂಬ ಅವರ ಘೋಷಣೆಗೆ ಏನೆನ್ನೋಣ? ಹಾಗೆಯೇ ಇಲ್ಲಿನ ಇತರ ಅಂಗಡಿಗಳು ಅನೇಕಾನೇಕ ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಸಂಬಂಧಿ ಚಟುವಟಿಕೆಗಳಿಗೆ ಹೇಗೆ ಕೊಡಲಿಪೆಟ್ಟು ಕೊಡುತ್ತಿದೆ ಎನ್ನುವುದು ತಲೆಕೆಡಿಸಿಕೊಳ್ಳುವ ವಿಷಯವಲ್ಲ ಬಿಡಿ. ಇದು ಅಭಿವೃದ್ಧಿಯ ಏಕಮುಖಿ ವ್ಯಾಖ್ಯೆಗೆ ತಕ್ಕುದ್ದಾಗಿದೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಬಹಳ ಮುಖ್ಯವಾದ ವಿಷಯ. ಅದು ಮುಖ್ಯವಾಗಲೇ ಬೇಕು. ಆದರೆ ಉತ್ತರಿಸಲೇಬೇಕಾದ ಪ್ರಶ್ನೆಗಳೆಂದರೆ: ಯಾರ ಲಾಭಕ್ಕಾಗಿ ಈ ಅಭಿವೃದ್ಧಿ? ಇದಕ್ಕಾಗಿ ತೆರಬೇಕಾದ ಬೆಲೆ ಎಷ್ಟು? ನೀವು ಮಾಡಬೇಕಾದ ಕೆಲಸ ಒಳ್ಳೆಯದೆಂಬ ಕಾರಣಕ್ಕೆ ಮಾಡುತ್ತೀರೋ ಅಥವಾ ನಿಮಗೆ ಅದು ಸಾಧ್ಯವಾಗುತ್ತದೆ ಎಂಬ ಕಾರಣಕ್ಕೆ ಮಾಡುತ್ತೀರೋ? ಒಂದು ಕೆಲಸವನ್ನು ಬೇರೆ ಬೇರೆ ರೀತಿಯಲ್ಲಿ ಮಾಡಲು ಸಾಧ್ಯವಿಲ್ಲವೇ? ಯಾವುದು ಅದರಲ್ಲಿ ಅತ್ಯಂತ ಸಮಂಜಸವಾದದ್ದು? ಬಡಜನರು ತಮ್ಮ ಅಭಿಪ್ರಾಯವನ್ನು ತಿಳಿಸಲು ಅರ್ಹರಲ್ಲವೇ? ಈ ದೇಶದಲ್ಲಿ ಅವರಿಗೆ'ಇಲ್ಲ' ಎನ್ನುವ ಹಕ್ಕಿಲ್ಲವೇ?

ಹೈಟೆಕ್ ಮಾಲ್‌ಗಳ ಅಭಿವೃದ್ಧಿಹಳಸಲು ಚರ್ಚೆಗಳು ಕೇರಳದಂತಹ ಸುಶಿಕ್ಷಿತ ರಾಜ್ಯದಿಂದ ಬರುತ್ತಿರುವುದು ವಿಚಿತ್ರವಾದರೂ ಸತ್ಯ. ಈ ಚೌಕಟ್ಟಿನೊಳಗೆ ನೋಡುವುದಾದರೆ ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳು ಕೇರಳಕ್ಕೆ ಎಂದೋ ಸೆಡ್ಡು ಹೊಡೆದು ಮುಂದೆ ಹೋಗಿವೆ. ಲೆಕ್ಕವಿಲ್ಲದಷ್ಟು ದೊಡ್ಡ ಬಜೆಟ್ಟಿನ ಅಭಿವೃದ್ಧಿ ಯೋಜನೆಗಳು ಇಲ್ಲಿ ಯಾವಾಗಲೂ ಇದ್ದಿದ್ದೇ. ಆದರೆ ಜನಸಾಮಾನ್ಯರ ಜೀವನಮಟ್ಟದಲ್ಲಂತೂ ಅಷ್ಟಾಗಿ ಬದಲಾವಣೆ ಕಂಡಿಲ್ಲ.

ಅಂದಹಾಗೆ ಇದೆಲ್ಲದರ ಮಧ್ಯೆ ನಿಜವಾದಅಭಿವೃದ್ಧಿ ಸೂಚಕವನ್ನೇ ನಾವು ಮರೆತುಬಿಟ್ಟಿದ್ದೇವೆ. ಅದು ಕೂಡ ಈ ಚರ್ಚೆಯಲ್ಲಿ ಮುಖ್ಯವಾಗಲೇ ಬೇಕು. ಎಲ್ಲಾ ರಾಜ್ಯಗಳಲ್ಲಿನ ೩೦% ಕೆಳಸ್ತರದ ಜನ ಏನು ಮಾಡುತ್ತಿದ್ದಾರೆಂದು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿಟ್ಟು ಅಭ್ಯಸಿಸಿದರೆ ಏಕಮುಖಿ ಅಭಿವೃದ್ಧಿವಾದಕ್ಕಿಂತ ಭಿನ್ನವಾದ ಅಭಿವೃದ್ಧಿ ವ್ಯಾಖ್ಯೆಯನ್ನು ಬರೆಯಬಹುದು. □

ಪೇಜಾವರರು ಮತ್ತು ಅಸ್ಪೃಶ್ಯತೆ

ನಾ. ದಿವಾಕರ

ಪ್ರಚಲಿತ

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಅಸ್ಪೃಶ್ಯತಾ ನಿವಾರಣೆ ಯೆಂದರೆ, ಕೇವಲ ದಲಿತ ಜನಾಂಗ ವನ್ನು ಅಪ್ಪಿಕೊಳ್ಳುವುದಲ್ಲ. ಈಗಾಗಲೇ ನಮ್ಮ ಸಮಾಜ ಈ ಕಾರ್ಯ ವನ್ನು ನಿರ್ವಹಿಸುತ್ತಿದೆ. ಆಧುನಿಕತೆಯ ಅನಿವಾರ್ಯತೆಗಳು, ಕಾಸ್ಮಾಪಾಲಿಟನ್ ಜೀವನ ಶೈಲಿ, ನಗರ ಕೇಂದ್ರಿತ ಅಭಿವೃದ್ಧಿ ಮತ್ತು ಭಾರತೀಯ ಸಂವಿಧಾನದ ಕಟ್ಟಳೆ ಗಳು, ಮೇಲ್ಜಾತಿಯವ ರನ್ನು ಈ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ತೊಡಗಿಸಿದೆ. ನಗರ, ಪಟ್ಟಣಗಳಲ್ಲಿ ನಾವಿಂದು ಕಾಣುತ್ತಿರುವುದು ಅಸ್ಪೃಶ್ಯತೆಯಿಲ್ಲದ ಜನ ಜೀವನವೇ ಹೊರತು, ಜಾತಿ ಪ್ರಜ್ಞೆ ಇಲ್ಲದ ಸಮಾಜವನ್ನಲ್ಲ ಎಂಬ ಸೂಕ್ಷ್ಮವನ್ನು ಪೇಜಾವರರು ಅರಿಯ ಬೇಕಾಗಿದೆ.

ಇತ್ತೀಚಿಗೆ ಮೈಸೂರುನಲ್ಲಿ ಬಸವ ಜಯಂತಿಯ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ಪೇಜಾವರ ಸ್ವಾಮಿಗಳು, ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಪಣ ತೊಟ್ಟಿರುವುದೇ ಅಲ್ಲದೆ, ತಮ್ಮ ಈ ಮಹಾನ್ ಕೈಂಕರ್ಯದಲ್ಲಿ ಇತರ ಧಾರ್ಮಿಕ ಮಠಾಧೀಶರ ಬೆಂಬಲವನ್ನೂ ಕೋರಿದ್ದಾರೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಭಾ.ಜ.ಪ. ನೇತೃತ್ವದ ಸರ್ಕಾರದಲ್ಲಿ ಮಂತ್ರಿಯಾಗಿದ್ದು, ಎನ್.ಡಿ.ಎ. ಸರ್ಕಾರದ ಎಲ್ಲಾ ಕೇಸರೀಕರಣ ನೀತಿಗಳಿಗೂ ತಮ್ಮ ಮೌನ ದಿಂದಲೇ ಸಮ್ಮತಿ ನೀಡಿ, ಇದೀಗ, ಜಾತ್ಯತೀತತೆಯ ಮಾರ್ಗ ಹಿಡಿದಿರುವ ಮಾಜಿ ಕೇಂದ್ರ ಸಚಿವ ಶ್ರೀನಿವಾಸ ಪ್ರಸಾದ್‌ರವರ ಟೀಕೆಗಳಿಗೆ ಉತ್ತರಿಸುತ್ತ, ಪೇಜಾವರರು ದಲಿತರ ಕೊಲೆಯಾದಾಗಲೆಲ್ಲಾ ತಾವು ೨೪ ಘಂಟೆಗಳ ಉಪವಾಸ ಮಾಡಿರುವುದಾಗಿ ಹೇಳಿರುವುದೇ ಅಲ್ಲದೆ, ಅಸ್ಪೃಶ್ಯತಾ ನಿವಾರಣೆಯಾಗದಿದ್ದಲ್ಲಿ, ಹಿಂದೂ ಧರ್ಮಕ್ಕೆ ಉಳಿಗಾಲವಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಆದರೆ ರಾಮಜನ್ಮಭೂಮಿ ವಿವಾದದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಸಂದರ್ಭದಲ್ಲಿ ಪೇಜಾವರರ ನೈಜ ಗುಣಗಳನ್ನು ಗ್ರಹಸಿರುವ ಭಾರತೀಯ ಜನತೆಗೆ, ಶ್ರೀಗಳ ಈ ಶೀರ್ಷಾಸನದ ಬಗ್ಗೆ ತಮ್ಮದೇ ಆದ ಅನುಮಾನಗಳು ಮೂಡುವುದು ಸಹಜ. ಹಿಂದೂ ಧರ್ಮದ ಉಳಿವಿಗಾಗಿ ಅಸ್ಪೃಶ್ಯತೆಯನ್ನು ನಿವಾರಿಸುವುದಾದಲ್ಲಿ, ಅಸ್ಪೃ ಶ್ಯತಾ ರಹಿತ ಹಿಂದೂ ಸಮಾಜದಲ್ಲಿ, ಪೇಜಾವರರು ಪ್ರತಿನಿಧಿಸುವ ಮನುವಾದಿ ಸಂಸ್ಕೃತಿಯ ಸ್ಥಾನ ಮಾನಗಳೇನು ಎಂಬ ಪ್ರಶ್ನೆ ಮೂಡದಿರುವುದಿಲ್ಲ. "ಭಕ್ತಿ ಇಲ್ಲದ ಬ್ರಾಹ್ಮಣನಿಗಿಂತ ಭಕ್ತಿ ಇರುವ ದಲಿತ ದೊಡ್ಡವನು" ಎಂದು ಹೇಳಿರುವ ಪೇಜಾವರರು, ಭಕ್ತಿ ಇರುವ ದಲಿತನ ಕಾಲಿಗೆ ಪ್ರಣಾಮ ಮಾಡಲು ಸಿದ್ಧರಿದ್ದಾರೆಯೇ? ಅಥವಾ ಅಪಾರ ಭಕ್ತಿಯುಳ್ಳ, ದಲಿತ ವ್ಯಕ್ತಿಯನ್ನು, ಯಾವುದೇ ದೇವಾಲಯದ ಗರ್ಭಗುಡಿಗೆ ಪ್ರವೇಶಿಸಲು ಅನುಮತಿ ನೀಡು ತ್ತಾರೆಯೇ? ಪರಮ ದೈವ ಭಕ್ತನ ಕೈಯಿಂದ ತೀರ್ಥ, ಪ್ರಸಾದ ಸ್ವೀಕರಿಸುತ್ತಾರೆಯೇ? ಮನುಜ ಜೀವಿಗೆ ದೊಡ್ಡವರೆನಿಸಿಕೊಳ್ಳಲು ಅಗತ್ಯವಿರುವುದು ಮಾನವೀಯತೆಯೇ ಹೊರತು, ದೈವ ಭಕ್ತಿಯಲ್ಲ ಎಂಬ ಅಂಶವನ್ನು ಪೇಜಾವರರು ಪರಿಗಣಿಸಬೇಕು.

ಅಸ್ಪೃಶ್ಯತೆ ವಿರುದ್ಧ ಒಂದು ದಿನ ಉಪವಾಸ ಮಾಡಲು ನಾನು ಸಿದ್ಧ ಎಂದು, ಅನ್ಯ ಮಠಾಧೀಶರುಗಳಿಗೆ ಕರೆ ನೀಡಿರುವ ಪೇಜಾವರರು, ಕಂಬಾಲಪಲ್ಲಿಯಲ್ಲಿ ದಲಿತರ ಮಾರಣ ಹೋಮವಾದಾಗ, ಚೆಂಡೂರಿನಲ್ಲಿ ದಲಿತರನ್ನು ತುಂಡು ತುಂಡು ಮಾಡಿ ಚೀಲಗಳಲ್ಲಿ ಕಟ್ಟಿ ನದಿಗೆ ಎಸೆದಾಗ, ಹರ್‍ಯಾಣದ ಜಾಂಜರ್‌ನಲ್ಲಿ, ಸಂಘ ಪರಿವಾರದವರು ಐದು ಜನ ದಲಿತರ ಚರ್ಮ ಸುಲಿದಾಗ, ಉಪವಾಸ ಮಾಡಲಿಲ್ಲವೇಕೆ? ದೇಶದಲ್ಲಿ ಎಲ್ಲೇ ದಲಿತರ ಮೇಲೆ ದಬ್ಬಾಳಿಕೆ ನಡೆದರೂ, ನಾನು ೨ ಘಂಟೆಗಳ ಉಪ ವಾಸ ಮಾಡುತ್ತಾ ಬಂದಿದ್ದೇನೆ ಎಂದು ಹೇಳುವ ಪೇಜಾವರರ ಮಾತಿನಲ್ಲಿ ಸತ್ಯಾಂಶ ಎಷ್ಟಿದೆ ಎಂದು ಅವರೇ ತಿಳಿಸಬೇಕು. ತಮ್ಮ ಬ್ರಾಹ್ಮಣ ಸಂಪ್ರದಾಯದ ಅನುಸಾರವಾಗಿ, ಏಕಾದಶಿ, ಗುರುವಾರ, ಸೋಮವಾರ ಹೀಗೆ ತಿಂಗಳಲ್ಲಿ ಹಲವು ದಿನಗಳು ಉಪವಾಸ ಉಪವಾಸ ಮಾಡುವುದು, ಪೇಜವಾವರ ಸ್ವಾಮಿಗಳಿ ಗೇನೂ ಹೊಸತಲ್ಲ. ಆದರೆ ಅಸ್ಪೃಶ್ಯತೆಯ ವಿರುದ್ಧ ದಬ್ಬಾಳಿಕೆ ನಡೆದಾಗಲೆಲ್ಲ ಉಪವಾಸ ಮಾಡುವುದಾದರೆ, ಪೇಜಾವರರು, ವರ್ಷವಿಡೀ ಉಪವಾಸವಿರಬೇಕಾಗಬಹುದು. ಏಕೆಂದರೆ ಭಾರತದಲ್ಲಿ ಎಲ್ಲೋ ಒಂದು ಕಡೆ, ದಲಿತರ ಮೇಲೆ ದಬ್ಬಾಳಿಕೆ, ಆಕ್ರಮಣ ನಡೆಯುತ್ತಲೇ ಇರುತ್ತದೆ. ಹಾಗಾಗಿ, ಉಪವಾಸ ಮಾಡುವುದನ್ನೇ ಒಂದು ಮಹಾನ್ ಹೋರಾಟವೆಂದು ಪರಿಗಣಿಸುವ ಅಪ್ಪಾಯ ಮಾನವೆನಿಸುತ್ತದೆ.

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಅಸ್ಪೃಶ್ಯತಾ ನಿವಾ[ರಣೆ] ಯೆಂದರೆ, ಕೇವಲ ದಲಿತ ಜನಾಂಗವನ್ನು ಅಪ್ಪಿಕೊಳ್ಳುವುದಲ್ಲ. ಈ[ಗಾ]ಗಲೇ ನಮ್ಮ ಸಮಾಜ ಈ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧು[ನಿಕ]ತೆಯ ಅನಿವಾರ್ಯತೆಗಳು, ಕಾಸ್ಮಾಪಾಲಿಟನ್ ಜೀವನ ಶೈಲಿ, ನ[ಗರ] ಕೇಂದ್ರಿತ ಅಭಿವೃದ್ಧಿ ಮತ್ತು ಭಾರತೀಯ ಸಂವಿಧಾನದ ಕಟ್ಟಳೆಗ[ಳು], ಮೇಲ್ಜಾತಿಯವರನ್ನು ಈ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ತೊ[ಡಗಿ]ಸಿದೆ. ನಗರ, ಪಟ್ಟಣಗಳಲ್ಲಿ ನಾವಿಂದು ಕಾಣುತ್ತಿರುವುದು ಅಸ್ಪೃ[ಶ್ಯತೆ]ಯಿಲ್ಲದ ಜನ ಜೀವನವೇ ಹೊರತು, ಜಾತಿ ಪ್ರಜ್ಞೆ ಇಲ್ಲದ ಸಮಾಜ[ವ]ನ್ನಲ್ಲ ಎಂಬ ಸೂಕ್ಷ್ಮವನ್ನು ಪೇಜಾವರರು ಅರಿಯಬೇಕಾಗಿದೆ. ದೈ[ಹಿಕ] ಅಸ್ಪೃಶ್ಯತೆ ಹಾಗೂ ಮಾನಸಿಕ-ಭೌತಿಕ ಅಸ್ಪೃಶ್ಯತೆಯ ನಡುವಿನ ವ್ಯ[ತ್ಯಾ]ಸವನ್ನು ಗುರುತಿಸದಿದ್ದಲ್ಲಿ, ಭಾರತೀಯ ಸಮಾಜದ ನೈಜ ಸ್ವ[ರೂ]ಪವನ್ನು ಗ್ರಹಿಸಲಾಗುವುದಿಲ್ಲ. ಹಾಗಾಗಿಯೇ ನಮ್ಮ ರಾಜಕೀಯ [...]ಗಳು ಈ ನಿಟ್ಟಿನಲ್ಲಿ ವಿಫಲವಾಗುತ್ತಿವೆ. ಆದ್ದರಿಂದಲೇ, ಕರ್ನಾಟಕದ ದಲಿತ ನಾಯಕರೆಂದೇ ಹೆಸರಾಗಿರುವ ಶ್ರೀನಿವಾಸ ಪ್ರಸಾದ್‌ರವ[ರು] ಎನ್.ಡಿ.ಎ ಸರ್ಕಾರದ ಅವಧಿಯಲ್ಲಿ ದೇಶದಾದ್ಯಂತ ದಲಿತರ ವಿರು[ದ್ಧ] ನಡೆದ ದಬ್ಬಾಳಿಕೆ, ಆಕ್ರಮಣಗಳಿಗೆ, ಯಾವುದೇ ರೀತಿಯಲ್ಲಿ ಇತ್ಯಾ[ತ್ಮಕ]ವಾಗಿ (Positive) ಸ್ಪಂದಿಸಲಿಲ್ಲ. ಎನ್.ಡಿ.ಎ. ಸರ್ಕಾರದ ದಲಿ[ತ,] ಅಲ್ಪ ಸಂಖ್ಯಾತ ವಿರೋಧಿ ನೀತಿಗಳನ್ನು ಪ್ರತಿಭಟಿಸಿ ನಿರ್ಗಮಿ[ಸು]ವುದರ ಬದಲು, ಮೌನಂ ಸಮ್ಮತಿ ಲಕ್ಷಣಂ ಎನ್ನುವಂತೆ, ದ[...] ಮೌನ ವಹಿಸಿದ, ಶ್ರೀನಿವಾಸ ಪ್ರಸಾದ್‌ರವರಿಗೂ, ಪೇಜಾವರರ ಕ[...]ಜಿಗಳಿಗೂ ಸ್ವಾಮ್ಯತೆ ಕಂಡುಬರುವುದು ಇಲ್ಲೇ ಎಂ[ದು] ಹೇಳಬಹುದು.

ಭಾರತೀಯ ಜಾತಿ ವ್ಯವಸ್ಥೆಯಲ್ಲಿ, ಯಾವುದೇ ವ[್ಯಕ್ತಿ] ಮತಾಂತರಗೊಂಡರೂ ಸಹ, ಆ ವ್ಯಕ್ತಿಯ ಹುಟ್ಟು ಆತನ/ಆಕೆ[ಯ] ಜಾತಿಯನ್ನು ಗುರುತಿಸುತ್ತದೆ. ಇಂದು ದಲಿತ ಕ್ರೈಸ್ತರು, ದಲಿತ ಮು[ಸ]ಲ್ಮಾನರು ಅನುಭವಿಸು ತ್ತಿರುವ ಶೋಷಣೆ, ದಬ್ಬಳಿಕೆ, ಮಾನ[ಸಿಕ] ಅಸ್ಪೃಶ್ಯತೆಯನ್ನು ಗಮನಿಸಿದಲ್ಲಿ, ಭಾರತೀಯ ಸಮಾಜದಲ್ಲಿನ ಜಾ[ತಿ] ಪ್ರಜ್ಞೆಯ ಆಳ-ಹರಿವು ಅರ್ಥವಾಗುತ್ತದೆ. ಜಾತಿ ಪದ್ಧತಿಯ ಬ[ಗ್ಗೆ,] ಜಾತಿ ವೈಷಮ್ಯಗಳ ಬಗ್ಗೆ, ವೇದಿಕೆಗಳ ಮೇಲೆ ಮಾತನಾಡುವ ರಾ[ಜ]ಕೀಯ ನಾಯಕರುಗಳೆಲ್ಲರೂ, ಗೋಸುಂಬೆಗಳಂತೆ ಬಣ್ಣ ಬದ[ಲಿ]ಸುತ್ತ, ದಲಿತರನ್ನು ಕೇವಲ ಚುನಾವಣಾ ರಾಜಕೀಯಕ್ಕೆ ಬಳಸಿಕೊ[ಳ್ಳು]ರುವುದು ಗುಟ್ಟಾದ ವಿಷಯವಾಗಿ ಉಳಿದಿಲ್ಲ. ಒಂದು ಕೃಷ್ಣ ಮ[ೃಗ]ವನ್ನು ಕೊಂದ ಚಿತ್ರ ನಟ ಸಲ್ಮಾನಖಾನ್‌ಗೆ ಕೇವಲ ಐದು ವರ್ಷ[...]ಗಳಲ್ಲಿ ನ್ಯಾಯಾಲಯ ಶಿಕ್ಷೆ ವಿಧಿಸುವ ಮೂಲಕ, ಆ ಮೃಗಕ್ಕೆ ನ್ಯಾ[ಯ] ಒದಗಿಸುವುದರಲ್ಲಿ ಸಫಲವಾಗುತ್ತದೆ.

ಆದರೆ, ಕಂಬಾಲಪಲ್ಲಿಯಲ್ಲಿ ದಲಿತರು ಜೀವಂತವಾಗಿ ದ[ಹಿ]ಸಲ್ಪಟ್ಟು ವರ್ಷಗಳೇ ಕಳೆದರೂ, ಅಪರಾಧಿಗಳಿಗೆ ಶಿಕ್ಷೆಯಾಗದಿರುವು[ದು] ವಿಪರ್ಯಾಸ ವಲ್ಲವೇ ಈ ಬಗ್ಗೆ ಪೇಜಾವರರು ಎಷ್ಟು ದಿನ ಉ[ಪ]ವಾಸ ಮಾಡಿದ್ದಾರೆ? ಕಂಬಾಲಪಲ್ಲಿಯಾಗಲೀ, ದಲಿತರಿಗೆ ಕೆರೆ[ಯ] ನೀರನ್ನು ಮುಟ್ಟಲು ಅವಕಾಶ ನೀಡದ ಅಮಾನವೀಯ ವಿಷಯದ[ಲ್ಲಾ]ಗಲೀ, ದಲಿತರ ಚರ್ಮ ಸುಲಿದ ಹರ್‍ಯಾಣದ ಜಾಂಜರ್‌ನ ಬಗ್ಗೆಯಾ[ಗ]ಲಿ, ದಲಿತರಿಗೆ ಮಲ ತಿನ್ನಿಸಿದ, ಮೂತ್ರ ಸೇವಿಸುವಂತೆ ಮಾಡಿ[ದ] ಘಟನೆಗಳ ಬಗ್ಗೆ ಯಾಗಲಿ, ಪೇಜಾವರರು ಎಷ್ಟು ಕಾಳಜಿ ತೋ[ರಿ]ದ್ದಾರೆ? ಈ ಬಡಪಾಯಿಗಳಿಗಾಗಿ ಎಷ್ಟು ದಿನ ಉಪವಾಸ ಮಾ[ಡಿದ್ದಾರೆ?]

ೆ? ಈ ಅಂಶಗಳೆಲ್ಲ ಒತ್ತಟ್ಟಿಗಿರಲಿ, ಭಾಜಪ ಮತ್ತು
ರ ಪರಿವಾರಕ್ಕೆ ಹಿರಿಯಜ್ಜನಂತಿರುವ ಪೇಜಾವರರು,
ರಾತ್‌ನ ಗಲಭೆಗಳಲ್ಲಿ, ಮುಸ್ಲಿಂ ಜನತೆಯ ಮಾರಣ
ೇಮ ಮಾಡಲು ನರೇಂದ್ರ ಮೋದಿ ಸರ್ಕಾರ ದಲಿತ
ಆಯುಧಗಳಂತೆ ಬಳಸಿಕೊಂಡಾಗ, ತೆಪ್ಪಗಿದ್ದರೇಕೆ?
ದೂ ಸಾಮ್ರಾಜ್ಯ ಸ್ಥಾಪನೆಗಾಗಿ ಗುಜರಾತ್‌ನ
ೋಗ ಅವಶ್ಯವಾಗಿತ್ತೆಂದೇ?

ಪೇಜಾವರರಾಗಲೀ, ಸಂಘ ಪರಿವಾರದವರಾಗಲೀ,
ಸಬೇಕಾದ ಅಂಶವೆಂದರೆ, ಭಾರತೀಯ ಜಾತಿ ವ್ಯವಸ್ಥೆ
ೃಶ್ಯತೆಯಲ್ಲಿ ಮಾತ್ರ ಅಡಗಿಲ್ಲ. ಶತಮಾನಗಳಿಂದ ವ್ಯವ
ವಾಗಿ ನಡೆದು ಬಂದಿರುವ ಈ ಶ್ರೇಣೀಕೃತ ಜಾತಿ
ಸ್ಥೆ ಇಂದು ಒಂದು ಮಾನಸಿಕ ಸ್ಥಿತಿಯಾಗಿ ನೆಲೆ
ಗಿದೆ. ಆಧುನಿಕ ಸಮಾಜದಲ್ಲಿ, ದಲಿತರನ್ನು ಸಮಾನ
ೆ ಕಾಣುವ ಅನೇಕ ಮೇಲ್ಜಾತಿಯ ಗಣ್ಯರು, ತಮ್ಮ
ಮಾಜಿಕ ಸ್ಥಾನಮಾನಗಳನ್ನು ಕಾಪಾಡಿಕೊಳ್ಳಲು ಈ
ಅನುಸರಿಸುತ್ತಾರೆ. "ನಾವೇನೂ ಜಾತಿ ಭೇದ
ಡುವುದಿಲ್ಲ" ಎಂದು ಕೊಚ್ಚಿಕೊಳ್ಳುವ ಜನರ ನಿಜ
ಪ, ಹಬ್ಬ ಹರಿದಿನಗಳಲ್ಲಿ, ಮಠಗಳಲ್ಲಿ, ಮದುವೆ-
ಜಿ ಮುಂತಾದ ಸಮಾರಂಭಗಳಲ್ಲಿ ಅನಾವರಣಗೊ
ದೆ. ವೇದಿಕೆಗಳ ಮೇಲೆ ಅಸ್ಪೃಶ್ಯತೆಯನ್ನು ತೊಡೆದು
ಕುವ ಶಪಥ ಮಾಡುವ ಪೇಜಾವರರಂತಹ ಸ್ವಾಮೀಜಿ
ಬಣ್ಣ ಅವರದೇ ಆದ ದೇವಾಲಯ-ಮಠಗಳಲ್ಲಿ ವ್ಯಕ್ತ
ಸುತ್ತದೆ. ಭಾರತೀಯ ಸಮಾಜದ ಈ ಅನಿಷ್ಟಗಳನ್ನು
ವುದೇ ದಲಿತನಿಗೂ ಬಿಡಿಸಿ ಹೇಳುವ ಅಗತ್ಯವಿಲ್ಲ.
ಂದಿನ ಪ್ರಕರಣಗಳೇ ದಲಿತರ ಜ್ಞಾನೋದಯಕ್ಕೆ
ಣವಾಗಿದೆ.

ಪೇಜಾವರರಾಗಲೀ ಅವರ ಸಹವರ್ತಿ ಗಳಾಗಲೀ
ಸವಾಸ ಮಾಡುವುದರಿಂದ ಜಾತಿ ವ್ಯವಸ್ಥೆ ನಿರ್ನಾಮ
ಗುತ್ತದೆ ಎಂಬ ಭ್ರಮೆ ಭಾರತೀಯ ದಲಿತರಿಗಿಲ್ಲ.
ದೂ ಧರ್ಮದ ಉಳಿವಿಗೆ, ಕನಿಷ್ಟ ಸಂಖ್ಯಾ ಬಲದ
ಯಿಂದಲಾದರೂ, ದಲಿತರ ಅವಶ್ಯಕತೆ ಇದೆ ಹಾಗೂ
ಗತಿಕ ಮಟ್ಟದಲ್ಲಿ ಹಿಂದೂ ಧರ್ಮವನ್ನು ಒಂದು
ನವೀಯ ಧರ್ಮ ಎಂದು ನಿರೂಪಿಸಲು, ಈ ಅಸ್ಪೃ
ವಿರೋಧಿ ನಿಲುವುಗಳ ಅವಶ್ಯಕತೆ ಇದೆ. ಇತ್ತೀಚಿನ
ಗಳಲ್ಲಿ ಬಹು ಸಂಖ್ಯಾತ ದಲಿತರು ಬೌದ್ಧ ಧರ್ಮ
ನ್ನು ಅಪ್ಪಿಕೊಳ್ಳುತ್ತಿರುವುದು, ಹಿಂದು ಮೂಲ ಭೂತ
ದಿಗಳನ್ನು, ಕಂಗೆಡಿಸಿದೆ. ಇಸ್ಲಾಂ ವಿರುದ್ಧದ ತಮ್ಮ
ರ್ಮ ಯುದ್ಧದಲ್ಲಿ ಹರಕೆಯ ಕುರಿಗಳಾಗಲು, ಹಿಂದುತ್ವ
ದಿಗಳಿಗೆ, ದಲಿತರ ಅವಶ್ಯಕತೆ ಇದೆ. ಭಾರತೀಯ
ಮಾಜದ ಸಮಾಜೋ-ಆರ್ಥಿಕ ಚೌಕಟ್ಟನ್ನು ಯಥಾಸ್ಥಿತಿ
ಲ್ಲಿ ಉಳಿಸಿಕೊಳ್ಳಲು ಮೇಲ್ಜಾತಿಯವರಿಗೆ ದಲಿತರ ಅವ
ತೆ ಇದೆ. ಜಾಗತೀಕರಣದ ರಭಸದಲ್ಲಿ ಕೊಚ್ಚಿ ಹೋಗು
ವ ಭಾರತೀಯ ಸಂಸ್ಕೃತಿಯನ್ನು, ಜನಪದ ಸಂಸ್ಕೃತಿ
ನ್ನು ರಕ್ಷಿಸಿಕೊಳ್ಳಲು, ದಲಿತರ ಅವಶ್ಯಕತೆ ಇದೆ.

ಆದರೆ ತಮ್ಮದೇ ಆದ ಸಂಸ್ಕೃತಿ, ಪರಂಪರೆ,
ಗರೀಕತೆ ಉಳ್ಳ ದಲಿತ ಜನಾಂಗಕ್ಕೆ ಹಿಂದೂ ಧರ್ಮದ,
ರಲ್ಲೂ ಪೇಜಾವರರು ಪ್ರತಿಪಾದಿಸುವ, ಮನುಸ್ಮೃತಿ
ರಿತ ಬ್ರಾಹ್ಮಣ ಧರ್ಮದ ಅವಶ್ಯಕತೆ ಇಲ್ಲ. ಮೇಲ್ಜಾತಿ
ವರಿಂದ ಸ್ಪೃಶ್ಯರೆನಿಸಿಕೊಳ್ಳುವುದೇ ದಲಿತರ ಪರಮ
ಯವಾಗಿದ್ದಲ್ಲಿ, ಭಾರತೀಯ ಸಮಾಜದಲ್ಲಿ ದಲಿತ
ವಳಿ ಇಲ್ಲಿವರೆಗೂ ಉಳಿಯುತ್ತಲೇ ಇರಲಿಲ್ಲ. ಇಲ್ಲಿ
ೀಚಿನ ಪ್ರಕರಣವೊಂದನ್ನು ಉದಹರಿಸುವುದು ಉಚಿತ

ಪೇಜಾವರರು ಮತ್ತವರ ಉದಾರವಾದೀ(?) ಸಹವರ್ತಿಗಳು ತಮ್ಮ ತಮ್ಮ ಮಠಗಳಲ್ಲಿ, ಊರುಗಳಲ್ಲಿ, ಇಂದಿಗೂ ಇರುವ ಅಗ್ರಹಾರ-ಕೇರಿ ಸಂಸ್ಕೃತಿಯನ್ನು ತೊಡೆದು ಹಾಕ ಬಲ್ಲರೇ? ಇತ್ತೀಚಿನ ದಿನಗಳಲ್ಲಿ ಮೇಲ್ಜಾತಿಯವರ ಹಿಡಿತ ದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಮತ್ತು ಗೃಹ ಬಡಾವಣೆಗಳಲ್ಲಿ ಮಾಂಸಾಹಾರದ ನೆಪವೊಡ್ಡಿ, ಹಸು-ಎಮ್ಮೆ ಸಾಕುವುದರ ನೆಪವೊಡ್ಡಿ, ಬ್ರಾಹ್ಮಣ ಅಗ್ರಹಾರಗಳನ್ನು, ಪ್ರಮುಖ ನಗರಗಳಲ್ಲಿ ಪುನರುಜ್ಜೀವನಗೊಳಿಸುತ್ತಿರುವ ಪ್ರಕ್ರಿಯೆಯನ್ನು ಇವರು ತಡೆಯಬಲ್ಲರೇ? ತಮ್ಮ ಹೆಡ್ ಆಫೀಸ್ ಆದ ಉಡುಪಿಯಲ್ಲಿ, ಬ್ರಾಹ್ಮಣ ಬೀದಿಯಲ್ಲಿ, ದಲಿತರಿಗೆ ವಾಸಿಸಲು ಅವಕಾಶ ಮಾಡಿಕೊಡು ವರೇ? ಈ ಎಲ್ಲಾ ಪ್ರಶ್ನೆಗಳಿಗೆ, ಪೇಜಾವರರಿಂದ ಸೂಕ್ತ ಉತ್ತರ ಬಯಸುವುದಿರಲಿ, ಊಹಿಸುವ ಸಾಧ್ಯತೆಯೂ ಇಲ್ಲ.



ಪೇಜಾವರ ಸ್ವಾಮೀಜಿ

ವೆನಿಸುತ್ತದೆ. ಹರ್ಯಾಣದ ಕರ್ನಾಲ್ ಜಿಲ್ಲೆಯ ಮಹಮ್ಮದ್ ಪುರ ಎಂಬ ಸಣ್ಣ ಹಳ್ಳಿಯಲ್ಲಿ ಇತ್ತೀಚೆಗೆ ಭೂಮಾಲೀಕ ರಾದ ರೋಡ್ ಎಂಬ ಮೇಲ್ಜಾತಿಯವರು ದಲಿತ ಕೇರಿಯ ಮೇಲೆ ದಾಳಿ ನಡೆಸಿ, ೩೦ ಕ್ಕೂ ಹೆಚ್ಚು ದಲಿ ತರು ತೀವ್ರವಾಗಿ ಗಾಯಗೊಳಿಸಿದ್ದಾರೆ. ದಲಿತರು ರವಿ ದಾಸ್ ಜಯಂತಿಯಂದು ಉತ್ಸವವನ್ನು ಮೇಲ್ಜಾತಿಯವರ ಬೀದಿಗಳಲ್ಲಿ ಕೊಂಡೊಯ್ದಿದ್ದೇ ಈ ಹಲ್ಲೆಗೆ ಕಾರಣವಾಗಿದೆ.

ಮೇಲ್ಜಾತಿಯವರಾದ ಹಳ್ಳಿಯ ಸರಪಂಚ್‌ನ ಮಾತು ಕೇಳಿ, ಅಲ್ಲಿನ ಪೊಲೀಸರೂ ದಲಿತರಿಗೆ, ಮೇಲ್ಜಾ ತಿಯವರ ಗಲ್ಲಿಗಳಲ್ಲಿ ಉತ್ಸವವನ್ನು ಕೊಂಡೊಯ್ಯಬಾರ ದೆಂದು ಆಜ್ಞೆ ನೀಡಿದ್ದರೆನ್ನಲಾಗಿದೆ. ಆದರೆ ಇದನ್ನು ಧಿಕ್ಕರಿ ಸಿದ ದಲಿತರ ಮೇಲೆ, ಹಠಾತ್ತನೆ ಅಮಾನವೀಯ ಆಕ ್ರಮಣ ಮಾಡಿದ ಅಪರಾಧಿಗಳನ್ನು ಬಂಧಿಸಿ, ಶಿಕ್ಷಿಸದೆ, ೧೫ ದಲಿತರ ವಿರುದ್ಧ ಕೊಲೆ ಪ್ರಯತ್ನದ ಸುಳ್ಳು ಆರೋಪ ಹೊರಿಸಿ ಅವರನ್ನು ಬಂಧಿಸಿರುವುದು, ಭಾರ ತೀಯ ಸಮಾಜದಲ್ಲಿ ದಲಿತರ ಸ್ಥಾನವನ್ನು ಸೂಚಿಸುತ್ತದೆ. ಈ ರೀತಿಯ ಪ್ರಕರ ಣಗಳು, ವಿಶೇಷವಾಗಿ ಉತ್ತರಭಾರತ ದಲ್ಲಿ ಸರ್ವೇಸಾಮಾನ್ಯವಾಗಿ ರುತ್ತದೆ. ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ, ದಲಿತ ಸಮು ದಾಯದ ದೇವರ ಉತ್ಸವ ವಾಗಲೀ, ಮದುವೆಯ ದಿಬ್ಬಣ ವಾಗಲೀ, ಮೇಲ್ಜಾತಿ ಯವರ ಬೀದಿಗಳಲ್ಲಿ ಹಾದು ಹೋಗಬಾರದೆಂಬ ಕಾನೂನು ಎಲ್ಲಿದೆ? ಬಿಹಾರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಯಥೇಚ್ಛವಾಗಿ ನಡೆಯುವ ಮೇಲ್ಜಾತಿಯವರ ಈ ಕೈಂಕರ್ಯ ಕಾನೂನು ಬಾಹಿರವಾ ದರೂ ಅವರಿಗೆ ಶಿಕ್ಷೆಯಾಗುವುದಿಲ್ಲವೇಕೆ? ಪೇಜಾವರರ ಸಹವರ್ತಿಗಳಾದ ಅಯೋಧ್ಯಾ ಚಳುವಳಿಯ ನೇತಾರರು, ಹಿಂದುಳಿದವರು ಮೇಲ್ಜಾತಿಯವರಿಗೆ ಈ ರೀತಿಯ ಬಹಿಷ್ಕಾರ ಹಾಕಿದಲ್ಲಿ, ಹಿಂದು ಸಮಾಜದ ಗತಿ ಏನು?

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪೇಜಾ ವರರು ಮತ್ತವರ ಉದಾರವಾದೀ(?) ಸಹವರ್ತಿಗಳು ತಮ್ಮ ತಮ್ಮ ಮಠಗಳಲ್ಲಿ, ಊರುಗಳಲ್ಲಿ, ಇಂದಿಗೂ ಇರುವ ಅಗ್ರಹಾರ-ಕೇರಿ ಸಂಸ್ಕೃತಿಯನ್ನು ತೊಡೆದು ಹಾಕ ಬಲ್ಲರೇ? ಇತ್ತೀಚಿನ ದಿನಗಳಲ್ಲಿ ಮೇಲ್ಜಾತಿಯವರ ಹಿಡಿತ ದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಮತ್ತು ಗೃಹ ಬಡಾ ವಣೆಗಳಲ್ಲಿ ಮಾಂಸಾಹಾರದ ನೆಪವೊಡ್ಡಿ, ಹಸು-ಎಮ್ಮೆ ಸಾಕುವುದರ ನೆಪವೊಡ್ಡಿ, ಬ್ರಾಹ್ಮಣ ಅಗ್ರಹಾರಗಳನ್ನು, ಪ್ರಮುಖ ನಗರಗಳಲ್ಲಿ ಪುನರುಜ್ಜೀವನಗೊಳಿಸುತ್ತಿರುವ ಪ್ರಕ್ರಿ ಯೆಯನ್ನು ಇವರು ತಡೆಯಬಲ್ಲರೇ? ತಮ್ಮ ಹೆಡ್ ಆಫೀಸ್ ಆದ ಉಡುಪಿಯಲ್ಲಿ, ಬ್ರಾಹ್ಮಣ ಬೀದಿಯಲ್ಲಿ, ದಲಿತರಿಗೆ ವಾಸಿಸಲು ಅವಕಾಶ ಮಾಡಿಕೊಡುವರೇ? ಈ ಎಲ್ಲಾ ಪ್ರಶ್ನೆಗಳಿಗೆ, ಪೇಜಾವರರಿಂದ ಸೂಕ್ತ ಉತ್ತರ ಬಯ ಸುವುದಿರಲಿ, ಊಹಿಸುವ ಸಾಧ್ಯತೆಯೂ ಇಲ್ಲ.

ಏಕೆಂದರೆ ಅವರ ಅಥವಾ ಅವರ ಸಹವರ್ತಿಗಳ ದಲಿತ ಪರ ಕಾಳಜಿಯ ಹಿಂದೆ ಒಂದು ವಿಶಾಲವಾದ, ದೂರ ದೃಷ್ಟಿಯುಳ್ಳ ಕಾರಣವಿದೆ. ಅದು ಹಿಂದು ಧರ್ಮದ ಪುನರುತ್ಥಾ ನವೆಂದು ಹೇಳುವ ಅಗತ್ಯವಿಲ್ಲ. ಹಿಂದು ಧರ್ಮದ ಪುನರುಜ್ಜೀವನಕ್ಕಾಗಿ, ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವ ಕುತಂತ್ರಕ್ಕಾಗಿ, ಹಿಂದುತ್ವವಾದಿ ಗಳಿಗೆ ಅಪಾರ ಸಂಖ್ಯೆಯ ಹರಕೆಯ ಕುರಿಗಳ ಅವಶ್ಯಕತೆ ಇದೆ. ಆದರೆ ಭಾರತೀಯ ದಲಿತ ಸಮಾಜ ಈಗ ಎಚ್ಚೆತ್ತು ಗೊಂಡಿದ್ದು, ಹಿಂದು ಮೂಲಭೂತವಾದಿಗಳ ಕುತಂತ್ರ ಗಳಿಗೆ ಬಲಿಯಾಗುವುದಿಲ್ಲ ಎಂಬ ಅಂಶವನ್ನು ಪೇಜಾವರ & ಕೋ ಅರಿಯುವುದು ಅವಶ್ಯ. □

ಮೀಸಲಾತಿ: ಪ್ರತಿಭಾನ್ವೇಷಣೆಗಾಗಿ

ಚರ್ಚೆ

ಹಿಂದುಳಿದ ವರ್ಗಕ್ಕೆ ಮೀಸಲಾತಿ ಕೊಡಬೇಕೆಂಬ ಪ್ರಸ್ತಾಪ ಬಂದಾಗ ಅಸಹನೆ ಎದ್ದಿದೆ. ಹುಟ್ಟಿಗೂ ಪ್ರತಿಭೆಗೂ, ಜಾತಿಗೂ ಪ್ರತಿಭೆಗೂ ಏನೇನೂ ಸಂಬಂಧ ಇಲ್ಲದಿರುವುದನ್ನು ಕಾಣುವಷ್ಟಾದರೂ ಪ್ರತಿಭೆ ಭಾರತಕ್ಕೆ ಇನ್ನೂ ಬರಲಿಲ್ಲ. ದಲಿತರನ್ನು ಹಿಂದುಳಿದವರನ್ನು ಹಳ್ಳಿಗರನ್ನು ಕಾರ್ಮಿಕರನ್ನು ವಂಚಿಸುವ ಬುದ್ದಿಯೇ ಭಾರತದಲ್ಲಿ ಪ್ರತಿಭೆ ಅನ್ನಿಸಿಕೊಂಡು ಬಿಟ್ಟಿದೆ. ಈಗ ನಮ್ಮ ಕಣ್ಣೆದುರಿಗೆ ಸಿಇಟಿ ಅಂಕಗಳನ್ನು ಮಾತ್ರ ಪರಿಗಣಿಸುವ ಸಂಚು ನಡೆಯುತಲಿದ್ದು ವಿದ್ಯಾಭ್ಯಾಸದ ಕತ್ತು ಹಿಚುಕಲಿರುವ ಕ್ರೌರ್ಯವೂ ಪ್ರತಿಭೆ ಅನ್ನಿಸಿಕೊಳ್ಳುತ್ತದೆ. ಅಂದರೆ ಕುತಂತ್ರ ಬುದ್ಧಿಯೇ ಇಲ್ಲಿ ಪ್ರತಿಭೆಯಾಗಿಬಿಟ್ಟಿದೆ.

ದೇವನೂರ ಮಹಾದೇವ



ಇಂದಿಗೆ ಸರಿಯಾಗಿ ೧೩೫ ವರ್ಷಗಳ ಹಿಂದೆ 'ಮೈಸೂರಿನವರಿಗಾಗಿ ಮೈಸೂರು' ಎಂದು ಮೀಸಲಾತಿ ಪರಿಕಲ್ಪನೆ ಮೊಳಕೆಯಾದಾಗ, ಆಗಲೂ ಕೇಳಿ ಬಂದ ಕುಹಕವು–ಮೀಸಲಾತಿಯಿಂದ ಪ್ರತಿಭೆಗೆ ಮನ್ನಣೆ ಇಲ್ಲದಂತಾಗುತ್ತದೆ, ಇದರಿಂದಾಗಿ ಸಮರ್ಥತೆ ಕುಗ್ಗುತ್ತದೆ. ಹಾಗಾಗಿ ಅಭಿವೃದ್ಧಿ ಕುಂಠಿತವಾಗುತ್ತದೆ ಎಂಬುದೇ ಆಗಿತ್ತು.

ಆಗ ಮೀಸಲಾತಿ ಕೇಳಿದವರು–ಹೆಬ್ಬಾರ್ ಅಯ್ಯಾಂಗಾರ್ ಸಮುದಾಯ. ಒಂದು ಬ್ರಾಹ್ಮಣ ಪಂಗಡವು ಇನ್ನೊಂದು ಬ್ರಾಹ್ಮಣ ಪಂಗಡದಿಂದ ಮೀಸಲಾತಿ ಪಡೆಯಲು ಹೋರಾಡಿತ್ತು. ಕೊನೆಗೆ ಪಡೆಯಿತು.

ಹೆಬ್ಬಾರ್ ಅಯ್ಯಾಂಗಾರ್ ಸಮುದಾಯ ಮೀಸಲಾತಿ ಪಡೆದು ಮೂವತ್ತು ವರ್ಷಗಳಾದ ಮೇಲೆ ಪ್ರೇರಿತರಾದ ಲಿಂಗಾಯಿತ ಒಕ್ಕಲಿಗ ಸಮುದಾಯ ತಮಗೂ ಮೀಸಲಾತಿ ಬೇಕೆಂದು ಧ್ವನಿ ತೆಗೆದಾಗ– ಆಗಲೂ ಕೇಳಿ ಬಂದ ಕುಹಕ–ಪ್ರತಿಭೆಗೆ ಮನ್ನಣೆ ಇಲ್ಲದಂತಾಗುತ್ತದೆ, ಇದರಿಂದಾಗಿ ಸಮರ್ಥತೆ ಕುಗ್ಗುತ್ತದೆ, ಹಾಗಾಗಿ ಅಭಿವೃದ್ಧಿ ಕುಂಠಿತವಾ ಗುತ್ತದೆ. ಈ ಕುಹಕ ಆಡುವಾಗ ಅದರಲ್ಲಿ ಪ್ರಪ್ರಥಮವಾಗಿ ಮೀಸಲಾತಿ ಯನ್ನು ಪಡೆದಿದ್ದ ಹೆಬ್ಬಾರ್ ಅಯ್ಯಾಂಗಾರ್ ಸಮುದಾಯವೂ ಸೇರಿತ್ತು. ಒಂದು ಕಾಲದಲ್ಲಿ ಮೀಸಲಾತಿ ಪಡೆದವರೇ ಇನ್ನೊಬ್ಬರ ಮೀಸಲಾತಿ ಪ್ರಶ್ನೆ ಬಂದಾಗ ಕುರುಡರಾಗಿ ವಿರೋಧಿಸುವುದು ಭಾರತದ ಸಂಪ್ರದಾಯ ವಾದಂತೆ ಇದೆ. ಯಾಕೆಂದರೆ ಇಂದೂ ಕೂಡ ಮೀಸಲಾತಿ ಪ್ರಶ್ನೆ ಬಂದಾಗಲೆಲ್ಲ ಕೇಳಿ ಬರುವುದು–ಅದೇ ಮಾತು, ಅದೇ ರಾಗ, ಅದೇ ಕುಹಕ.

ಆದರೆ ಇದೇ ಕುಹಕವನ್ನು, ಕಮ್ಮಿ ಅಂಕವನ್ನು ಪಡೆದೂ ವಂತಿಕೆ, ಕ್ಯಾಪಿಟೇಷನ್ ಶುಲ್ಕ ಕಟ್ಟಿ ದುಡ್ಡು ಸುರಿದು ಸೀಟು ಪಡೆಯುವ ಉಳ್ಳವರ ಬಗ್ಗೆ ವಿದ್ಯಾರ್ಥಿಗಳಾಗಲಿ ಪ್ರಜ್ಞಾವಂತರಾಗಲಿ ಕುಹಕ ಮಾಡುತ್ತಿಲ್ಲ. ಹಾಗದರೆ ಹಣವೇ ಪ್ರತಿಭೆಯೆ? ಇಂದು ಹಣವು ಶಿಕ್ಷಣ ಕ್ಷೇತ್ರದಲ್ಲೂ ಅಟ್ಟಹಾಸ ಮಾಡುತ್ತಿರುವುದನ್ನು ಕಂಡು ಎಲ್ಲರೂ ಸುಮ್ಮನಿದ್ದಾರೆ. ಇದು ಏನನ್ನು

ಹೇಳುತ್ತದೆ? ಮೀಸಲಾ
ವಿರೋಧಿ ಚಳವಳಿಯ
ಪ್ರಾಮಾಣಿಕ ಅಲ್ಲ ಅ
ಮಾಣಿಕ ಎಂದು ಸಾ
ಸಾರಿ ಹೇಳುತ್ತದೆ. ನಾ
ಮಾಡಬೇಕಾಗಿದ್ದು
ಏನು? ವಂತಿಕೆ, ಕ್ಯಾ
ಟೇಷನ್ ಫೀ ಇಲ್ಲ
ಸಮಾನ ಏಕರೂಪ ಶಿಕ್ಷ
ವ್ಯವಸ್ಥೆಗೆ ಹೋರಾ
ಬೇಕಿತ್ತು. ಸರ್ಕಾರ
ಹೇಳಬೇಕಿತ್ತು– "ಶಿಕ್ಷ
ಸಂಸ್ಥೆಗಳು ನಷ್ಟಕ್ಕೊ
ಗಾದಂತೆ ಅವಕ್ಕೆ ಹೆಚ್ಚಿ
ಅನುದಾನ ನೀಡಿ; ತಗಲು
ಹೆಚ್ಚುವರಿ ಅನುದಾನಕ್ಕಾ
ಮದ್ಯ, ಪೆಟ್ರೋಲ್, ಸೌಂದರ್ಯವರ್ಧಕ ವಸ್ತುಗಳ ಮೇಲೆ ಯದ
ತದ್ವಾ ತೆರಿಗೆ ಹಾಕಿರಿ. ಆದರೆ ಕಡ್ಡಾಯ, ಏಕರೂಪವಾದ, ವಂತಿ
ಕ್ಯಾಪಿಟೇಷನ್ ಫೀ ಇಲ್ಲದ ಶಿಕ್ಷಣ ವ್ಯವಸ್ಥೆ ನಮ್ಮದಾಗಲಿ–" ಎಂದ
ಹೋರಾಡಬೇಕಿತ್ತು. ಹಣಕ್ಕೂ ಪ್ರತಿಭೆಗೂ ಏನೇನೂ ಸಂಬಂಧ ಇ
ಎಂದು ಹೇಳುತ್ತ ಇದನ್ನು ಸಹಿಸಬಾರದಾಗಿತ್ತು. ಅಂದರೆ ಯಾವುದನ
ಸಹಿಸಿಕೊಳ್ಳಬಾರದಿತ್ತೊ ಅದನ್ನು ಸಹಿಸಿಕೊಂಡಿದ್ದೇವೆ.

ಆದರೆ ಇಂದು ಅಸಹನೆ ಹಿಂದುಳಿದ ವರ್ಗಕ್ಕೆ ಮೀಸಲಾ
ಕೊಡಬೇಕೆಂಬ ಪ್ರಸ್ತಾಪ ಬಂದಾಗ ಎದ್ದಿದೆ. ಹುಟ್ಟಿಗೂ ಪ್ರತಿಭೆಗೂ
ಜಾತಿಗೂ ಪ್ರತಿಭೆಗೂ ಏನೇನೂ ಸಂಬಂಧ ಇಲ್ಲದಿರುವುದನ್ನು ಕಾಣುವಷ
ದರೂ ಪ್ರತಿಭೆ ಭಾರತಕ್ಕೆ ಇನ್ನೂ ಬರಲಿಲ್ಲ. ದಲಿತರನ್ನು ಹಿಂದುಳಿದವರನ
ಹಳ್ಳಿಗರನ್ನು ಕಾರ್ಮಿಕರನ್ನು ವಂಚಿಸುವ ಬುದ್ದಿಯೇ ಭಾರತದಲ್ಲಿ ಪ್ರತಿ
ಅನ್ನಿಸಿಕೊಂಡು ಬಿಟ್ಟಿದೆ. ಈಗ ನಮ್ಮ ಕಣ್ಣೆದುರಿಗೆ ಸಿಇಟಿ ಅಂಕಗಳನ
ಮಾತ್ರ ಪರಿಗಣಿಸುವ ಸಂಚು ನಡೆಯುತಲಿದ್ದು ವಿದ್ಯಾಭ್ಯಾಸದ ಕತ
ಹಿಚುಕಲಿರುವ ಕ್ರೌರ್ಯವೂ ಪ್ರತಿಭೆ ಅನ್ನಿಸಿಕೊಳ್ಳುತ್ತದೆ. ಅಂದರೆ ಕುತಂ
ಬುದ್ಧಿಯೇ ಇಲ್ಲಿ ಪ್ರತಿಭೆಯಾಗಿಬಿಟ್ಟಿದೆ.

ಹೀಗಾಗಿರುವುದಕ್ಕೆ ಭಾರತದ ಸುಪ್ತ ಮನಸ್ಸಿನಲ್ಲಿ ಕೂತಿರು
ಭೂತ ಚೇಷ್ಟೆಯೇ ಕಾರಣ ಅನ್ನಿಸುತ್ತದೆ. ಆ ಭೂತವೇ ಮನುಧರ್ಮಶಾಸ
ಪಾದ ಹಿಂದಕ್ಕಿರುವ ಈ ಪಿಶಾಚಿ ಭಾರತವನ್ನು ಸದಾ ಹಿಂದಕ್ಕೆಳೆಯು
ರುತ್ತದೆ. ಅಸಮಾನತೆ, ತಾರತಮ್ಯ, ಮೇಲು ಕೀಳುಗಳನ್ನು ಆಹಾ

ದಲಿತ ಹಿಂದುಳಿದ ತಳ
ಸಮುದಾಯಗಳಿಗೆ ಇತರರು ಅವರಿಗೆ
ಕೊಡುವುದು ಎನ್ನುವುದನ್ನಾಗಲಿ ಅಥವಾ
ಅವರೇ ಹಕ್ಕಿನಿಂದ ಪಡೆದರು
ಎನ್ನುವುದನ್ನಾಗಲಿ ಮೀರಿ, ದೇಸಿಜ್ಞಾನ
ಸಾಂಸ್ಕೃತಿಕ ವೈವಿಧ್ಯತೆಗಳ ಈ ತಳ
ಸಮುದಾಯಗಳು ನಾಡಿನ ಸಂಪತ್ತು,
ಇದನ್ನೇ ತುಳಿದುಕೊಂಡು ತಿರುಗಾಡುತಿ
ದ್ದೇವೆ, ಅಂತ್ಯಜ ಆದಿಯಾಗಿ ಸರ್ವರೂ
ಅಭಿವ್ಯಕ್ತಿಗೊಂಡ ಹನ್ನೆರಡನೆ
ಶತಮಾನದ ವಚನಯುಗದ
ವಾಸ್ತವವು ಇಂದು ನಮ್ಮ ಕನಸಾದರೂ
ಆಗಬೇಕಾಗಿದೆ. ಇದು ಬೆಳಿಗ್ಗೆ ನಾವೆದ್ದು
ನೆನೆಯ ಬೇಕಾದುದು ಎಂಬಷ್ಟು ಅರಿವು
ನಮಗೆ ಬಂದರೆ ಅಷ್ಟು ಸಾಕು. ಈ
ಭಾರತದಲ್ಲೆ ಥರಾವರಿ ಪ್ರತಿಭೆಗಳು
ಚಿಗುರೊಡೆಯುತ್ತವೆ.

ಮೀಸಲಾತಿ ಚರ್ಚೆ

ಮಾಡಿ ಕೊಂಡಿರುವ ಇದು ಇಂದು ಹಸಿವಿನಿಂದ ಹೊಟ್ಟೆಯಲ್ಲಿ ಒದ್ದಾಡುತ್ತಿದೆ. ಇದರ ಶತೃ ಪಾದ ಮುಂದಕ್ಕೆ ಇರುವ ವರ್ತಮಾನದ ಭಾರತದ ಸಂವಿಧಾನ. ಈಗ ನಮ್ಮ ಎದುರಿಗೆ ಜರುಗುತ್ತಿರುವುದರೆಲ್ಲದರ ಆಳದಲ್ಲಿ ಮನುಧರ್ಮ ಶಾಸ್ತ್ರಕ್ಕೂ ಸಂವಿಧಾನಕ್ಕೂ ಯುದ್ಧ ನಡೆಯುತ್ತಿದೆ ಎಂದೇ ಅನ್ನಿಸುತ್ತದೆ. ಭಾರತದ ಸುಪ್ತ ಮನಸ್ಸಿನೊಳಗಿರುವ ಈ ಮನು ಧರ್ಮ ಶಾಸ್ತ್ರದ ಪಿಶಾಚಿಯ ಕೈವಾಡ ಇಲ್ಲದಿದ್ದರೆ, ಹಾಗೆ ತಾನೇ ನ್ಯಾಯಾಲಯಕ್ಕೆ ಸ್ಥಳೀಯರಿಂದ ಕಿತ್ತು ಅನಿವಾಸಿ ಭಾರತೀಯರಿಗೆ ಮೆರಿಟ್ ಅನ್ನೂ ಗಾಳಿಗೆ ತೂರಿ ಶೇ. ೧೫ರ ಮೀಸಲಾತಿ ನೀಡುವ ಮನಸ್ಸಾಗುತ್ತಿತ್ತು? ಸಾವಿರಾರು ವರ್ಷಗಳ ಕಾಲ ವಂಚಿಸಲ್ಪಟ್ಟ ಸಮುದಾಯಗಳಿಗೆ ನೂರು ವರ್ಷಗಳಾದರೂ ಅವಕಾಶ ಕೊಡುವ ಉದಾರತೆ ಬಾರದಿರಲು ಈ ಯುದ್ಧವೇ ಕಾರಣ ಎನ್ನಿಸುತ್ತದೆ.

ನಿಜ, ಈಗ ಮೀಸಲಾತಿಗೆ ಹಾತೊರೆಯುತ್ತಿರುವ ಭಾರತದ ನೂರೆಂಟು ತಳ ಜಾತಿಗಳ ಸಮೂಹಗಳು ಚಾತುರ್ವರ್ಣದ ಮೇಲುಕೀಳು ಅಂಟುರೋಗಕ್ಕೆ ತುತ್ತಾಗಿ ರೆಕ್ಕೆ ಇಲ್ಲದ ಹುಳುಗಳಂತೆ ಒದ್ದಾಡುತ್ತಿವೆ, ನಿಜ. ಹೀಗಿದ್ದೂ ಇದರೊಳಗೇನೆ, ಈ ಜಾತಿ ಸಮೂಹಗಳು ತಲೆತಲಾಂತರದ ವೈವಿಧ್ಯಮಯ ಅನುಭವಗಳ ಗಣಿಗಳೂ ಆಗಿರುವುದನ್ನು ಇಂದು ಎಚ್ಚೆತ್ತು ಗಮನಕೊಟ್ಟು ನೋಡಬೇಕಾಗಿದೆ. ಈ ಅಪಾರ ಅನುಭವಗಳು ರೆಕ್ಕೆ ಇಲ್ಲದೆ ಬಿದ್ದಿವೆ. ರೆಕ್ಕೆ ಬಂದರೆ ಇದೇ ಸಂಪತ್ತಾಗುತ್ತದೆ. ಉದಾ: ಶಾಸ್ತ್ರ, ಮಾಟವಿದ್ಯೆಯ ಹಿನ್ನೆಲೆಯ ಪ್ರತಿಭಾನ್ವಿತನೊಬ್ಬ–ಮನಃಶಾಸ್ತ್ರದ ಉನ್ನತ ವ್ಯಾಸಂಗ ಮಾಡಿದರೆ–ಮನಃಶಾಸ್ತ್ರದ ಉದ್ದ ಅಗಲವೇ ವಿಸ್ತರಿಸಬಹುದಾದ ಸಾಧ್ಯತೆ ಹೆಚ್ಚಿರುತ್ತದೆ. ಈ ಹಿನ್ನೆಲೆ ಇಲ್ಲದ ಪ್ರತಿಭಾನ್ವಿತನೊಬ್ಬ ಇರುವ ಶಾಸ್ತ್ರವನ್ನು ಅರೆದು ನುಂಗಿ ಒಪ್ಪಿಸುವುದನ್ನು ಮಾಡಿದರೆ, ಅದೇ ದೇಸಿ ಜ್ಞಾನ ಹಿನ್ನೆಲೆಯ ಪ್ರತಿಭಾನ್ವಿತನೊಬ್ಬ ಆ ಶಾಸ್ತ್ರದ ಸಾಧ್ಯತೆಗಳನ್ನೆ ಹೆಚ್ಚಿಸಬ ಹುದು. ಇಲ್ಲಿ ಮೊದಲನೆಯದು ಬುದ್ಧಿಯಾದರೆ ಎರಡನೆಯದು ಪ್ರತಿಭೆ. 'ಪ್ರತಿಭಾನ್ವೇಷಣೆಗಾಗಿಯೇ ಮೀಸಲಾತಿ ಬೇಕು. ಎಲ್ಲಾ ಜಾತಿ ಜನಾಂಗ ಗಳಿಗೂ ಅವಕಾಶ ಸಮುದ್ರದಲ್ಲಿ ಮೀನು ಹಿಡಿದಂತೆ'–ಡಾ॥ ಯು. ಆರ್. ಅನಂತಮೂರ್ತಿ ಅವರ ಈ ರೂಪಕ ಒಂದೇ ಮಾತಲ್ಲಿ ಎಲ್ಲಾ ಹೇಳುತ್ತದೆ. ಹಾಗೆಯೇ ಅಪಾರ ದೇಸಿಜ್ಞಾನ ಸಂಪತ್ತುಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಈ ತಳ ಜಾತಿ ಸಮುದಾಯಗಳ ಮೇಲು ಕೀಳು ರೋಗದಿಂದ ತಪ್ಪಿಸಿಕೊಂಡರೆ ಆಗ ಅವು ಘನತೆ ಪಡೆದು ಪ್ರತಿಯೊಂದು ಜಾತಿಯೂ ಸಾಂಸ್ಕೃತಿಕ ವೈವಿಧ್ಯಮಯ ಸಮುದಾಯವಾಗಿ ರೂಪಾಂತರ ಪಡೆಯುತ್ತವೆ.

ಉದಾಹರಣೆಗೆ ತಮಟೆಯ ರೂಪಾಂತರ. ಅವರ್ಣೀಯರಾದ ದಲಿತರು ಗ್ರಾಮದ ಆಚರಣೆಗಳಿಗೆ ಬಿಟ್ಟಿಯಾಗಿ ತಮಟೆ ಬಡಿಯುವುದು ಊರಿನ ತಲೆತಲಾಂತಾರದ ಹಕ್ಕಾಗಿತ್ತು. ದಲಿತರು ನಿರಾಕರಿಸಿದರೆ ಆ ದಲಿತರ ಚರ್ಮ ಸುಲಿಯುವವರೆಗೂ ಕ್ರೌರ್ಯ ಇತ್ತು. ಸುಲಿಗೆ ಅವಮಾನ ತಮಟೆಯೊಡನೆ ಬೆರತು ಕೊಂಡಿತ್ತು. ೭೦ ರ ದರದಲ್ಲಿ ಎಚ್ಚೆತ್ತ ದಲಿತರ ಧ್ವನಿ ತಮಟೆ ಬಡಿಯದನ್ನು ನಿರಾಕರಿಸುವಂತೆ ಕರೆ ನೀಡಿತ್ತು. ಇದರಿಂದಾಗಿ ದಲಿತರು ಬಹಿಷ್ಕಾರ ಹಲ್ಲೆಗಳಿಗೆ ತುತ್ತಾಗಬೇಕಾಯಿತು. ಇದಾಗಿ ೩೦ ವರ್ಷಗಳಾದ ಮೇಲೆ ತಮಟೆಯು ಸುಲಿಗೆ ಅವಮಾನಗಳಿಂದ ಬಿಡುಗಡೆ ಯಾಗಿ ಸ್ವತಂತ್ರವಾಯಿತು, ಅದ್ಭುತವಾದ ಒಂದು ಕಲಾ ವಾದ್ಯವಾಯಿತು. ಮೊದಲು ತಮಟೆಯನ್ನು ಬಹಿಷ್ಕಾರಿಸಿದ್ದ ದಲಿತ ಸಂಘಟನೆಗಳೇ ಇಂದು ತಮ್ಮ ಸ್ವಾಭಿಮಾನದ ಅಭಿವ್ಯಕ್ತಿಯಾಗಿ ತಮಟೆಯನ್ನು ತಮ್ಮ ಕೈಲಿ ಹಿಡಿದಿದ್ದಾರೆ. ತಮಟೆಯಂತೆಯೇ ತಳ ಸಮುದಾಯಗಳನ್ನು ನೋಡಬೇಕಾಗಿದೆ. ತಳ ಸಮುದಾಯಗಳು ಸುಲಿಗೆ, ಅವಮಾನ, ತಾರತಮ್ಯನ್ನು ಮಾಡುವುದು, ಮಾಡಿಸಿಕೊಳ್ಳುವುದು ಇವುಗಳಿಂದ ಬಿಡುಗಡೆ ಪಡೆದರೆ ಅವೇ ರೂಪಾಂತರಗೊಂಡು ಸಾಂಸ್ಕೃತಿಕ ಸಮುದಾಯಗಳಾಗುತ್ತವೆ.

ಬುದ್ಧಿಗೂ ಮೀರಿದ ಪ್ರತಿಭೆ ಹುಟ್ಟು ಪಡೆಯುವಲ್ಲಿ ದೇಸಿಜ್ಞಾನ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳ ಸಂಪತ್ತೂ ದ್ರವ್ಯವಾಗಿರುತ್ತದೆ. ಶಿಕ್ಷಣ ವಿದ್ಯೆಗೇ ಪ್ರತಿಭೆ ಬರುವಂತಾಗಲು ದೇಸಿಜ್ಞಾನ ಸಾಂಸ್ಕೃತಿಕ ವೈವಿಧ್ಯತೆಗಳ ಹಿನ್ನಲೆಯ ತಳಪಾಯದ ಮೇಲೆ ಶಿಕ್ಷಣ ವಿದ್ಯೆಯನ್ನು ವಿಕಸಿತ ಗೊಳಿಸಬೇಕಾಗಿದೆ.

ಆದ್ದರಿಂದ ದಲಿತ ಹಿಂದುಳಿದ ತಳ ಸಮುದಾಯಗಳಿಗೆ ಇತರರು ಅವರಿಗೆ ಕೊಡುವುದು ಎನ್ನುವುದನ್ನಾಗಲಿ ಅಥವಾ ಅವರೇ ಹಕ್ಕಿನಿಂದ ಪಡೆದರು ಎನ್ನುವುದನ್ನಾಗಲಿ ಮೀರಿ, ದೇಸಿಜ್ಞಾನ ಸಾಂಸ್ಕೃತಿಕ ವೈವಿಧ್ಯತೆಗಳ ಈ ತಳ ಸಮುದಾಯಗಳು ನಾಡಿನ ಸಂಪತ್ತು, ಇದನ್ನೇ ತುಳಿದುಕೊಂಡು ತಿರುಗಾಡುತಿದ್ದೇವೆ, ಅಂತ್ಯಜ ಆದಿಯಾಗಿ ಸರ್ವರೂ ಅಭಿವ್ಯಕ್ತಿಗೊಂಡ ಹನ್ನೆರಡನೆ ಶತಮಾನದ ವಚನಯುಗದ ವಾಸ್ತವವು ಇಂದು ನಮ್ಮ ಕನಸಾದರೂ ಆಗಬೇಕಾಗಿದೆ. ಇದು ಬೆಳಿಗ್ಗೆ ನಾವೆದ್ದು ನೆನೆಯ ಬೇಕಾದುದು ಎಂಬಷ್ಟು ಅರಿವು ನಮಗೆ ಬಂದರೆ ಅಷ್ಟು ಸಾಕು. ಈ ಭಾರತದಲ್ಲೆ ಥರಾವರಿ ಪ್ರತಿಭೆಗಳು ಚಿಗುರೊಡೆಯುತ್ತವೆ. □

ಮನುಜ ಜಾತಿ ತಾನೊಂದೆ ವಲಂ

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅವರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳ ಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದ ವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇ ಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸು ವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾ ಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮೀಸಲಾತಿ ಮೀರಿದ ಮೀಸಲಾತಿ

ಎಸ್. ಗಂಗನಾಳ

ದೇಶದ ಶೈಕ್ಷಣಿಕ ರಂಗದ ಚಿನ್ನದ ಮೊಟ್ಟೆ ಇಡುವ ಕೋಳಿ ಎಂದೇ ಪರಿಗಣಿತವಾಗಿರುವ ಐಐಟಿ ಮತ್ತು ಐಐಎಂ ಗಳಲ್ಲಿ ಮೀಸಲಾತಿ ನೀಡುವ ಕುರಿತು ಇತ್ತೀಚೆಗೆ ದೊಡ್ಡ ಮಟ್ಟದ ಚರ್ಚೆ ಆರಂಭ ಗೊಂಡಿದೆ. ಆದರೆ ಕೇರಳದ ಕೊಝಿಕೋಡ್‌ನ 'ಸೆಂಟರ್ ಆಫ್ ಎಕ್ಸಲೆನ್ಸಿ' ಸಾಕಷ್ಟು ಹಿಂದಿನಿಂದ ಈ ಎರಡು ಶೈಕ್ಷಣಿಕ ವಿಭಾಗಗಳಲ್ಲಿ ದೀನ ದಲಿತರಿಗೆ ಮೀಸಲಾತಿ ಮೀರಿದ ಅನುಕೂಲ ಕಲ್ಪಿಸುವ ಮೂಲಕ ದಲಿತ-ಆದಿವಾಸಿ ಸಮುದಾಯದ ಮಧ್ಯ ಸದ್ದಿಲ್ಲದೇ ಕ್ರಾಂತಿಯ ದೀವಿಗೆ ಹೊತ್ತಿಸಿದೆ. ೨೦೦೨ರಲ್ಲಿ ಸ್ಥಾಪನೆಯಾದ ಸೆಂಟರ್ ಆಫ್ ಎಕ್ಸಲೆನ್ಸಿ (ಸಿಕ್ಸ್) ದುರ್ಬಲರ ಕನಸಿಗೆ ಇಂಬಾಗಿ ನಿಂತಿದೆ.

'ವೃತ್ತಿಪರ ಉನ್ನತ ಶಿಕ್ಷಣದಲ್ಲಿ ಮೀಸಲಾತಿ' ಕಲ್ಪಿಸುವ ಪ್ರಸ್ತಾಪ ಮತ್ತೊಂದು ಮಂಡಲ್ ವರದಿಯಾಗಿ ಪರಿಣಮಿಸಿದೆ. ಇದರ ವಿರುದ್ಧ ಹೊಟ್ಟೆ ತುಂಬಿದವರ ಬೊಬ್ಬೆ ತಾರಕಕ್ಕೇರಿದೆ. ಶಿಕ್ಷಣ ರಂಗದಲ್ಲಿ ಅರ್ಹತೆ ಮತ್ತು ಪಾಂಡಿತ್ಯಕ್ಕೆ ಪ್ರಾಧಾನ್ಯತೆ ಇರಬೇಕು. ಮೀಸಲಾತಿಯಿಂದ ಅದರ ಮೌಲ್ಯ ಹಾಳಾಗುತ್ತದೆ. ದಲಿತ-ಹಿಂದುಳಿದವರು ಉನ್ನತ ವೃತ್ತಿಪರ ಕೋರ್ಸ್‌ಗಳಿಗೆ ಸೇರುವುದರಿಂದ ಐಟಿ ಕಂಪನಿಗಳ ಲಾಭಾಂಶ ತಗ್ಗುತ್ತದೆ. ದೇಶದ ಉದ್ಯಮ ವಲಯ ನಾಶವಾಗುತ್ತದೆ...ಶಿಕ್ಷಣ ರಂಗ ಕುಲಗೆಡುತ್ತದೆ....ಹೀಗೆ ಇನ್ನೂ ಏನೇನೊ ಬಾಯಿಗೆ ಬಂದದ್ದನ್ನೆಲ್ಲ ಮೇಲ್ವಜಾತಿಯ ಬುದ್ಧಿಜೀವಿಗಳು ಬಡಬಡಿಸುತ್ತಿದ್ದಾರೆ.

ಬೌದ್ಧಿಕ ಹಕ್ಕಿನ ಪೇಟೆಂಟ್ ಈ ವರ್ಗಕ್ಕೆ ಅದ್ಯಾರು ಕೊಟ್ಟರೋ ಗೊತ್ತಿಲ್ಲ. ಕಳೆದ ಒಂದು ತಿಂಗಳಿಂದ ಬಹುತೇಕ ದೇಶದ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಒಬಿಸಿ ಮೀಸಲಾತಿ ಪ್ರಸ್ತಾಪದ ವಿರುದ್ಧ ಪ್ರತಿಭಟನೆ ನಡೆದಿದೆ. ಅದನ್ನು ದೇಶದ ಎಲೆಕ್ಟ್ರಾನಿಕ್ ಮಾಧ್ಯಮಗಳು ಸಾಕಷ್ಟು ಢಾಳಾಗಿಯೇ ತೋರಿಸುತ್ತಿವೆ. ಎನ್‌ಡಿಟಿವಿ ಯಜಮಾನರಂತೂ ನಿದ್ದೆ ಮಾಡುತ್ತಿಲ್ಲ. ತಾವು ಮೀಸಲಾತಿ ವಿರೋಧಿ ಎಂದು ನೇರವಾಗಿ ಹೇಳಿಕೊಳ್ಳುವ ತಾಕತ್ತಿಲ್ಲದ ಇಂಥ ಟಿವಿ ಯಜಮಾನರು ನಡೆಸುತ್ತಿರುವ ಸರ್ಕಸ್ ನಗೆತರಿಸುವಂತಹದ್ದು. ಈ ಕಾರಣಕ್ಕಾಗಿಯೇ ಬಿಹಾರದ ಕಾಲೇಜೊಂದರ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಂದ ಎನ್‌ಡಿಟಿವಿ ಸಿಬ್ಬಂದಿ ಒದೆ ತಿಂದಿದೆ. ಇಷ್ಟರ ಮೇಲೆ ಬುದ್ಧಿ ಕಲಿಯುವುದು ಒಳ್ಳೆಯದು.

ಈ ಎಲ್ಲ ಅರ್ಥಹೀನ ಪ್ರತಿಭಟನೆ ಮೀರಿದ ಸಾಧನೆಯೊಂದು ಕೋಝಿಕೋಡ್‌ನಲ್ಲಿ ಸಾಧ್ಯವಾಗಿದೆ. ಮೀಸಲಾತಿ ಮೀರಿದ ಮೀಸಲಾತಿ ವ್ಯವಸ್ಥೆಯೊಂದು ಇಲ್ಲಿನ ಸೆಂಟರ್ ಆಫ್ ಎಕ್ಸಲೆನ್ಸಿಯಲ್ಲಿ ಜಾರಿ ಇ... 'ಔಟ್ ಲುಕ್' ಮ್ಯಾಗಜಿನ್ ಪ್ರಕಟಿಸಿದ ಈ ಲೇಖನದ ಅನುವಾದ ಇಲ್ಲಿ...

ದೇಶದ ಶೈಕ್ಷಣಿಕ ರಂಗದ ಚಿನ್ನದ ಮೊಟ್ಟೆ ಇಡುವ ಕೋ... ಎಂದೇ ಪರಿಗಣಿತವಾಗಿರುವ ಐಐಟಿ ಮತ್ತು ಐಐಎಂಗಳಂಥ ಶಿಕ್ಷಣಗಳ... ಮೀಸಲಾತಿ ನೀಡುವ ಕುರಿತು ಇತ್ತೀಚೆಗೆ ದೊಡ್ಡ ಮಟ್ಟದ ಚರ್ಚೆ ಆರಂಭಗೊಂಡಿದೆ. ಆದರೆ ಕೇರಳದ ಕೊಝಿಕೋಡ್‌ನ 'ಸೆಂಟರ್ ಆ... ಎಕ್ಸಲೆನ್ಸಿ' ಸಾಕಷ್ಟು ಹಿಂದಿನಿಂದ ಇಂಥ ಶೈಕ್ಷಣಿಕ ವಿಭಾಗಗಳಲ್ಲಿ ದೀ... ದಲಿತರಿಗೆ ಮೀಸ ಲಾತಿ ಮೀರಿದ ಮೀಸಲಾತಿ ಅನುಕೂಲ ಕಲ್ಪಿಸು... ಮೂಲಕ ದಲಿತ-ಆದಿವಾಸಿ ಸಮುದಾಯದ ಮಧ್ಯ ಸದ್ದಿಲ್ಲದೇ ಕ್ರಾಂತಿಯ ದೀವಿಗೆ ಹೊತ್ತಿಸಿದೆ. ೨೦೦೨ರಲ್ಲಿ ಸ್ಥಾಪನೆಯಾದ ಸೆಂಟರ್ ಆಫ್ ಎಕ್ಸಲೆ... (ಎಕ್ಸ್) ದುರ್ಬಲರ ಕನಸಿಗೆ ಇಂಬಾಗಿ ನಿಂತಿದೆ. ಕೇಳರ ಸರ್ಕಾರ ಮ... ರಾಜ್ಯ ಎಸ್ಸಿ/ಎಸ್ಟಿ ಇಲಾಖೆ ಈ ಸಂಸ್ಥೆಯ ಸಂಪೂರ್ಣ ಖರ್ಚು ವೆ... ನೋಡಿಕೊಳ್ಳುತ್ತಿದೆ. ಐಐಎಂಗೆ ಪ್ರವೇಶ ಬಯಸುವ ದಲಿತ ವಿದ್ಯಾರ್ಥಿಗಳ... ಎಕ್ಸ್ ಆಧಾರವಾಗಿ ನಿಂತಿದೆ. ಪ್ರಸ್ತುತ ಆರು ತಿಂಗಳ ಕಾಲಾವಧಿಯ... ಸರ್ಟಿಫಿಕೇಟ್ ಕೋರ್ಸ್ ಅನ್ನು ನಡೆಸಲಾಗುತ್ತಿದೆ. ಇಲ್ಲಿ ಕೇರಳದ ದಲಿ... ಮತ್ತು ಆದಿವಾಸಿ ಸಮುದಾ ಯದ ಪದವೀಧರರಿಗೆ ಮಾತ್ರ ಪ್ರವೇ... ಮೀಸಲು. 'ಸಂಪರ್ಕ, ಮಾಹಿತಿ ತಂತ್ರಜ್ಞಾನ ಹಾಗೂ ನಿರ್ವಾಹಣ... ತಜ್ಞತೆ, ವ್ಯಕ್ತಿತ್ವ ವಿಕಸನ ಮತ್ತು ಸಾಹಸೋದ್ಯಮದ ಕುರಿತ ಐದು ತಿಂಗ... ಕೋರ್ಸ್ ನಡೆಸಲಾಗುತ್ತಿದೆ. ಕೋರ್ಸ್ ಬಳಿಕ ವಿದ್ಯಾರ್ಥಿಗಳು ಉನ್ನ... ಶಿಕ್ಷಣ ಹರಸಿ ಬೇರೆಡೆ ತೆರಳಬಹುದು ಅಥವಾ ಸಾರ್ವಜನಿಕ ಅಥವಾ ಖಾಸಗಿ ವಲಯದ ಐಟಿ ಉದ್ಯಮಗಳಲ್ಲಿ ಸೇವೆಗೆ ಸೇರಬಹುದು' ಎಂದ... ಸಂಸ್ಥೆಯ ನಿರ್ದೇಶಕ ದಾಮೋದರ ನಂಪೂದರಿ ಹೇಳುತ್ತಾರೆ.



ಮೀಸಲಾತಿ ಚರ್ಚೆ

ದಲಿತ–ಆದಿವಾಸಿಗಳ ಕಲ್ಯಾಣದ ಈ ಇಡೀ ಕಾರ್ಯ ುಕ್ಕೆ ಕೇರಳ ಸರ್ಕಾರ ಅದ್ಭುತ ರೀತಿಯಲ್ಲಿ ಬೆಂಬಲ ಡುತ್ತ ಬಂದಿದೆ. ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ೦೦೦ರು. ಮಾಸಿಕ ಸ್ಟೈಫಂಡ್ ನೀಡಿ ಪ್ರೋತ್ಸಾಹಿಸುತ್ತಿದೆ.

ಇದುವರೆಗೆ ಆರು ಬ್ಯಾಚ್ ಮುಗಿದಿವೆ. ೨೦೮ ದಲಿತ–ಿವಾಸಿ ವಿದ್ಯಾರ್ಥಿಗಳು ಸೆಂಟರ್ ಆಫ್ ಎಕ್ಸಲೆನ್ಸಿಯಿಂದ ದವಿ ಪಡೆದಿದ್ದಾರೆ.

ಇಲ್ಲಿಂದ ಬರೀ ಪದವಿ ಪಡೆದರೆ ಅದಕ್ಕೆ ಅರ್ಥ ಇಲ್ಲ. ದು ಹತ್ತರಲ್ಲಿ ಹನ್ನೊಂದಷ್ಟೆ. ಆದರೆ ಅದಕ್ಕೆ ಅರ್ಥ ಇದೆ ಂದು ಸಾಬೀತಾಗುವುದು ಕೋರ್ಸ್‌ನ 'ಯಶಸ್ಸಿನ ಪ್ರಮಾಣ' ುನಿಸಿದಾಗ ಮಾತ್ರ. ಕೊಝಿಕೋಡ್‌ನ ಈ ಸಂಸ್ಥೆ ಅಂಥ ಶಸ್ಸಿನ ಉತ್ತುಂಗದಲ್ಲಿದೆ. ಯಶಸ್ಸಿನ ಪ್ರಮಾಣ ಸರಾಸರಿ ಿಕ್ಕೂ ಹೆಚ್ಚಾಗಿದೆ. ೨೦೮ ಜನರಲ್ಲಿ ೩೭ ವಿದ್ಯಾರ್ಥಿಗಳು ನ್ನತ ಶಿಕ್ಷಣ ಬಯಸಿದ್ದರೆ, ಇನ್ನೂ ೩೪ ಜನ ಐಟಿ ಕಂಪನಿ ಲ್ಲಿ ಕೆಲಸಕ್ಕೆ ಸೇರಿ ಸೈ ಎನ್ನಿಸಿಕೊಂಡಿದ್ದಾರೆ.

ಇಲ್ಲಿ ಯಶಸ್ಸು ಕಂಡ ೮೦ ವಿದ್ಯಾರ್ಥಿಗಳಲ್ಲಿ ರ್.ದಿಲ್‌ರಾಜ್ ಸಾಧನೆ ಉಳಿದವರಿಗೆ ಸ್ಫೂರ್ತಿ ನೀಡುವಂತ ದ್ದು. ದಿಲ್‌ರಾಜ್ ಪ್ರತಿಭಾವಂತ. ಎಕ್ಸ್‌ನಿಂದ ಪದವಿ ಪಡೆದ ಿಕ ದಿಲ್‌ರಾಜ್ ಕ್ಯಾಟ್ (ಸಿಎಟಿ)ಪರೀಕ್ಷೆ ಪಾಸ್ ಮಾಡಿ ಝಿಕೋಡ್‌ನ ಐಐಎಂಗೆ ಪ್ರವೇಶ ಗಿಟ್ಟಿಸಿದರು. ಯಶಸ್ವಿಯಾಗಿ ೋರ್ಸ್ ಮುಗಿಸಿದ. ಈಗ ದಿಲ್‌ರಾಜ್ ಐಸಿಐಸಿಐ ಬ್ಯಾಂಕ್‌ನ ದರಾಬಾದ್ ಶಾಖೆಯೊಂದರಲ್ಲಿ ಅನ್ಶೂರೆನ್ಸ್ ಮ್ಯಾನೇಜರ್ ಿ ಸೇವೆ ಸಲ್ಲಿಸುತ್ತಿದ್ದಾರೆ.

ಸೆಂಟರ್ ಆಫ್ ಎಕ್ಸಲೆನ್ಸಿಗೆ ಸೇರುವ ಮುನ್ನ ದಿಲ್‌ರಾಜ್ ಮಾನ್ಯ ಕ್ಲಾರ್ಕ್ ಆಗಿದ್ದರು. ಆದರೆ ಅವರಲ್ಲಿನ ಪ್ರತಿಭೆ ರ್ಕ್ ಸ್ಥಾನದಲ್ಲಿಯೇ ಸ್ಥಿರಗೊಳ್ಳಲು ಬಿಡದೇ ಮುನ್ನಡೆಸಿತು. ಗ ಅವರ ವಾರ್ಷಿಕ ಆದಾಯ ೮ ಲಕ್ಷ ರೂಗಳು ಮೀರಿದೆ. ್‌ರಾಜ್ ಸಮಾಜದ ಗೌರವಾನ್ವಿತರ ಸಾಲಿನಲ್ಲಿ ದಿಟ್ಟವಾಗಿ ೆ ಎತ್ತಿ ನಿಂತಿರುವ ವ್ಯಕ್ತಿ. ಸೆಂಟರ್ ಆಫ್ ಎಕ್ಸಲೆನ್ಸಿಯಂಥ ಶಿಷ್ಟ ಶೈಕ್ಷಣಿಕ ಸಂಸ್ಥೆಯೊಂದು ಅಸ್ತಿತ್ವದಲ್ಲಿಲ್ಲದಿದ್ದರೆ ಇವತ್ತು ್‌ರಾಜ್ ಕ್ಲಾರ್ಕ್ ಸ್ಥಾನದಲ್ಲಿ ಸಲಾಮ್ ಮಾಡಬೇಕಿತ್ತು. ್‌ರಾಜ್ ಕೇವಲ ಒಂದು ನಿದರ್ಶನವಷ್ಟೆ. ಇಂಥ ಅನೇಕ ್‌ರಾಜ್‌ಗಳು ಇಂದು ಅವಕಾಶ ಇಲ್ಲದೇ ನಮ್ಮ ಮಧ್ಯ ದ್ದಿಲ್ಲದೇ ಕರಗಿ ಹೋಗುತ್ತಿದ್ದಾರೆ. ಈ ಹಿನ್ನೆಯಲ್ಲಿ 'ಮೆರಿಟ್ ುಖ್ಯ ಅಲ್ಲ, ಅವಕಾಶ ಮುಖ್ಯ' ಎಂಬ ದಾಮೋದರ್ ತಿಪಾದನೆ ಅರ್ಥಪೂರ್ಣ.

ಎಂಎಂ ರಿಶಾ, ಇಂಥ ಅವಕಾಶದ ಲಾಭ ಪಡೆದು ೇಲೇರಿ ನಿಂತ ಇನ್ನೊಂದು ಪ್ರತಿಭೆ. ಈಕೆ ೨೦೦೩ರಲ್ಲಿ ಟರ್ ಆಫ್ ಎಕ್ಸಲೆನ್ಸಿ ಪ್ರವೇಶ ಬಯಸಿ ಬಂದರು. ಅಷ್ಟೊತ್ತಿಗಾ ೇ ಅವರು ಎಲೆಕ್ಟ್ರಾನಿಕ್ಸ್‌ನಲ್ಲಿ ಬಿ.ಟೆಕ್ ಮುಗಿಸಿದ್ದರು. ಖಾಸಗಿ ಲೇಜೊಂದರಲ್ಲಿ ೧೮ ತಿಂಗಳು ಲೆಕ್ಚರರ್ ಆಗಿಯೂ ಸೇವೆ ಲ್ಲಿಸಿದ್ದರು. ಇಲ್ಲಿ ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್ ುಗಿಸಿದ ಬಳಿಕ ಎಂ.ಟೆಕ್ ಓದಿದರು. ಸದ್ಯ ಹೈದರಾಬಾದ್ ಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದರ ಉದ್ಯೋಗಿ. ಸಂಬಳ ಾರ್ಷಿಕ ೨.೭ ಲಕ್ಷ ರು. ಇದು ಐಐಎಂ ಟಾಪರ್‌ಗಳು ಂದು ಪಡೆಯುತ್ತಿರುವ ಸಂಬಳಕ್ಕೆ ಹೋಲಿಸಿದರೆ ಖಂಡಿತ ಸಮಟ್ಟದ್ದು. ರಿಶಾ ಹೋರಾಟದ ಹಿನ್ನೆಲೆ ಅರಿತಾಗ ಈ ಂಬಳದ ಮೌಲ್ಯ ಏನೆಂದು ಅರ್ಥವಾಗುತ್ತದೆ.

ರಿಶಾ ಮನೆತನದ ಮೊದಲ ಪದವೀಧರೆ. ಅವರು ಳಿದ ಕಥೆ ಅವರದೇ ಮಾತುಗಳಲ್ಲಿ ಕೇಳಿ: 'ನನ್ನ ತಾಯಿ ರ್ಸರಿಯಲ್ಲಿ ಮಕ್ಕಳ ಪಾಲಕಿ. ಅಪ್ಪ ದಿನಗೂಲಿ. ಸೆಂಟರ್ ಫ್ ಎಕ್ಸಲೆನ್ಸಿಯಲ್ಲಿ ಕಲಿಯುವ ಅವಕಾಶ ಸಿಕ್ಕಿದ್ದು ನನ್ನ ಪಾಲಿನ ಟರ್ನಿಂಗ್ ಪಾಯಿಂಟ್. ಅಲ್ಲಿ ನಾನು ಬರೀ ತಾಂತ್ರಿಕತೆ ಮಟ್ಟದ ಜ್ಞಾನವನ್ನಷ್ಟೇ ಪಡೆಯಲಿಲ್ಲ. ಅದರಿಂದಾಚೆಗೆ ವಿಶ್ಲೇಷಣಾ ತಜ್ಞತೆ, ಚರ್ಚಾಕೂಟಗಳಲ್ಲಿ ಸಮರ್ಥವಾಗಿ ಸಂವಾದಿಸುವ ಬುದ್ಧಿ ಮತ್ತೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಆತ್ಮವಿಶ್ವಾಸದ ನೆಲೆ ಕಂಡುಕೊಳ್ಳಲು ಈ ಕೇಂದ್ರ ನೆರವಾಯಿತು. ಇಲ್ಲಿ ನಾನು ಅನ್ಯ ಅನ್ನುವ ಭಾವನೆ ಬರಲಿಲ್ಲ. ಆದಿವಾಸಿ–ದಲಿತ ಸಹವರ್ತಿಗಳ ಜೊತೆ ತುಂಬು ಖುಷಿಯಿಂದ ಕಲಿಕೆ ಸಾಧ್ಯವಾಯಿತು'.

ಸೆಂಟರ್ ಆಫ್ ಎಕ್ಸಲೆನ್ಸಿಗೆ ಸೇರುವ ಮುನ್ನ ದಿಲ್‌ರಾಜ್ ಸಾಮಾನ್ಯ ಕ್ಲಾರ್ಕ್ ಆಗಿದ್ದರು. ಆದರೆ ಅವರಲ್ಲಿನ ಪ್ರತಿಭೆ ಕ್ಲಾರ್ಕ್ ಸ್ಥಾನದಲ್ಲಿಯೇ ಸ್ಥಿರಗೊಳ್ಳಲು ಬಿಡದೇ ಮುನ್ನಡೆಸಿತು. ಈಗ ಅವರ ವಾರ್ಷಿಕ ಆದಾಯ ೮ ಲಕ್ಷ ರೂಗಳು ಮೀರಿದೆ. ದಿಲ್‌ರಾಜ್ ಸಮಾಜದ ಗೌರವಾನ್ವಿತರ ಸಾಲಿನಲ್ಲಿ ದಿಟ್ಟವಾಗಿ ತಲೆ ಎತ್ತಿ ನಿಂತಿರುವ ವ್ಯಕ್ತಿ. ಸೆಂಟರ್ ಆಫ್ ಎಕ್ಸಲೆನ್ಸಿಯಂಥ ವಿಶಿಷ್ಟ ಶೈಕ್ಷಣಿಕ ಸಂಸ್ಥೆಯೊಂದು ಅಸ್ತಿತ್ವದಲ್ಲಿಲ್ಲದಿದ್ದರೆ ಇವತ್ತು ದಿಲ್‌ರಾಜ್ ಕ್ಲಾರ್ಕ್ ಸ್ಥಾನದಲ್ಲಿ ಸಲಾಮ್ ಮಾಡಬೇಕಿತ್ತು. ದಿಲ್‌ರಾಜ್ ಕೇವಲ ಒಂದು ನಿದರ್ಶನವಷ್ಟೆ. ಇಂಥ ಅನೇಕ ದಿಲ್‌ರಾಜ್‌ಗಳು ಇಂದು ಅವಕಾಶ ಇಲ್ಲದೇ ನಮ್ಮ ಮಧ್ಯ ಸದ್ದಿಲ್ಲದೇ ಕರಗಿ ಹೋಗುತ್ತಿದ್ದಾರೆ. ಈ ಹಿನ್ನೆಯಲ್ಲಿ 'ಮೆರಿಟ್ ಮುಖ್ಯ ಅಲ್ಲ, ಅವಕಾಶ ಮುಖ್ಯ' ಎಂಬ ದಾಮೋದರ್ ಪ್ರತಿಪಾದನೆ ಅರ್ಥಪೂರ್ಣ. ಎಂ.ಎಂ ರಿಶಾ, ಇಂಥ ಅವಕಾಶದ ಲಾಭ ಪಡೆದು ಮೇಲೇರಿ ನಿಂತ ಇನ್ನೊಂದು ಪ್ರತಿಭೆ. ಇಲ್ಲಿ ಆರು ತಿಂಗಳ ಸರ್ಟಿಫಿಕೇಟ್ ಕೋರ್ಸ್ ಮುಗಿಸಿದ ಬಳಿಕ ಎಂ.ಟೆಕ್ ಓದಿದರು. ಸದ್ಯ ಹೈದರಾಬಾದ್‌ನಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದರ ಉದ್ಯೋಗಿ.

ಸರಿಯಾದ ರೀತಿಯಲ್ಲಿ ಜಾರಿಗೊಳಿಸದೇ ಹೋದರೆ, ಕೋಟ ನೀತಿ ಬರೀ ಪುಸ್ತಕದ ಸರಕಾಗಿ ಉಳಿಯುತ್ತದೆ

ಬೆಂಗಳೂರಿನಲ್ಲಿರುವ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್'ನಲ್ಲಿ ಪ್ರಾಧ್ಯಾಪಕರಾಗಿರುವ ಹಾಗೂ ಇಲ್ಲಿನ ಸೆಂಟರ್ ಆಫ್ ಎಕ್ಸಲೆನ್ಸಿಗೆ ತಜ್ಞ ಸಲಹೆಗಾರರಾಗಿರುವ ಎ.ಆರ್. ವಾಸವಿ ಅವರು, 'ಉನ್ನತ ಶಿಕ್ಷಣದಲ್ಲಿ ಮೀಸಲಾತಿಯ ಮಹತ್ವ' ಏನು ಅನ್ನುವುದನ್ನು ಗಟ್ಟಿಯಾಗಿ ಪ್ರತಿಪಾದಿಸಿದ್ದಾರೆ. ಜೊತೆಗೆ ಬರೀ ಕೋಟ ಗುರುತಿಸಿದರೆ ಸಾಲದು, ಅದರ ಸೂಕ್ತ ಜಾರಿ ಮುಖ್ಯ ಅನ್ನುವುದನ್ನು ಅವರು ಒತ್ತಿಹೇಳಿದ್ದಾರೆ.

'ಸರಿಯಾದ ರೀತಿಯಲ್ಲಿ ಗಮನ ಹರಿಸಿ ಜಾರಿಗೊಳಿಸದೇ ಹೋದರೆ, ಕೋಟ ನೀತಿ ಬರೀ ಪುಸ್ತಕದ ಸರಕಾಗಿ ಉಳಿಯುತ್ತದೆ. ಮೀಸಲಾತಿ ಅನುಷ್ಠಾನ ವಿಧಾನ ಮುಖ್ಯ. ಈ ನಿಟ್ಟಿನಲ್ಲಿ ಸಿಎಕ್ಸ್ ಮಾಡುತ್ತಿರುವ ಕೆಲಸ ಶ್ಲಾಘನೀಯ. ಇದು ಈ ಸಂದರ್ಭಕ್ಕೆ ಅನಿವಾರ್ಯ ಎನ್ನಿಸುವ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತಿದೆ. ಇತರೆ ಸಂಸ್ಥೆಗಳು ಮೂರು ವರ್ಷಗಳಲ್ಲಿ ಮಾಡದ ಕೆಲವನ್ನು ಇದು ಕೇವಲ ಐದು ತಿಂಗಳಲ್ಲಿ ಮಾಡಿ ಮುಗಿಸುತ್ತದೆ. ಸರ್ಕಾರ ಹಾಗೂ ಕಾಳಜಿ ಉಳ್ಳ ದಲಿತ ಪರ ಚಿಂತಕರು ಮಾಡಬಹುದಾದ ಬಹುದೊಡ್ಡ ಕೆಲಸ ಇದು' ಎಂದು ವಾಸವಿ ಹೇಳುತ್ತಾರೆ.

ಈ ಸಂಸ್ಥೆ ತಮ್ಮಲ್ಲಿ ನಿಜಕ್ಕೂ ಆತ್ಮವಿಶ್ವಾಸದ ಬುಗ್ಗೆಯನ್ನು ಪುಟಿದೆಬ್ಬಿಸಿತು ಅನ್ನುವುದನ್ನು ಓ.ಸಿ.ಗೀತಾ ಒಪ್ಪಿಕೊಳ್ಳುತ್ತಾರೆ.

'ನಾನು ಹಳ್ಳಿ ಹಿನ್ನೆಲೆಯ ವಿದ್ಯಾರ್ಥಿನಿಯಾಗಿ ಈ ಸಂಸ್ಥೆಗೆ ಸೇರಿದಾಗ ಮೊದ ಮೊದಲು ನನ್ನಲ್ಲಿ ವಿಚಿತ್ರ ರೀತಿಯ ಹಿಂಜರಿಕೆ, ಕೀಳರಿಮೆ ಕಾಡುತ್ತಿತ್ತು. ಅದರಲ್ಲೂ ವಿಶೇಷವಾಗಿ ಇಂಗ್ಲಿಷ್ ಭಾಷೆ ಕುರಿತು ನನ್ನಲ್ಲಿ ಅಸಾಧ್ಯ ದಿಗಿಲು ಮನೆಮಾಡಿತ್ತು. ಆದರೆ ಸಂಸ್ಥೆಗೆ ಪ್ರವೇಶ ಪಡೆದ ಕೆಲವೇ ತಿಂಗಳಲ್ಲಿ ಅದೆಲ್ಲವೂ ಮಂಜಿನಂತೆ ಕರಗಿ ಹೋಯಿತು. ಇಲ್ಲಿರುವ ತಜ್ಞ ಪ್ರಾಧ್ಯಾಪಕರ ಪ್ರೋತ್ಸಾಹ ಹಾಗೂ ಕಲಿಸುವ ವಿಧಾನದಲ್ಲಿನ ಹೊಸತನ ನನಗೆ ಮತ್ತು ನನ್ನಂಥ ಅನೇಕರಿಗೆ ಕೀಳರಿಮೆ ಮೆಟ್ಟಿನಿಂತು ಬೆಳೆಯಲು ನೆರವಾಗುತ್ತಿದೆ' ಎನ್ನುತ್ತಾರೆ.

೨೦೦೪ರ ಸಾಲಿನಲ್ಲಿ ಇಲ್ಲಿ ಪದವಿ ಮುಗಿಸಿದ ಗೀತಾ, ಸದ್ಯ ಇನ್ಫೋಸಿಸ್ ಟೆಕ್ನಾಲಜಿಸ್‌ನ ತಿರುವನಂತಪುರ ಶಾಖೆಯಲ್ಲಿ ದೊಡ್ಡ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.ಇದು ಸಮಾಜದ ಕೆಳಸ್ತರದಲ್ಲಿ ನಡೆಯುತ್ತಿರುವ ಬಹು ದೊಡ್ಡ ಸುಧಾರಣಾ ಕಾರ್ಯ. ದೂರ ನಿಂತು ನೋಡುವವರಿಗೆ ಈ ಸಂಸ್ಥೆಯ ಕಾರ್ಯ ಮಹತ್ವ ಅರ್ಥವಾಗದು. ದೂರದ ಯೋಚನೆ ಮಾಡುವವರಿಗೆ ಮಾತ್ರ ಅದರ ಪ್ರಾಮುಖ್ಯತೆ ತಿಳಿ ಯಲು ಸಾಧ್ಯ.

ಎಲ್ಲಾ ರಾಜ್ಯಗಳಲ್ಲಿ ಇಂಥ ಪ್ರಯತ್ನ ಯಾಕೆ ನಡೆಯಬಾರದು? ಈಗಾಗಲೇ ಎಲ್ಲಾ ಕಡೆ ಎಸ್ಸಿ/ಎಸ್ಟಿ ಸಮುದಾಯದ ವಿದ್ಯಾರ್ಥಿಗಳಿಗಾಗಿ ನಾಗರಿಕ ಸೇವಾ ತರಬೇತಿ ಕೇಂದ್ರಗಳು ನಡೆಯುತ್ತಿವೆ. ಅದರದೇ ಮುಂದುವರಿಕೆ ಎಂದು ಪರಿಗಣಿಸಿ ಸೆಂಟರ್ ಆಫ್ ಎಕ್ಸಲೆನ್ಸಿ ಕೇಂದ್ರ ಆರಂಭಿಸಲು ದೊಡ್ಡ ಸಾಹಸವೇನು ಮಾಡಬೇಕಿಲ್ಲ. ಈ ಕೆಲಸಕ್ಕೆ ಭಾರೀ ಮೊತ್ತದ ಹಣ ಕೂಡ ಸುರಿಯಬೇಕಿಲ್ಲ. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳ ನೆರವು ಪಡೆದು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವ ಪ್ರಾಮಾಣಿಕ ಮನಸ್ಸಿದ್ದರೆ ಸಾಕು.

ದಲಿತರ ಉದ್ಧಾರದ ಹೆಸರಿನಲ್ಲಿ ಒಣ ಭಾಷಣ ಮತ್ತು ವ್ಯರ್ಥ ಬಡಬಡಿಕೆಯಲ್ಲಿ ಕಾಲ ಕಳೆಯುವ ನಮ್ಮ ನಾಯಕರು ಈ ಬಗ್ಗೆ ತಾಳ್ಮೆಯಿಂದ ಯೋಚಿಸುವ ಅಗತ್ಯ ಇದೆ.ಬದಲಾದ ಸನ್ನಿವೇಶಕ್ಕೆ ತಕ್ಕಂತೆ ದಲಿತರ ಶೈಕ್ಷಣಿಕ ವ್ಯವಸ್ಥೆ ಮತ್ತು ಬದುಕಿನ ಪಥ ಬದಲಾಗದಿದ್ದರೆ, ಈ ದೇಶದ ಹಣೆ ಬರಹ ಇನ್ನೊಂದು ಶತಮಾನ ಕಳೆದರೂ ಬದಲಾಗದು. □

ಮೀಸಲಾತಿ ಚರ್ಚೆ

ಮೀಸಲಾತಿ ವಿರೋಧಿ ದನಿಯನ್ನು ಅಡಗಿಸಲು

ಪ್ರತಿಭೆ ಒಂದು ಜಾತಿ/ ಜನಾಂಗ/ಧರ್ಮದ ಸೊತ್ತೆಂದು ಮಾತನಾಡು ವುದು ಮೂರ್ಖತನ. ಮೀಸಲು ಪ್ರವರ್ಗಗಳ ಅಡಿಯಲ್ಲಿ ಸೀಟುಗಳನ್ನು ಪಡೆದುಕೊಳ್ಳುವವರು, ಹಣದ ಬಲದಿಂದ ಖಾಸಗಿ ಕಾಲೇಜುಗಳಲ್ಲಿ ಪೇಮೆಂಟ್ ಸೀಟು ಗಳನ್ನು ಪಡೆದುಕೊಳ್ಳುವ ಮೀಸಲೇತರ ಅಭ್ಯರ್ಥಿ ಗಳಗಿಂತ ಪ್ರತಿಭೆಯಲ್ಲಿ ಭಾರಿ ಮುಂದಿದ್ದಾರೆ ಎಂಬುದನ್ನು ಅಂಕಿ ಅಂಶಗಳೇ ಮುಖಕ್ಕೆ ರಾಚುತ್ತವೆ. ಈಗ ಮೆಡಿಕಲ್ ಕ್ಷೇತ್ರ ಭಾರಿ ಲಾಭ ತರುವ ಉದ್ಯಮ ವಾಗಿದೆ; ಹಾಗಾಗಿ ಹಣ ಇರುವವರು ಈಗ ಈ ಕ್ಷೇತ್ರ ಪ್ರವೇಶಿಸಿ ಉದ್ಯಮ ಪತಿಗಳಾಗಿದ್ದರೆ. ಮೀಸ ಲಾತಿ ಕೋಟಾದಲ್ಲಿ ಸೀಟುಗಳನ್ನು ನೀಡಿದರೆ, ಈ ಕ್ಷೇತ್ರದಲ್ಲಿ ಕಾಲಿಟ್ಟಿ ರುವ ಉದ್ಯಮಪತಿಗಳ ವ್ಯವಹಾರಕ್ಕೆ ಏಟು ಬಿದ್ದು ಅವರಿಗೆ ನಷ್ಟ ಉಂಟಾಗುತ್ತದೆ.

ರಾಜಶೇಖರ್ ವುಂಡ್ರು

ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಒದಗಿಸಿದ್ದನ್ನು ವಿರೋಧಿಸಿ ೧೯೮೧ ರ ಜನವರಿಯಲ್ಲಿ ಅಹಮದಬಾದ್ (ಗುಜರಾತ್) ಬಿ.ಜೆ. ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳು ಬೀದಿಗಿಳಿದಿದ್ದರು. ಹತ್ತೇ ದಿನಗಳಲ್ಲಿ ಈ ಚಳವಳಿ ವಡೋದರಾ; ಜಾಮ್‌ನಗರ, ಕೈರಾ, ಮೆಹಸಾಣಾ, ಬರೋಡಾ ಮುಂತಾಗಿ ರಾಜ್ಯಾದ್ಯಂತ ಹಬ್ಬಿತು. ನಂತರ ಇಡೀ ಮಧ್ಯ ಗುಜರಾತ್ ಜಾತಿ ದಂಗೆಗೆ ಬಲಿಯಾಯಿತು. ಲಕ್ಷಾಂತರ ಅಮಾಯಕ ಪರಿಶಿಷ್ಟ ಜಾತಿಯವರು ದಂಗೆಯಲ್ಲಿ ಗುಡಿಸಲು, ಮನೆ, ಆಸ್ತಿ ಕಳೆದುಕೊಂಡರು. ನಾಲ್ಕು ವರ್ಷಗಳ ಬಳಿಕ (೧೯೮೫ರಲ್ಲಿ) ಗುಜರಾತ್‌ನಲ್ಲಿ ಮತ್ತೆ ಮೀಸಲಾತಿ ವಿರೋಧಿ ಚಳವಳಿ ತಲೆಯೆತ್ತಿತ್ತು.

ಈಗ ದೆಹಲಿಯಲ್ಲಿ ಮತ್ತೆ ಮೀಸಲಾತಿ ವಿರೋಧಿ ಚಳವಳಿ ತಲೆ ಎತ್ತಿದ್ದು ದೇಶವನ್ನೇ ವ್ಯಾಪಿಸುವ ಸೂಚನೆಗಳು ಕಾಣುತ್ತಿವೆ. ಅಸೋಸಿ ಯೇಟೆಡ್ ಪ್ರೆಸ್ ಛಾಯಾಗ್ರಾಹಕ ಪ್ರಕಟಿಸಿರುವ ಅರ್ಪಿತಾ ಮಜುಂದಾರ್‌ಳ ಆಕ್ರೋಶಪೂರಿತ ಫೋಟೋಗ್ರಾಫ್ ಇನ್ನು ಮೀಸಲಾತಿ ವಿರೋಧಿ ಚಳವಳಿಯ ಅಧಿಕೃತ ಚಿತ್ರವಾಗಲಿದೆ. ಪೊಲೀಸ್ ಪಡೆಯನ್ನು ಎದುರಿಸಿದ ಈ ವಿದ್ಯಾರ್ಥಿನಿಯ ಬಂಡುಕೋರ ಪ್ರವೃತ್ತಿ ಪ್ರಶಂಸನೀಯ; ಆದರೆ ಈ ಪ್ರವೃತ್ತಿಯ ಹಿಂದಿನ ಕಾರಣ ಮತ್ತು ಆಗ್ರಹ ಅಮಾನ್ಯ; ತಾರತಮ್ಯ ನೀತಿ ಯನ್ನು ವಿರೋಧಿಸುವುದೇ ಅರ್ಪಿತಾ ಮಜುಂದಾರ್ ಅಥವಾ ಮೀಸಲಾತಿ ವಿರೋಧಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಧ್ಯೇಯವಾಗಿದ್ದಲ್ಲಿ ಅವರು a)ಜಾತಿ ಸೇನೆಗಳು ದಲಿತರ ಮಾರಣ ಹೋಮ ನಡೆಸಿದಾಗ, b) ಭೂಮಾಲೀಕರು ದಲಿತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಿದಾಗ, c) ದಲಿತ ಹೆಣ್ಣು ಮಕ್ಕಳ ಬೆತ್ತಲೆ ಮೆರವಣಿಗೆ ಆದಾಗ d) ತನ್ನ ಮಗಳ ಶೀಲಭಂಗ ಮಾಡಿದ ದುಷ್ಕರ್ಮಿಗಳನ್ನು ಗುರುತಿಸಿ, ಅವರ ವಿರುದ್ಧ ದೂರು ನೀಡಿದ ದಲಿತ ಕೃಷಿ ಕೂಲಿಕಾರ ಬಂಟಾ ಸಿಂಗ್‌ನ ಕೈ-ಕಾಲು ಗಳನ್ನು ಜಮೀನುದಾರರು ಕತ್ತರಿಸಿದಾಗ, e) ದುರ್ಬಲರ ಮೇಲೆ ದಮನ ದೌರ್ಜನ್ಯಗಳು ನಡೆದಾಗ ಪ್ರತಿಭಟನೆ ಸೂಚಿಸಲು, ಬೀದಿಗಿಳಿದು ಪೊಲೀಸ್ ಬಲಪ್ರಯೋಗವನ್ನು ಎದುರಿಸಿದ್ದಿದ್ದರೆ, ದೇಶವೇ ಹೆಮ್ಮೆ ಪಡಬಹುದಾಗಿತ್ತು.

೧೯೮೧ ರಿಂದಲೇ ಮೀಸಲಾತಿ ವಿರೋಧಿಸಿ ಗೂಂಡಾಗಿರಿಗಿಳಿದ ಗುಜರಾತ್ ಮೆಡಿಕಲ್ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಈಗ ದೆಹಲಿಯಲ್ಲಿ ಇದೇ ಕಾರಣಕ್ಕೆ ಬೀದಿಗೆ ಬಂದಿರುವ ಆವೇಶ ಭರಿತ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮನೋಭಿತ್ತಿಯಲ್ಲಿ ಜಾತಿವಾದ ಕಾಣುತ್ತಿದೆ; ಅವರ ರಕ್ತದಲ್ಲಿ ಬೆರೆತಿರುವುದು ಕಂಡು ಬರುತ್ತಿದೆ. ಪ್ರತಿಭಟನೆಗಾಗಿ ಅವರು ಬೀದಿ ಗುಡಿಸುವ ಹಾಗೂ ಷೂಸ್ ಪಾಲಿಷ್ ಮಾಡುವುದಕ್ಕೆ ಮುಂದಾಗುವ ಮೂಲಕ, ಈ ವೃತ್ತಿಗಳಲ್ಲಿ ತೊಡಗಿರುವ ಜನಾಂಗಗಳನ್ನು ಹಾಗೂ ವ್ಯಕ್ತಿ-ಕುಟುಂಬಗಳನ್ನು ಅವಮಾನಿಸುವ ಹುನ್ನಾರವನ್ನು ಅವರು ಮರೆದಿದ್ದಾರೆ. ದೇಶಕ್ಕೆ ಅತ್ಯಗತ್ಯವಾಗಿರುವ ಉದ್ಯೋಗಗಳಲ್ಲಿ ತೊಡ ಗಿರುವವರನ್ನು ಅವಮಾನಿಸಬಾರದೆಂಬ ಮೂಲಭೂತ ವಿವೇಕವನ್ನು ಅವರು ಆಧುನಿಕ ವಿದ್ಯೆಯಿಂದ ಕಲಿತಿಲ್ಲ.

ಮೀಸಲಾತಿ ವಿರೋಧಿಸಿ ದೆಹಲಿಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯವರು ಪ್ರತಿಭಟನೆ ನಡೆಸುತ್ತಿದ್ದ ಕಾಲದಲ್ಲೇ ಒಂದು ಪ್ರಸಂಗ ನಡೆದಿದೆ. ಇದರ ಕಡೆಗೆ ಯಾರ ಗಮನವೂ ಹೋಗಿಲ್ಲ. ಈ ಸಂದರ್ಭ ದಲ್ಲಿ ಇದೊಂದು ಮಹತ್ವದ ಪ್ರಸಂಗವಾಗಿರುವುದರಿಂದ ಉಲ್ಲೇ ಖಾರ್ಹ. ಜೀವನ್ಮರಣ ಸ್ಥಿತಿಯಲ್ಲಿರುವ ಬಿಜೆಪಿ ಹಿರಿಯ ನಾಯಕ ಪ್ರಮೋದ್ ಮಹಾಜನ್‌ಗೆ ಭಾರತದಲ್ಲಿ ಲಭ್ಯವಿರುವ ಅತ್ಯಂತ ಉನ್ನತ ಪರಿಣತಿಯಿರುವ ವೈದ್ಯರಿಂದ, ಅತ್ಯಂತ ಉನ್ನತ ಶ್ರೇಣಿಯ ಮೆಡಿ ಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆ ನೀಡಲಾಯಿ ತಷ್ಟೆ. ಇವರ ಚಿಕಿತ್ಸೆ ಗಾಗಿ ಲಿವರ್ ಜೋಡಣೆ ಚಿಕಿತ್ಸೆಯಲ್ಲಿ ವಿಶ್ವದಲ್ಲೇ ವಿಖ್ಯಾತವಾಗಿರುವ

ಈಗ ದೆಹಲಿಯಲ್ಲಿ ಬೀದಿಗೆ ಬಂದಿರುವ ವಿದ್ಯಾರ್ಥಿಗಳು ಬೀದಿ ಗುಡಿಸುವ ಹಾಗೂ ಷೂ ಪಾಲಿಷ್ ಮಾಡುವುದಕ್ಕೆ ಮುಂದಾಗುವ ಮೂಲಕ, ಈ ವೃತ್ತಿಗಳಲ್ಲಿ ತೊಡಗಿರುವ ಜನಾಂಗಗಳನ್ನು ಅವಮಾನಿಸುತ್ತಿದ್ದಾರೆ

ದ್ಯ ಮೊಹಮ್ಮದ್ ರೇಲಾರನ್ನು ವೈದ್ಯರ ಕೋರಿಕೆ ಂತೆ ಕರೆಸ ಲಾಯಿತು. ೨೦೦೦ ನೇ ವರ್ಷದಲ್ಲಿ ನಲ ಐದು ವರ್ಷದ ಮಗು ವಿಗೆ ಲಿವರ್ ೋಡಣೆಯನ್ನು ಮಾಡಿ, ಗಿನ್ನಿಸ್ ದಾಖಲೆ ಮಾಡಿದ ದ್ಯ ಇವರು. ಈಗ ಇವರಿಗೆ ೪೭ ವರ್ಷ. ಈ ಯಸ್ಸಿಗೇ ೮೦೦ ಕ್ಕೂ ಹೆಚ್ಚು ಲಿವರ್ ಜೋಡಣೆಯನ್ನು ಶಸ್ವಿಯಾಗಿ ಪೂರೈಸಿದ ಹೆಗ್ಗಳಿಕೆ ಇವರದು. ಮೋದ್ ಮಹಾಜನ್ ಸ್ಥಿತಿ ಬಹುಗಂಭೀರವಾಗಿದ್ದು, ನ್ನು ಕರೆಯಿಸುವುದು ತಡವಾಯಿತು ಎಂದು ಮೊಹ ದ್ ರೇಲಾ ಅಭಿಪ್ರಾಯ ಸೂಚಿಸಿ, ಲಂಡನ್‌ಗೆ ತಿರುಗಿದ್ದರು.

ಹೈದರಾಬಾದ್‌ನಲ್ಲಿ ತೆರೆದ ಹೃದಯ ಚಿಕಿತ್ಸೆಯನ್ನು ನ್ನಾಂತರ ವ್ಯಕ್ತಿಗಳಿಗೆ ಒದಗಿಸಿದ ಖ್ಯಾತಿ ಡಾ॥ ದಾಸರಿ ಾದ್ ರಾವ್ ಅವರದು. ನಿಜಾಂ ಮೆಡಿಕಲ್ ಸೈನ್ಸಸ್ ್‌ಸ್ಟಿಟ್ಯೂಟ್ ನಿರ್ದೇಶಕರಾಗಿರುವ ಈ ವೈದ್ಯರು ಾಡಿದ ಹೃದಯ ಚಿಕಿತ್ಸೆಗಳಲ್ಲಿ ಒಂದಾದರೂ ವಿಫಲವಾ . ಇವರು ಪರಿಶಿಷ್ಟ ಜಾತಿಯವರು; ಮೀಸಲಾತಿ ೋಟಾದಲ್ಲಿ ಸೀಟ್ ಪಡೆದು, ವೈದ್ಯರಾಗಿ ಈಗ ನಿರ್ದೇ ಹುದ್ದೆಗೆ ಏರಿದವರು. ಕಾಡಿಯೋಥೊ ರೈಕ್ ಸರ್ಜರಿ ಲ್ಲಿ ಇವರು ಸಾಧಿಸಿರುವ ಸೇವೆಗೆ ೨೦೦೧ ರಲ್ಲಿ ದ್ಮಶ್ರೀ ಪ್ರಶಸ್ತಿಯನ್ನು ಪಡೆದವರು.

ಹಿಂದುಳಿದ ಜನಾಂಗದ ಮೊಹಮ್ಮದ್ ರೇಲಾ ಪರಿ ್ಟ ಜಾತಿಯ ಪ್ರಸಾದ್ ರಾವ್‌ರಂಥ ಅನೇಕ ಪ್ರತಿಭೆಗಳು ದುರೇ ಇರುವಾಗ, ಪ್ರತಿಭೆ ಒಂದು ಜಾತಿ/ಜನಾಂಗ/ ರ್ಗದ ಸೊತ್ತೆಂದು ಮಾತನಾಡುವುದು ಮೂರ್ಖತನ ಗೂ ನೀಚತನ. ಮೀಸಲು ಪ್ರವರ್ಗಗಳ ಅಡಿಯಲ್ಲಿ ಟುಗಳನ್ನು ಪಡೆದುಕೊಳ್ಳುವವರು, ಹಣದ ಬಲದಿಂದ ಾಸಗಿ ಕಾಲೇಜುಗಳಲ್ಲಿ ಪೇಮೆಂಟ್ ಸೀಟುಗಳನ್ನು ಪಡೆದು ಳ್ಳುವ ಮೀಸಲೇತರ ಅಭ್ಯರ್ಥಿಗಳಿಗಿಂತ ಪ್ರತಿಭೆಯಲ್ಲಿ ರಿ ಮುಂದಿದ್ದಾರೆ ಎಂಬುದನ್ನು ಅಂಕಿ ಅಂಶಗಳೇ ಖಕ್ಕೆ ರಾಚುತ್ತವೆ. ಈಗ ಮೆಡಿಕಲ್ ಕ್ಷೇತ್ರ ಭಾರಿ ಲಾಭ ುವ ಉದ್ಯಮವಾಗಿದೆ; ಹಾಗಾಗಿ ಹಣ ಇರುವವರು ಈ ಕ್ಷೇತ್ರ ಪ್ರವೇಶಿಸಿ ಉದ್ಯಮಪತಿಗಳಾಗಿದ್ದರೆ. ೀಸಲಾತಿ ಕೋಟಾದಲ್ಲಿ ಪರಿಶಿಷ್ಟ ಜಾತಿ/ಪಂಗಡ/ಹಿಂದು ವರ್ಗ/ಮಹಿಳೆಯರು/ಅಂಗವಿಕಲರು/ಮಾಜಿ ಸೈನಿಕರು ್ಯಾಟ ಪ್ರವರ್ಗದಲ್ಲಿ ಸೀಟುಗಳನ್ನು ನೀಡಿದರೆ, ಈ ತ್ರದಲ್ಲಿ ಕಾಲಿಟ್ಟಿರುವ ಉದ್ಯಮಪತಿಗಳ ವ್ಯವಹಾರಕ್ಕೆ ು ಬಿದ್ದು ಅವರಿಗೆ ನಷ್ಟ ಉಂಟಾಗುತ್ತದೆ.

ವೈದ್ಯಕೀಯ ಕ್ಷೇತ್ರವು ಗಂಟಲು ಸೀಳುವ ವ್ಯಾಪಾರ ತ್ರವಾಗಿ ಪರಿವರ್ತನೆಯಾಗಿರುವುದನ್ನು ತಪ್ಪಿಸಲು ರ್ಕಾರ ಒಂದು ಆದೇಶವನ್ನು ಹೊರಡಿಸುವುದು ಅಗತ್ಯ. ನಾತಕ ಅಥವಾ ಸ್ನಾತಕೋತ್ತರ ವೈದ್ಯಕೀಯ ಪದವಿ ೆದು, ಪ್ರಾಕ್ಟೀಸ್ ಪ್ರಾರಂಭಿಸುವ ಮುಂಚೆ ಪ್ರತಿಯೊಬ್ಬ ದ್ಯ ಗ್ರಾಮೀಣ ಪ್ರದೇಶ ದಲ್ಲಿ ಕನಿಷ್ಟ ಐದು ವರ್ಷ ಸೇವೆ ಸುವುದು ಕಡ್ಡಾಯ" ಎಂದು ಸರ್ಕಾರಿ ಆದೇಶ ರಟಲ್ಲ, ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿನ ೀಸಲೇತರ ಸೀಟುಗಳು ಭರ್ತಿಯಾಗದೆ ಉಳಿಯುತ್ತವೆ; ುತೇಕ ಎಲ್ಲಾ ಖಾಸಗಿ ಮೆಡಿಕಲ್ ಕಾಲೇಜುಗಳು ಚ್ಚಿ ಹೋಗುತ್ತವೆ. ಮೆಡಿಕಲ್ ಕ್ಷೇತ್ರವು ಲಾಭವನ್ನು ್ಕಿ ಕೊಡಿಯುವ ವ್ಯಾಪಾರವಾಗಿ ಪರಿವರ್ತನೆಯಾಗಿ ುವುದನ್ನು ತಡೆಗಟ್ಟಿದಾಗಲೇ, ಮೀಸಲಾತಿ ವಿರೋಧಿ ಿಯನ್ನು ಈ ಕ್ಷೇತ್ರದಲ್ಲಿ ಅಡಗಿಸಲು ಸಾಧ್ಯ □



ರಾತ್ರಿ ಪಾಳಿ ಯಂತ್ರದ ಮುಂದೆ ಕುಳಿತು ಹೀಗೆ ಹಾಡುತ್ತಾನೆ:

ಯಂತ್ರಗಳು ನನ್ನ ಪ್ರಿಯ ಪತ್ನಿಯರಂತೆ ಹೆಚ್ಚೆಚ್ಚು ದುಡಿಮೆಗೆ ಸಹಕಾರಿಯಾಗುತ್ತವೆ,
ಅವು ನನ್ನ ದೇಹವನ್ನು ಇಂಚಿಂಚಾಗಿ ತಿಂದು ಮುಗಿಸುತ್ತವೆ.

ಹಂದಿಮರಿಗಳಂತೆ ಅಮರಿಕೊಳ್ಳುವ ಆ ಮಕ್ಕಳೋ, ಫ್ಯಾಕ್ಟರಿ ಒಡೆಯನ ತೊಡೆಗಳನ್ನು
ಅದೆಷ್ಟು ಸಲಿಗೆಯಿಂದ ತಮ್ಮ ತಾಯಂದಿರೆದುರಿಗೆ ಅಪ್ಪಿಕೊಳ್ಳುತ್ತವೆ,
ಬಟ್ಟೆಗತ್ತುವ ಚಿಟ್ಟೆಗಳಂತೆ.

ನಾನು ವಿಷದ ಬಳ್ಳಿಗಳನ್ನೇ ಮೈಗೇರಿಸಿಕೊಳ್ಳುತ್ತೇನೆ, ನನ್ನ ವಿಶ್ರಾಂತ ಗಳಿಗೆಗಳಲ್ಲೂ.

ಈಚೀಚೆಗೆ ನನ್ನ ಕೈ, ತೋಳುಗಳು ಹಿಂದೆಂದಿಗಿಂತ ಹೆಚ್ಚಾಗಿ ಸೋಲತೊಡಗಿವೆ.
ವೇಗವಾಗಿ ಸೈಕಲ್‌ನ ಪೆಡಲ್ ಹೊಡೆಯಲಾಗುತ್ತಿಲ್ಲ. ಬದುಕು ಅಷ್ಟಕ್ಕೇ ನಿಂತಂತೆ
ನಗು ತರಿಸುತ್ತದೆ.

ನನ್ನ ನಂತರದ ಹುಡುಗಿಯರು ಅದೆಷ್ಟು ನಯವಾಗಿ ನನ್ನ ಹಿಂದೆ ಹಾಡುತ್ತಾರೆ?

○ ಮಂಜುನಾಥ್ ವಿ.ಎಂ.

ಉನ್ನತ ಶಿಕ್ಷಣ:
ಮೀಸಲಾತಿ ಅನಿವಾರ್ಯ

ಪ್ರೊ॥ ರವಿವರ್ಮಕುಮಾರ್

ಸ್ವಾತಂತ್ರ್ಯಾನಂತರ ಕೇಂದ್ರಸರ್ಕಾರವು ಹಿಂದುಳಿದ ವರ್ಗಗಳ ಬಗ್ಗೆ ತಾರತಮ್ಯವೆಸಗಿ ಮೀಸಲಾತಿಯನ್ನು ನಿರಾಕರಿಸಿತು. ಬದಲಾಗಿ ಈ ದೇಶದಲ್ಲಿ ಮುಂದೆ ಬರಲಿರುವ ಶೋಷಣೆಯ ಸಂಕೇತವೆಂಬಂತೆ ಬಂದ ಚಂಪಕಂ ದೊರೈರಾಜನ್ ಮೊಕದ್ದಮೆಯ ತೀರ್ಪಂತೂ ಮೀಸಲಾತಿಯ ವಿರುದ್ಧ ಬರಸಿಡಿಲಿನಂತೆ ಎರಗಿ ಇದ್ದಬದ್ದ ಆಶಾಕಿರಣವನ್ನೂ ಚಿವುಟಿ ಹಾಕಿತು. ಅದೃಷ್ಟವಶಾತ್ ಡಾ॥ ಅಂಬೇಡ್ಕರ್‌ರವರು ಕೇಂದ್ರ ಕಾನೂನು ಮಂತ್ರಿಗಳಾಗಿದ್ದರಿಂದ ಭಾರತ ಸಂವಿಧಾನಕ್ಕೆ ಚೊಚ್ಚಲ ತಿದ್ದುಪಡಿ (೧೯೫೧) ತಂದು ಕನಿಷ್ಟ ದಕ್ಷಿಣ ರಾಜ್ಯಗಳಲ್ಲಾದರೂ ಶಿಕ್ಷಣ ಕ್ಷೇತ್ರಗಳಲ್ಲಿ ಮೀಸಲಾತಿ ಮುಂದುವರೆಯಲು ಅವಕಾಶ ಲಭಿಸಿತು.

ಬಿಳಿಯರ ಆಡಳಿತದಲ್ಲಿ ಸಮಾನತೆ ಸಾಧಿಸುವ ಮೀಸಲಾತಿ ಯಂತ್ರವನ್ನು ಶಿಕ್ಷಣ ಮತ್ತು ಉದ್ಯೋಗ ಎರಡೂ ಕ್ಷೇತ್ರಗಳಲ್ಲಿ ಅನುಸರಿಸ ಲಾಗಿತ್ತು. ಮೈಸೂರು ಸಂಸ್ಥಾನದಲ್ಲಂತೂ ಮೀಸಲಾತಿ ೧೮೭೪ನೇ ಇಸವಿಯಿಂದಲೇ ಜಾರಿಯಲ್ಲಿತ್ತು. ೧೯೫೫ರಲ್ಲಿ ಪರಿಷ್ಕೃತಗೊಂಡು ಮತ್ತೆ ಹೊಸರೂಪದೊಂದಿಗೆ ಆಚರಣೆಗೆ ಬಂದಿತು. ಜಸ್ಟೀಸ್ ಮಿಲ್ಲರ್ ಕಮಿಟಿ (೧೯೧೮) ವರದಿಯ ಆಧಾರದ ಮೇರೆಗೆ ಶಿಕ್ಷಣ ಕ್ಷೇತ್ರಕ್ಕೂ ಮೀಸಲಾತಿ ವಿಸ್ತರಣೆಯಾಯಿತು.

ಸ್ವಾತಂತ್ರ್ಯಾನಂತರ ಕೇಂದ್ರಸರ್ಕಾರವು ಹಿಂದುಳಿದ ವರ್ಗಗಳ ಬಗ್ಗೆ ತಾರತಮ್ಯವೆಸಗಿ ಮೀಸಲಾತಿಯನ್ನು ನಿರಾಕರಿಸಿತು. ಬದಲಾಗಿ ಈ ದೇಶದಲ್ಲಿ ಮುಂದೆ ಬರಲಿರುವ ಶೋಷಣೆಯ ಸಂಕೇತವೆಂಬಂತೆ ಇರುವ ಮೀಸಲಾತಿಗೂ ಕಲ್ಲುಹಾಕುವ ತೀರ್ಪೊಂದು ನ್ಯಾಯಾಂಗದ ಕಡೆಯಿಂದ ಬಂತು. ಚಂಪಕಂ ದೊರೈರಾಜನ್ ಮೊಕದ್ದಮೆಯ ತೀರ್ಪಂತೂ ಮೀಸಲಾತಿಯ ವಿರುದ್ಧ ಬರಸಿಡಿಲಿನಂತೆ ಎರಗಿ ಇದ್ದಬದ್ದ ಆಶಾಕಿರಣವನ್ನೂ ಚಿವುಟಿ ಹಾಕಿತು. ಅದೃಷ್ಟವಶಾತ್ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಕೇಂದ್ರ ಕಾನೂನು ಮಂತ್ರಿಗಳಾಗಿದ್ದರಿಂದ ಭಾರತ ಸಂವಿಧಾನಕ್ಕೆ ಚೊಚ್ಚಲ ತಿದ್ದುಪಡಿ (೧೯೫೧) ತಂದು ಕನಿಷ್ಟ ದಕ್ಷಿಣ ರಾಜ್ಯಗಳಲ್ಲಾದರೂ ಶಿಕ್ಷಣ ಕ್ಷೇತ್ರಗಳಲ್ಲಿ ಮೀಸಲಾತಿ ಮುಂದುವರೆಯಲು ಅವಕಾಶ ಲಭಿಸಿತು. ಆದರೆ ಕೇಂದ್ರಸರ್ಕಾರ ಮಾತ್ರ ತನ್ನ ಎಂದಿನ ಮಲತಾಯಿ ಧೋರಣೆಯನ್ನು ಮುಂದುವರೆಸಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನಿರಾಕರಿಸಿತು.

೧೯೫೩ರಲ್ಲಿ ನೇಮಕವಾದ ಕೇಂದ್ರ ಹಿಂದುಳಿದ ವರ್ಗಗಳ ಆಯೋಗ (ಕಾಕಾ ಕಾಲೇಲ್ಕರ್ ಆಯೋಗ) ೧೯೫೫ರಲ್ಲಿ ವರದಿ ನೀಡಿ ಶಿಕ್ಷಣಕ್ಕೆ ಸಂಬಂಧಿಸಿದ ತನ್ನ ಇತರ ಶಿಫಾರಸ್ಸುಗಳೊಂದಿಗೆ ಈ ಕೆಳಗಿನ ಬಹುಮುಖ್ಯ ಶಿಫಾರಸನ್ನೂ ಮಾಡಿತು.

"ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುವ ಮಟ್ಟ ತಲುಪು ವವರೆಗೆ ಅರ್ಹ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಎಲ್ಲ ವಿಜ್ಞಾನ ಎಂಜಿನಿ ಯರಿಂಗ್, ವೈದ್ಯಕೀಯ, ವ್ಯವಸಾಯ, ಪಶುವೈದ್ಯ ಮತ್ತಿತರ ತಂತ್ರಜ್ಞಾನ/ತಾಂತ್ರಿಕ ಕಾಲೇಜುಗಳಲ್ಲಿ ಶೇಕಡಾ ೭೦ರಷ್ಟು ಪ್ರವೇಶಾವ ಕಾಶಗಳನ್ನು ಮೀಸಲಿಡಬೇಕು.

ಜಾತ್ಯತೀತತೆಂಯ ಸೋಗಿನಲ್ಲಿ ೧೯೫೧ ರಿಂದಲೇ ಜನಗಣತಿ ಯಲ್ಲಿ ಹಿಂದುಳಿದ ಜಾತಿಗಳ ಜನ ಸಂಖ್ಯೆಯ ಮಾಹಿತಿ ಸಂಗ್ರಹಿಸಬಾರದೆಂದು ಆದೇಶಿಸುವ ಮೂಲಕ ಬ್ರಾಹ್ಮಣರ ಆಡಳಿತವ ನಿರಂತರವಾಗಿ ಮುಂದು ವರೆಸುವ ವ್ಯವಸ್ಥೆಗೆ ಅಡಿಪಾಯ ಹಾಕಿ ಮೇಲೆ ನೆಹರೂ ಕಾಂಗ್ರೆಸ್‌ಗೆ ಕಾಲೇಲ್ಕರ್ ವರದಿಯನ್ನು ಜಾ ಮಾಡುವ ಮನಸ್ಸಾದರೂ ಹೇಗೆ ಬಂದೀತು? ಮಾಹಿತಿಯ ಕೊರ ಯನ್ನು ತುಂಬಲು ಪೂರ್ವಭಾವಿ ಸಮೀಕ್ಷೆ (ಅಡ್ಹಾಕ್ ಸರ್ವೇ ಮಾಡಬೇಕೆಂಬ ಕುಂಟುನೆಪ ಹೇಳಿ ಇಡೀ ವರದಿಯನ್ನೇ ಕಸ ಬುಟ್ಟಿಗೆ ಹಾಕಿ ಹಿಂದುಳಿದವರಿಗೆ ಉನ್ನತ ಶಿಕ್ಷಣದ ಬಾಗಿಲನ್ ಬಂದ್ ಮಾಡಲಾಯಿತು.

ಮಂಡಲ್ ವರದಿಯಲ್ಲಿ ಶೇ.೨೭ ಮೀಸಲಾತಿ

ಕಾಲೇಲ್ಕರ್ ವರದಿಯನ್ನು ಜಾರಿಗೊಳಿಸುವ ಪ್ರಣಾಳಿಕೆಯ ಮೇಲೆ ಅಧಿಕಾರಕ್ಕೆ ಬಂದ ಮೊರಾರ್ಜಿದೇಸಾಯಿ ಸರ್ಕಾರವೂ ಸ ಚುನಾವಣಾ ಆಶ್ವಾಸನೆಯನ್ನು ಈಡೇರಿಸಲು ಸಿದ್ಧವಿರಲಿಲ್ಲ. ಇ ರಿಂದ ನುಣುಚಿಕೊಳ್ಳುವ ಸಲುವಾಗಿ ಮಂಡಲ್ ಆಯೋಗವನ ರಚಿಸಿ ವಚನಭ್ರಷ್ಟ ಸರ್ಕಾರವಾಗಿ ಅಧಿಕಾರದಿಂದ ಅವರು ಹೊ ಹಾಕಲ್ಪಟ್ಟರು. ಮಂಡಲ್ ಆಯೋಗವೂ ಸಹ ವರದಿ ಸಲ್ಲಿಸಿ ಹಿಂದ ಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲೂ ಮೀಸಲಾತಿಯನ್ನು ಶಿಫ ರಸ್ಸು ಮಾಡಿತು. ಕೇಂದ್ರ ಮತ್ತು ರಾಜ್ಯಸರ್ಕಾರಗಳು ನಡೆಸುತ್ತಿರು ಎಲ್ಲಾ ವಿಜ್ಞಾನ, ತಂತ್ರಜ್ಞಾನ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳು ಶೇ ೨೭ ಪ್ರವೇಶಾವಕಾಶಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬ ಕೆಂದು ಒತ್ತಾಯಿಸಿತು. ಕಾಲೇಲ್ಕರ್ ವರದಿಗೆ ಆದ ಗತಿಯನ್ನೇ ಈ ವರದಿಗೂ ಸಹ ಕಾಣಿಸಲು ಇಂದಿರಾಗಾಂಧಿ ಮತ್ತು ರಾಜೀವ ಗಾಂಧಿಯವರ ಕಾಂಗ್ರೆಸ್ ತೀರ್ಮಾನಿಸಿ ಈ ವರದಿಯನ್ನು ಮೂ ಗುಂಪು ಮಾಡಿತು. ಪ್ರ ಥಮ ಕಾಂಗ್ರೆಸ್ ಮತ್ತ ಬ್ರಾಹ್ಮಣೇತರ ಪ್ರಧಾ ಮಂತ್ರಿ ಗಳಾಗಿ ಅಧಿಕಾ ಸ್ವೀಕರಿಸಿದ ವಿ.ಪಿ ಸಿಂಗ್‌ರವರು ೧೯೯ ರಲ್ಲಿ ಸರ್ಕಾರಿ ಸೇವ ಯಲ್ಲಿ ಶೇಕಡ ೨ ಮೀಸಲಾತಿ ನೀಡುವ ಮಂಡಲ್ ವರದಿಯನು ಬಾಗಶಃ ಅನುಷ್ಠಾನ ತಂದರು. ಶಿಕ್ಷಣಕ್ಷೇತ್ರದಲ್ಲ ಅದನ್ನು ಜಾರಿ ಮಾಡುವ ವೇಳೆಗೆ ಅವರನ್ನು ಪದ ಚ್ಯುತಗೊಳಿಸಲಾ ಯಿತು ಹಾಗಾಗಿ ಇದುವರೆಗ ಉನ್ನತ ಶಿಕ್ಷಣದಲ್ಲಿನ ಪ್ರವೇಶಾವಕಾಶ ಹಿಂದು ಳಿವರಿಗೆ ಮರೀಚಿಕ ಯಾಗಿಯೇ ಉಳಿದಿದೆ. ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿ

ಮೀಸಲಾತಿಯ ಮೂಲಕ ಪ್ರತಿಯೊಂದು ಜಾತಿ ಯಲ್ಲಿಯೂ ಅರ್ಹರನ್ನು ಹುಡುಕಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ನೀಡುವುದರ ಮೂಲಕ ಉನ್ನತ/ವೃತ್ತಿಪರ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸ ಬೇಕಾಗುತ್ತದೆ. ಇದುವರೆಗೂ ಕೆಲವೇ ನಿರ್ದಿಷ್ಟ ಜಾತಿಗಳ ಹಿಡಿತದಲ್ಲಿರುವ ಶಿಕ್ಷಣ ಕ್ಷೇತ್ರದ ಕಣ್ಮಣಿಗಳಾದ ಐಐಟಿ, ಐಐಎಂ ಮತ್ತು ಐಐಎಸ್‌ಸಿಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಲಾಗಿದೆ. ಹಾಗಾಗಿಯೇ ಪ್ರತಿಷ್ಠಿತ ಐಟಿ/ಬಿಟಿ ಕ್ಷೇತ್ರಗಳೂ ಸಹ ಊರು ಕೇರಿಗಳಾಗುವ ಬದಲು ಅಗ್ರಹಾರೋಪಾದಿಯಲ್ಲಿ ಈ ದೇಶದ ಬಹುಸಂಖ್ಯಾತರಾದ (ಶೇ. ೫೫) ಹಿಂದುಳಿದ ವರ್ಗಗಳನ್ನು ಹೊರಗಿಡುವ ತಂತ್ರಗಳನ್ನು ಬಳಸುತ್ತಿವೆ.

ಈ ನಡುವೆ ವೃತ್ತಿಪರ ಶಿಕ್ಷಣದಲ್ಲಿ ನ್ಯಾಯಾಂಗ ...ಡಿರುವ ಗೊಂದಲ ಕಾರಿ ತೀರ್ಪುಗಳ ಹಿನ್ನೆಲೆಯಲ್ಲಿ ...ವಿಧಾನಕ್ಕೆ ೯೩ನೇ ತಿದ್ದುಪಡಿ ತರುವ ಮೂಲಕ ಪ.ಜಾ ...ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಖಾಸಗಿ ಸಂಸ್ಥೆ ...ೂ ಸೇರಿದಂತೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವ ...ಶಗಳನ್ನು ಮೀಸಲಿಡುವ ಅವಕಾಶ ಮಾಡಿಕೊಡ ...ಗಿದೆ. ಈ ತಿದ್ದುಪಡಿಗೆ ಎಲ್ಲ ಪಕ್ಷಗಳ ಒಪ್ಪಿಗೆಯೂ ...ರೆ ಯುವ ಮೂಲಕ ಸರ್ವಾನುಮತದ ಒಪ್ಪಿಗೆ ...ರೆತಿರುತ್ತದೆ.

...ತಿಭೆಯೆಂಬ ಹುಸಿ ಮಾನದಂಡ

ಗಾಯತ್ರಿಮಂತ್ರ ಪಠಿಸುವವರಿಗೆ ವರದಾನವಾಗಿ ...ವ, ನೆನಪಿನ ಸಾಮರ್ಥ್ಯಾಧಾರಿತ ಮಾನದಂಡದಿಂದ ...ತಿಭೆಯನ್ನು ಅಳೆಯುವುದು ಆಳುವ ವರ್ಗಗಳಿಗೆ ಆಪ್ಯಾ ...ಮಾನವಾದುದು, ಮನುವಾದಿಗಳಿಗೆ ಹಿತವಾದದ್ದು. ...ಪಕವೇ ಜ್ಞಾನವೆಂದಾದರೆ ಚಿಕ್ಕಂದಿನಿಂದ ಜ್ಞಾಪಕಕೋಶ ...ಗಳನ್ನು (ಮೆಮೊರಿ ಸೆಲ್ಸ್) ಬಳಸಿ ದವರಿಗೆ ಜ್ಞಾನ ಮೀಸ ...ಗುತ್ತದೆ. ಈಗ ಆಗಿರುವುದೂ ಹಾಗೆಯೇ! ವ್ಯವಸಾಯ ...ಡುವ, ಕಸುಬುದಾರಿಕೆಯಲ್ಲಿರುವ, ಕರಕುಶಲಕರ್ಮಿ ..., ಮೀನುಹಿಡಿಯುವ ಇತ್ಯಾದಿ ಎಲ್ಲ ಶ್ರಮ ಜೀವಿಗಳೂ ... ಸಾಹಸ, ಸಮಯಪ್ರಜ್ಞೆ, ಪ್ರಾಮಾಣಿಕತೆಗಳ ಮೂಲ ...ೇ ವೃತ್ತಿ ಕೌಶಲ್ಯ ಸಾಧಿಸುತ್ತಾರೆ. ಅನುಭವಗಳ ಗಣಿಗ ...ಗಿರುವ ಇವರು ಉರು ಹೊಡೆಯದೇ, ಗಿಳಿಪಾಠ ಒಪ್ಪಿ ...ದೇ ತಲೆತಲಾಂತರಗಳಿಂದ ಬಾಯಿಂದ ಬಾಯಿಗೆ, ...ಯಿಂದ ಕೈಗೆ ಕೌಶಲ್ಯವನ್ನು ಪಡೆದವರಾಗಿದ್ದಾರೆ.

ಒಂದು ವೃತ್ತಪತ್ರಿಕೆಯನ್ನೂ ಓದುವ ಹವ್ಯಾಸವನ್ನು ...ೊಂದಿರದ ಈ ವರ್ಗವು ಉರು ಹೊಡೆಯುವ, ಗಿಳಿ ...ಠ ಒಪ್ಪಿಸುವ ಪುಸ್ತಕದ ಜ್ಞಾಪಕಾದಾರಿತ ಪರೀಕ್ಷೆಗಳಲ್ಲಿ ಸಹಜವಾಗಿಯೇ ಕಡಿಮೆ ಅಂಕ ಪಡೆಯುತ್ತಾರೆ. ಪ್ರಾಮಾಣಿಕತೆ, ದಕ್ಷತೆ, ಸಮಯಪ್ರಜ್ಞೆ ನಿಷ್ಕಲ್ಮಶ ಪ್ರವೃತ್ತಿಗೆ, ಮಾನವೀಯತೆಗೆ, ಕರುಣೆಗೆ, ಸಾಹಸಗಳಿಗೆ ಅಂಕ ನೀಡುವುದಾದರೆ ಅಡ್ಡಿಯಿಲ್ಲ. ಬದಲಿಗೆ ಗಿಳಿಪಾಠ ಒಪ್ಪಿಸುವವರೇ ಪ್ರತಿಭಾವಂತರು ಎಂದು ಇಂದಿನ ಪರೀಕ್ಷಾ ಪದ್ಧತಿ ಪರಿಗಣಿಸುತ್ತಿದೆ. ಈ ಬಗೆಯ ವಿಧಾನವು ನಿಜವಾದ ದಕ್ಷತೆ, ಜ್ಞಾನ ಮತ್ತು ಪ್ರತಿಭೆಗಳನ್ನು ತಿರಸ್ಕರಿಸುತ್ತಿದೆ. ಭಾರತೀಯರಲ್ಲಿ ದಕ್ಷ ಮತ್ತು ನೈಜ ವಿಜ್ಞಾನಿ ಗಳಾಗಲೀ, ನ್ಯಾಯಮೂರ್ತಿಗಳಾಗಲೀ, ಕಾನೂನು ತಜ್ಞರಾಗಲೀ, ಸಾಹಿತಿಗಳಾಗಲೀ ಕಾಣಸಿಗುವುದಿಲ್ಲ. ಬದಲಾಗಿ ಬ್ರಿಟಿಷರ ನ್ಯಾಯ ವಿತರಣಾ ಸಂಸ್ಥೆ ವೆಸ್ಟ್ ಮಿನಿಸ್ಟಾರ್ ಪ್ರಜಾತಂತ್ರ, ರಷ್ಯನ್ ಬಾಹ್ಯಾಕಾಶ ವಿಜ್ಞಾನ, ಅಮೆರಿಕದ ಅಣುಸ್ಥಾವರಗಳು ಭಾರತದಲ್ಲಿ ಬೇರೂರಿವೆ. ನಾವು ಬಳಸುವ ಮೊಬೈಲ್‌ಗಳೂ ಸಹ ಪರದೇಶದ್ದೇ ಆಗಿವೆ. ಪುಟ್ಟ ಕೊರಿಯಾ ದೇಶಕ್ಕಿರುವ ಸಾಮರ್ಥ್ಯವೂ ನಮ್ಮ ಐಐಟಿಗಳಿಗಿಲ್ಲ. ಇಲ್ಲಿಂದ ಮೇಲುವರ್ಗದ ಲಕ್ಷಾಂತರ ಐಟಿ ಇಂಜಿನಿಯರ್‌ಗಳು ಸಹ ಹೊರದೇಶದ ವಿಂಡೋಸ್ ಆಪರೇಟಿಂಗ್ ಪ್ರೋಗ್ರಾಮ್ ಮೂಲಕ ಕಂಪ್ಯೂಟರ್ 'ಸೇವೆ' ಮಾಡುವವರೇ ಹೊರತು ಅಂತಹ ಮತ್ತೊಂದು ಆಪರೇಟಿಂಗ್ ಪ್ರೋಗ್ರಾಮ್‌ಗಳನ್ನು ಸೃಷ್ಟಿಸುವ ಕ್ರಿಯಾಶೀಲತೆಯನ್ನೂ ತೋರಿಲ್ಲ. ಹಾಗಾಗಿ ಜ್ಞಾಪಕಶಕ್ತಿಯೇ ಮಾನದಂಡವಾಗಿರುವುದರಿಂದ ಈ ಬಗೆಯ ನಕಲು ಸೇವೆ ಮಾಡುವುದು ಅನಿವಾರ್ಯ. ಅದರಲ್ಲಿ ಹಿಂದುಳಿದ ವರ್ಗಗಳು ನಿಶ್ಚಯವಾಗಿ ಹಿಂದೆ ಬಿದ್ದಿವೆ. ಒಂದು ರಾಷ್ಟ್ರದ ಬುನಾದಿಯಾಗಬಲ್ಲ ಸಂಪ ತ್ತನ್ನು ಸೃಷ್ಟಿಸುವ ಕ್ರಿಯಾಶೀಲ ಚಟುವಟಿಕೆಗಳಲ್ಲಾದರೆ ಹಿಂದುಳಿದ ವರ್ಗಗಳೇ ಪ್ರತಿಭಾಶೀಲರು. ಹಾಗಾಗಿ ಇಂದಿನ ಪ್ರತಿಭೆಯನ್ನು ಅಳೆಯುವ ಮಾನದಂಡವು ಜ್ಞಾಪಕಶಕ್ತಿಯನ್ನು ಅಳೆಯುವ ಮಾನದಂಡವೇ ಹೊರತು ಜ್ಞಾನವನ್ನು ಅಳೆಯುವ, ದಕ್ಷತೆಯನ್ನು ತಿಳಿಯುವ ಸಾಧನವಂತೂ ಖಂಡಿತ ಅಲ್ಲ. ಹಾಗಾಗಿ ಈಗಿನ ಪ್ರತಿಭೆ ಒಂದು ಜಾತಿಗೆ (ಬ್ರಾಹ್ಮಣ) ಸೀಮಿತವಾದ ಸಾಧನವಾಗಿ ಇಡೀ ಜ್ಞಾನ-ವಿಜ್ಞಾನವನ್ನೇ ಈ ಜಾತಿಗೆ ಮೀಸಲಿಟ್ಟಿದೆ. ಈ ಏಕೀಕೃತವಾಗಿ ಬಂಧಿಸಲ್ಪಟ್ಟಿರುವ ಜ್ಞಾನ-ವಿಜ್ಞಾನವನ್ನು ಒಂದು ವರ್ಗ/ಜಾತಿಯ ಹಿಡಿತದಿಂದ ಬಿಡಿಸಬೇಕಿದೆ.

ಮೀಸಲಾತಿಯ ಮೂಲಕ ಪ್ರತಿಯೊಂದು ಜಾತಿಯಲ್ಲಿಯೂ ಅರ್ಹರನ್ನು ಹುಡುಕಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ನೀಡುವುದರ ಮೂಲಕ ಉನ್ನತ/ವೃತ್ತಿಪರ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕಾಗುತ್ತದೆ. ಇದುವರೆಗೂ ಕೆಲವೇ ನಿರ್ದಿಷ್ಟ ಜಾತಿಗಳ ಹಿಡಿತದಲ್ಲಿರುವ ಶಿಕ್ಷಣ ಕ್ಷೇತ್ರದ ಕಣ್ಮಣಿಗಳಾದ ಐಐಟಿ, ಐಐಎಂ ಮತ್ತು ಐಐಎಸ್‌ಸಿಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಲಾಗಿದೆ. ಹಾಗಾಗಿಯೇ ಪ್ರತಿಷ್ಠಿತ ಐಟಿ/ಬಿಟಿ ಕ್ಷೇತ್ರಗಳೂ ಸಹ ಊರು ಕೇರಿಗಳಾಗುವ ಬದಲು ಅಗ್ರಹಾರೋಪಾದಿಯಲ್ಲಿ ಈ ದೇಶದ ಬಹುಸಂಖ್ಯಾತರಾದ (ಶೇ. ೫೫) ಹಿಂದುಳಿದ ವರ್ಗಗಳನ್ನು ಹೊರಗಿಡುವ ತಂತ್ರ ಗಳನ್ನು ಬಳಸುತ್ತಿವೆ. ಈ ಹಿನ್ನೆಲೆಯಲ್ಲಿ ಸಂವಿಧಾನವನ್ನು ಗೌರವಿಸಿ ಕೇಂದ್ರ ಸರ್ಕಾರದ ಶಿಕ್ಷಣ ಸಂಸ್ಥೆಗಳು ಮತ್ತು ಖಾಸಗೀ ಕ್ಷೇತ್ರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ಪರವಾದ ಬೃಹತ್ ಆಂದೋಲನವನ್ನು ಹಮ್ಮಿಕೊಳ್ಳಬೇಕಾಗಿದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ವಿದೇಶ

ಇಡೀ ಲ್ಯಾಟಿನ್ ಅಮೆರಿಕಾ ಈಗ 'ಪ್ರಗತಿ' ಹಾದಿಯಲ್ಲಿದೆ. ೨೦೦೫ರಲ್ಲಿ ಸತತ ಮೂರನೇಯ ಬಾರಿ ಶೇ ೪.೩ರಷ್ಟು ಬೆಳವಣಿಗೆ ಸಾಧಿಸಿದೆ. ೨೦೦೪ರಲ್ಲಿ ಶೇ ೧೦.೩ರಷ್ಟಿದ್ದ ನಿರುದ್ಯೋಗ ಶೇ ೯.೩ಕ್ಕೆ ಇಳಿದಿದೆ. ೨೦೦೨ರಲ್ಲಿ ಶೇ ೪೪ರಷ್ಟಿದ್ದ ಬಡತನದ ಮಟ್ಟ ಈಗ ಶೇ ೪೦.೬ಕ್ಕೆ ಕುಸಿದಿದೆ. ಸರಕು ವೆಚ್ಚ ಏರುಮುಖ ತೋರಿರುವುದರಿಂದ ರಫ್ತು ಕೂಡ ಹೆಚ್ಚಿದೆ. ೨೦೦೧ರ ಆರ್ಥಿಕ ಸಂಕಷ್ಟದ ನಂತರ ಅರ್ಜೆಂಟೈನಾ ಕಳೆದ ಮೂರು ವರ್ಷಗಳಿಂದ ಶೇ ೮ರಿಂದ ೯ರಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಸಾಧಿಸುತ್ತಿದೆ. ಅಂತಾರಾಷ್ಟ್ರೀಯ ಹಣಕಾಸು ಮಾರುಕಟ್ಟೆಗಳಲ್ಲಿದ್ದ ಆತಂಕಗಳು ಶಮನಗೊಂಡು ಬ್ರೆಜಿಲ್ ಅರ್ಥವ್ಯವಸ್ಥೆಯನ್ನು ಸುಸ್ಥಿತಿ ಕಂಡಿದೆ.

ಜಾರ್ಜ್ ಹೇನ್
ಅನು: ಸತ್ಯಪ್ರಕಾಶ್ ಎಂ.ಆರ್

ಎತ್ತ ಸಾಗುತ್ತಿದೆ ಲ್ಯಾಟಿನ್ ಅಮೆರಿಕಾ ?

ಅಮೆರಿಕಾ ಖಂಡಗಳಲ್ಲಿ ಮಾನವ ಹಕ್ಕುಗಳನ್ನು ಕುರಿತು ಇತ್ತೀಚೆಗೆ ವಿಶ್ವಸಂಸ್ಥೆ ಪ್ರಾಯೋಜಿತ ವಿಚಾರ ಸಂಕಿರಣದ ಜತೆ ಜತೆಗೆ "ತೀವ್ರ ಪೈಪೋಟಿಯ ಚುನಾವಣೆ ಕುರಿತು ಫೆಡರಲ್ ಎಲೆಕ್ಷನ್ ಇನ್ಸ್‌ಟಿಟ್ಯೂಟ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಜಂಟಿಯಾಗಿ ಆಯೋಜಿಸಿದ್ದ ವಿಚಾರ ಸಂಕಿರಣ ಸಹಾ ನಡೆಯುತ್ತಿತ್ತು (ವಿಚಾರ ಸಂಕಿರಣದಲ್ಲಿ ಭಾರತದ ಪ್ರಮುಖ ಚುನಾವಣಾ ವಿಶ್ಲೇಷಕ ಯೋಗೇಂದ್ರ ಯಾದವ್ ೨೦೦೪ರ ಸಾರ್ವಜನಿಕ ಚುನಾವಣೆಯ ಬಗ್ಗೆ ವಿಚಾರ ಮಂಡಿಸಿದರು). ಚುನಾವಣಾ ವಿಶ್ಲೇಷಕರಿಂದ "ತೀವ್ರ ಪೈಪೋಟಿಯ" ಚುನಾವಣೆ ಎಂದು ಬಣ್ಣಿಸಲ್ಪಟ್ಟ ಕಳೆದ ಜುಲೈ ೨ರ ಮೆಕ್ಸಿಕೋದ ಅಧ್ಯಕ್ಷೀಯ ಚುನಾವಣೆಯ ಬಗ್ಗೆ ಬೆಳಕು ಚೆಲ್ಲುವುದು ಕಾರ್ಯಕ್ರಮ ಆಯೋಜಕರ ಉದ್ದೇಶವಾಗಿತ್ತು. ಆ ವಾದದಲ್ಲಿ ಸ್ವಲ್ಪ ಮಟ್ಟಿಗೆ ಹುರುಳಿದ್ದರೂ ಇರಬಹುದು.

ಆದರೆ ಈಗ ಆಂಡ್ರೆ ಮ್ಯಾನು ಯೆಲ್ ಒಬ್ರಡಾರ್ (ಅಥವಾ ಎಎಂಎಲ್ಓ ಎಂದು ಜನಪ್ರಿಯರಾಗಿರುವ ಮೆಕ್ಸಿಕೋ ನಗ ರದ ಮಾಜಿ ಮೇಯರ್) ತಮ್ಮ ಸಮೀಪದ ಪ್ರತಿ ಸ್ಪರ್ಧಿಗಿಂತ ನಾಲ್ಕು ಪಾಯಿಂಟ್‌ಗಳ ಅಂತರದಿಂದ ಮುಂದಿದ್ದಾರೆ. ಈಗ ಇವರನ್ನು ಸೋಲಿಸುವುದು ಬಹುತೇಕ ಅಸಾಧ್ಯವಾಗಿ ಸಾಬೀತಾಗಿದೆ. ಓಎಂಎಲ್ಓ, ಇದುವರೆಗೂ ಅಧ್ಯಕ್ಷೀಯ ಚುನಾವಣೆಯಲ್ಲಿ ಒಮ್ಮೆಯೂ ಗೆಲುವು ಸಾಧಿಸಲಾಗದ ಎಡಪಂಥೀಯ ಪ್ರಜಾಪ್ರಭುತ್ವ ಕ್ರಾಂತಿಕಾರಿ ಪಕ್ಷವನ್ನು ಪ್ರತಿನಿಧಿಸುವ ನಾಯಕ. ಕಳೆದ ಏಪ್ರಿಲ್ ೯ರಂದು ಪೆರುವಿನಲ್ಲಿ ನಡೆದ ಚುನಾವಣೆಯನ್ನು ಸಹಾ ನಾವು ಇದಕ್ಕೆ ತಾಳೆ ಹಾಕಿ ನೋಡಬೇಕು. ಚುನಾವಣೆಯಲ್ಲಿ ಅಗ್ರಪಂಕ್ತಿಯಲ್ಲಿ ಹೊರಹೊಮ್ಮಿರುವ ಒಲ್ಲಾಂಟಾ ಹುಮಾಲಾ ಮತ್ತು ಅಲ್ಯಾನ್ ಗಾರ್ಷಿಯಾ (ಇಬ್ಬರೂ ಎಡಪಂಥೀಯರು) ಈಗ ಒಬ್ಬರನ್ನೊಬ್ಬರು ಎದುರಿಸಲಿದ್ದಾರೆ. ಒಟ್ಟಾರೆ ಇವೆರಡೂ ಚುನಾವಣೆಗಳು ಇತ್ತೀಚೆಗೆ ಲ್ಯಾಟಿನ್ ಅಮೆರಿಕಾದಲ್ಲಿ ನಡೆಯುತ್ತಿರುವ ಚುನಾವಣಾ ಫಲಿತಾಂಶಗಳ ಮಾದರಿಯನ್ನು ಸ್ಪಷ್ಟವಾಗಿ ನಮ್ಮ ಮುಂದಿಡುತ್ತದೆ.

ಕೆಲವು ಕಡೆ ಎಡಪಕ್ಷಗಳು ಉತ್ತಮ ಬಹುಮತದೊಂದಿಗೆ ಗೆಲುವು ಸಾಧಿಸಿವೆ. ಇನಾಷಿಯೋ ಲೂಲಾ ಡಾ ಸಿಲ್ವಾ ೨೦೦೨ರ ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರೆ, ೨೦೦೩ರ ಅರ್ಜೆಂಟೈನಾ ಚುನಾವಣೆಯಲ್ಲಿ ನೆಸ್ಟರ್ ಕಿರ್ಚ್ನರ್ ಗೆದ್ದಿದ್ದಾರೆ. ೨೦೦೪ ರಲ್ಲಿ ಉರುಗ್ವೆಯಲ್ಲಿ ನಡೆದ ಚುನಾವಣೆಯಲ್ಲಿ ಎಡಪಕ್ಷದಿಂದ ಮೊಟ್ಟ ಮೊದಲನೆಯದಾಗಿ ತಬಾರ್ ವಾಸ್ಕ್ವೇಜ಼್ ಜಯಗಳಿಸಿದ್ದರೆ, ೨೦೦೪ ರ ಡೊಮಿನಿಕನ್ ರಿಪಬ್ಲಿಕ್ ಅಧ್ಯಕ್ಷೀಯ ಚುನಾವಣೆಯಲ್ಲಿ ಲಿಯೋನೆಲ್ ಫರ್ನಾಂಡಿಸ್ ಗೆಲುವು ಸಾಧಿಸಿದ್ದಾರೆ. ಇವೋ ಮೊರೇಲ್ಸ್ ೨೦೦೫ರಲ್ಲಿ ಬೊಲಿವಿಯಾದಲ್ಲಿ, ಮಿಷೆಲ್ ಬ್ಯಾಷೆಲೆ ೨೦೦೬ ರಲ್ಲಿ ಚಿಲಿ ದೇಶದಲ್ಲಿ ಜಯಭೇರಿ ಬಾರಿಸಿದ್ದಾರೆ. ಹ್ಯೂಗೋ ಷಾವೆಜ಼್ ವೆನಿಜುಯೆಲಾದಲ್ಲಿ ಬಹಳ ವರ್ಷಗಳಿಂದ ಅಧಿಕಾರದಲ್ಲಿದ್ದು ಸತತವಾಗಿ ಗೆಲುವು ಸಾಧಿಸುತ್ತಾ ಬಂದಿದ್ದಾರೆ.

ಆದರೂ ಫಲಿತಾಂಶಗಳ ಮಾದರಿಯಲ್ಲಿ ವಿರೋಧಾಭಾಸಗಳಿವೆ. ತೀವ್ರ ಆರ್ಥಿಕ ಸಂಕಷ್ಟದ ವಿರುದ್ಧ ಜನ ಮತಚಲಾಣೆ ಮಾಡಿರುವುದರಿಂದ ಎಡಪಂಥೀಯರು ಹೊಸದಾಗಿ ಅಧಿಕಾರದ ಚುಕ್ಕಾಣಿ ಹಿಡಿಯುವಂತಾಯಿತು ಎಂದು ಸಾಮಾನ್ಯವಾಗಿ ವಿಶ್ಲೇಷಿ… ವುದು ಸಹಜ. ಆದರೆ ಪ್ರಸ್ತುತ ಲ್ಯಾಟಿನ್ ಅಮೆರಿಕಾದಲ್ಲಿ ನಡೆಯುತ್ತಿ… ವುದೇ ಬೇರೆ. ಇಡೀ ಲ್ಯಾಟಿನ್ ಅಮೆರಿಕಾ ಈಗ 'ಪ್ರಗತಿ' ಹಾದಿ… ಲ್ಲಿದೆ. ೨೦೦೫ರಲ್ಲಿ ಸತತ ಮೂರನೇಯ ಬಾರಿ ಶೇ ೪.೩ರಷ್ಟು ಬೆ… ವಣಿಗೆ ಸಾಧಿಸಿದೆ. ೨೦೦೪ರಲ್ಲಿ ಶೇ ೧೦.೩ರಷ್ಟಿದ್ದ ನಿರುದ್ಯೋಗ ಶ… ೯.೩ಕ್ಕೆ ಇಳಿದಿದೆ. ೨೦೦೨ರಲ್ಲಿ ಶೇ ೪೪ರಷ್ಟಿದ್ದ ಬಡತನದ ಮ… ಈಗ ಶೇ ೪೦.೬ಕ್ಕೆ ಕುಸಿದಿದೆ. ಸರಕು ವೆಚ್ಚ ಏರುಮುಖ ತೋರಿ… ವುದರಿಂದ(ತೈಲದ ಬೆಲೆ ಬ್ಯಾರೆಲ್‌ಗೆ ಎಪ್ಪತ್ತು ಡಾಲರ್‌ಗಳಿಗೆ ಏರಿದ… ತಾಮ್ರದ ಬೆಲೆ ಮೂರು ಪೌಂಡ್‌ಗಳಿಗೆ ಏರಿದೆ) ರಫ್ತು ಕೂಡ ಹೆಚ್ಚಿ… ಈಗಿನ ಆರ್ಥಿಕ ಚಟುವಟಿಕೆಗಳಲ್ಲಿ ಲ್ಯಾಟಿನ್ ಅಮೆರಿಕಾ ಸಾಕಷ… ಲಾಭ ಗಳಿಸಿದೆ.

೨೦೦೧ರ ಆರ್ಥಿಕ ಸಂಕಷ್ಟದ ನಂತರ ಅರ್ಜೆಂಟೈನಾ ಕಳೆ… ಮೂರು ವರ್ಷಗಳಿಂದ ಶೇ ೮ರಿಂದ ೯ರಷ್ಟು ಪ್ರಮಾಣದಲ್ಲಿ ಅ… ವೃದ್ಧಿ ಸಾಧಿಸುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ಅಂತಾರ… ಷ್ಟ್ರೀಯ ಹಣಕಾಸು ಮಾರುಕಟ್ಟೆಗಳಲ್ಲಿದ್ದ ಆತಂಕಗಳನ್ನು ಶಮನಗ… ಳಿಸಿದ ಅಧ್ಯಕ್ಷ ಲೂಲಾ ಡಾ ಸಿಲ್ವ ಬ್ರೆಜಿಲ್ ಅರ್ಥವ್ಯವಸ್ಥೆಯನ್ನು ಸ್ಥಿ… ಗೊಳಿಸಿದ್ದು ಈಗಲೂ ಸುಸ್ಥಿತಿಯಲ್ಲಿರಿಸಿದ್ದಾರೆ. ಈ ಹಿನ್ನೆಲೆಯ… ಬರುವ ನವೆಂಬರ್ ಚುನಾಣೆಯಲ್ಲಿ ಲೂಲಾ ಮತ್ತೆ ಆಯ್ಕೆಯಾಗು… ಸಾಧ್ಯತೆ ಇದ್ದೇ ಇದೆ. ಇಡೀ ಲ್ಯಾಟಿನ್ ಅಮೆರಿಕಾದ ದೊಡ್ಡ ಅರ್ಥ… ವ್ಯವಸ್ಥೆಯಾಗಿ ಈಗ ಮೆಕ್ಸಿಕೋ ಹೊರಹೊಮ್ಮಿದೆ(ಬ್ರೆಜ಼ಿಲ್ ಮತ್ತು ಅರ್ಜೆಂಟೈನಾ ಎರಡೂ ದೇಶಗಳ ಒಟ್ಟಾರೆ ಅರ್ಥವ್ಯವಸ್ಥೆಯಷ್ಟು) ಎಗ್ಗಿಲ್ಲದೆ ಬೆಳೆಯುತ್ತಿರುವ ಆರ್ಥಿಕ ಸಂಪನ್ಮೂಲವನ್ನು ನಿಯಂತ್ರಿಸ… ವುದೇ ಚಿಲಿ ದೇಶದ ಪ್ರಮುಖ "ಸಮಸ್ಯೆ"ಯಾಗಿಬಿಟ್ಟಿದೆ! ದೇಶದ… ಪ್ರಸ್ತುತ ಆರ್ಥಿಕ ಮಿಗತೆ ೭ ಬಿಲಿಯನ್ ಡಾಲರ್ ಅಥವಾ ಆಂತರಿ… ಉತ್ಪನ್ನದ ಶೇ ೬ರಷ್ಟಿದ್ದು ಪೆಸೋದ ಮೌಲ್ಯವನ್ನು ವೃದ್ಧಿಸಿದೆ (ಇದು "ಡಚ್ ರೋಗ"ದ ಸ್ಪಷ್ಟ ನಿದರ್ಶನ). ಲ್ಯಾಟಿನ್ ಅಮೆರಿಕಾದಲ್ಲಿ ೨೦೦೪ ರಲ್ಲಿ ೬೧ಬಿಲಿಯನ್ ಡಾಲರ್‌ಗಳಷ್ಟಿದ್ದ ವಿದೇಶಿ ಬಂಡವಾಳ ಹೂಡಿಕೆ ಸ್ವಲ್ಪ ಕಡಿಮೆಯಾಗಿದ್ದು, ೨೦೦೫ರಲ್ಲಿ ೬೦ ಬಿಲಿಯನ್ ಡಾಲರ್‌ನಷ್ಟಿದೆ. ಜತೆಗೆ ಅಂತರರಾಷ್ಟ್ರೀಯ ಆರ್ಥಿಕ ಹೂಡಿಕೆ ಕೂಡ ಮೇಲ್ಮುಖವಾಗಿದೆ. ಲ್ಯಾಟಿನ್ ಅಮೆರಿಕಾ ಸ್ಟಾಕ್ ಕೇಂದ್ರಿತ ಮ್ಯೂಚು… ಯಲ್ ಫಂಡ್‌ಗಳು ಕಳೆದ ಮೂರು ವರ್ಷಗಳಿಂದ ಸತತವಾಗಿ ಮಾರ್ನಿಂಗ್ ಸ್ಟಾರ್ ಫಂಡ್ ಶ್ರೇಣಿಯಲ್ಲಿ ಅತ್ಯುತ್ತಮವಾಗಿ ಕಾರ್ಯ… ನಿರ್ವಹಿಸುತ್ತಿವೆ.

ಇದೆಲ್ಲದರ ಅರ್ಥ ಏನು? ಪ್ರಸ್ತುತ ನಮ್ಮ ಕಣ್ಮುಂದೆ ಘಟಿಸುತ್ತಿ… ರುವುದನ್ನು ಒಂದು ರೀತಿಯಲ್ಲಿ "ತೃತೀಯ ಅಲೆ" ಎನ್ನಬಹುದು. ೧೯೬೦ರಿಂದ ೧೯೮೦ರ ಪ್ರಥಮಾರ್ಧದವರೆಗೆ ಮಿಲಿಟರಿ ಸರ್ವಾಧಿ… ಕಾರಿ (ದಕ್ಷಿಣ ಅಮೆರಿಕಾದವರ ಪ್ರಕಾರ ನೌಕರಶಾಹಿ ಸರ್ವಾಧಿಕಾರ) ಆಡಳಿತ ಇತ್ತು. ನಂತರ ಅಮೆರಿಕಾ ನಿಯಂತ್ರಣದ ಪ್ರಜಾಪ್ರಭುತ್ವದ… ಆಟ ನಡೆಯಿತು. ಈಗ ಎಡಪಂಥೀಯರ ಒಲವು ಕಂಡುಬರುತ್ತಿದೆ. "ಸುಧಾರಣೆ"ಯ ನೆಪಕ್ಕೋಸ್ಕರ ಹೇರಲ್ಪಟ್ಟ ಮತಾಂಧ ಆರ್ಥಿಕ… ನೀತಿಯ ವಿರುದ್ಧ ಕಂಡು ಬಂದಿರುವ ಸುಸ್ಪಷ್ಟ ಪ್ರತಿಕ್ರಿಯೆಯಿದು. ಪ್ರತಿ… ವರ್ಷವೂ ಸ್ವರ್ಗವನ್ನು ಧರೆಗಿಳಿ ಸುವ ಭರವಸೆ ನೀಡಿ ನುಣುಚಿಕೊಳ್ಳು…

ರುವ ಬಂಡವಾಳ ಶಾಹಿಗಳ ನಿದರ್ಶನ ಜನರ ಕಣ್ಣಿನಿಂದೆ ಇನ್ನೂ ಮಾಸಿಲ್ಲ. ಆದರೂ ಸಹಾ ಯಶಸ್ವಿಯಾಗಬಲ್ಲ "ತೃತೀಯ ಪೀಳಿಗೆಯ ಸುಧಾರಣೆ"ಗಳ ಬಗ್ಗೆ ಮಾತನಾಡುವ ಮುಂಚೆ ನಾವು ಸಮಸ್ಯೆಗಳ ಕಡೆಗೂ ಗಮನ ಕೊಡಬೇಕು.

ಲ್ಯಾಟಿನ್ ಅಮೆರಿಕಾ ಖಂಡದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಆದಾಯದ ಅಸಮಾನತೆ ಇದೆ. ಇದುವರೆಗೂ ಸತತವಾಗಿ ಜಾರಿಗೊಳಿಸಲಾಗಿರುವ ಸುಧಾರಣಾ ಕ್ರಮಗಳು, ಅದರ ಉತ್ತಮ ಅಂಶಗಳು ಏನೇ ಇರಬಹುದು, ಸಾಮಾಜಿಕ ವರ್ಗಗಳ ನಡುವೆ ಇರುವ ಅಸಮಾನತೆಯನ್ನು ಅಳಿಸಿಹಾಕುವಲ್ಲಿ ವಿಫಲವಾಗಿವೆ. ಇಲ್ಲಿನ ಸಮಸ್ಯೆಗೆ ಮೂಲಕಾರಣ ಆರ್ಥಿಕ ಸುಧಾರಣಾ ನೀತಿಯೋ (ಖಾಸಗೀಕರಣ, ನಿಯಮಗಳ ಸಡಿಲೀಕರಣ, ಮುಕ್ತ ನೀತಿ) ಅಥವಾ ಅದನ್ನು ಜಾರಿಗೊಳಿಸುತ್ತಿರುವ ರೀತಿಯೋ (ಅತಿ ವೇಗವಾಗಿ ಅಥವಾ ನಿಧಾನಗತಿಯಲ್ಲಿ, ಅಲ್ಪಮಟ್ಟಿಗೆ ಅಥವಾ ಪರಿಪೂರ್ಣವಾಗಿ) ಎಂಬುದರ ಬಗ್ಗೆ ಬೇಕಾದರೆ ನಾವು ಚರ್ಚೆ ಮಾಡಬಹುದು. ಆದರೆ ಲ್ಯಾಟಿನ್ ಅಮೆರಿಕಾದ್ಯಂತ ಸ್ಪಷ್ಟವಾಗಿ ಆರ್ಥಿಕ ಬೆಳವಣಿಗೆಯಾಗುತ್ತಿದ್ದರೂ, ಈಗಲೂ ಸಹಾ ಬಹುತೇಕ ಮಂದಿಯ ಜೀವನ ಮಟ್ಟದಲ್ಲಿ ಯಾವುದೇ ರೀತಿಯ ಸುಧಾರಣೆಯೂ ಕಂಡುಬಂದಿಲ್ಲ.

ಈ ಪರಿಸ್ಥಿತಿಯನ್ನು ಗಮನಿಸುತ್ತಿರುವ ಪರಿಚಿತರೊಬ್ಬರು ಸ್ವಲ್ಪ ಸಹಾನುಭೂತಿಯಿಂದ "ಅರವತ್ತರ ದಶಕದ ವಿಷಯಗಳು ಮತ್ತೆ ಈ ಪ್ರದೇಶದಲ್ಲಿ ತಲೆ ಎತ್ತು ತ್ತಿವೆ" ಎಂದು ತಮ್ಮ ಅನಿಸಿಕೆಯನ್ನು ಇತ್ತೀಚೆಗೆ ನನ್ನ ಬಳಿ ಹಂಚಿಕೊಂಡರು. ಆದರೆ ನಿಜಕ್ಕೂ ಈ ರೀತಿಯ ಯಾವುದೇ ವಿದ್ಯಮಾನ ಲ್ಯಾಟಿನ್ ಅಮೆರಿಕಾದಲ್ಲಿ ಕಂಡುಬರುತ್ತಿಲ್ಲ.

ಈ ಬದಲಾವಣೆಗಳು ಸೈದ್ಧಾಂತಿಕವಾದುದಲ್ಲ ಬದಲಿಗೆ ಸಾಂಸ್ಕೃತಿಕವಾದುದು. ಒಟ್ಟು ಜನಸಂಖ್ಯೆಯ ಒಂದು ಸಣ್ಣ ತುಣುಕಾಗಿದ್ದುಕೊಂಡು ಸರ್ಕಾರದಲ್ಲಿನ ಉನ್ನತ ಅಧಿಕಾರದ ಚುಕ್ಕಾಣಿಹಿಡಿದು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಏಕಸ್ವಾಮ್ಯ ಸಾಧಿಸಿದ್ದ ಯೂರೋಪಿಯನ್ ಎಲೀಟ್‌ಗಳನ್ನು ಹೊರಹಾಕುತ್ತಿರುವ ಪ್ರಕ್ರಿಯೆ ಇದು. ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಬೆರಳು ಕಳೆದುಕೊಂಡ ಸಾಮಾನ್ಯ ಕೆಲಸಗಾರ ಬ್ರೆಜಿಲ್‌ನ ರಾಷ್ಟ್ರಾಧ್ಯಕ್ಷರಾಗುವುದು, ಓರ್ವ ಆದಿವಾಸಿ ನಾಯಕ ಬೊಲಿವಿಯಾ ದೇಶದ ಅಧ್ಯಕ್ಷನಾಗುವುದು, ದೇವರನ್ನು ನಂಬದ ಓರ್ವ ಒಂಟಿ ಮಹಿಳೆ ಚಿಲಿ ದೇಶದ ಅಧ್ಯಕ್ಷಸ್ಥಾನ ಪಡೆಯುವುದು ಒಂದು ಬಹುದೊಡ್ಡ ಕ್ರಾಂತಿಕಾರಿ ಬೆಳವಣಿಗೆಯನ್ನು ಸೂಚಿಸುತ್ತದೆ. ಈ ಎಲ್ಲರೂ ಶೇ ೫೦ಕ್ಕಿಂತ ಹೆಚ್ಚು ಬಹುಮತ ಪಡೆದು ಆಯ್ಕೆಯಾದವರು. ಇದುವರೆವಿಗೂ ಉನ್ನತ ವರ್ಗಕ್ಕೆ ಶರಣಾಗತರಾಗಿ ಅವರ ಅಣತಿಯಂತೆ ನಡೆಯುತ್ತಿದ್ದ ಜನರ ಸಾಮಾಜಿಕ ಮತ್ತು ರಾಜಕೀಯ ವರ್ತನೆ ಈಗ ನಿಸ್ಸಂಶಯವಾಗಿ ಬದಲಾಗಿದೆ.

೧೯೬೦ರ ಬೆರಕೆ ಆರ್ಥಿಕ ನೀತಿಗೇ ಜೋತು ಬೀಳದೆ ಸಾಂಪ್ರದಾಯಿಕವಾದ ಆರ್ಥಿಕ ನೀತಿಯನ್ನು ಲ್ಯಾಟಿನ್ ಅಮೆರಿಕಾದ ಎಡಪಂಥೀಯ ಸರ್ಕಾರಗಳು ಅನುಸರಿಸುತ್ತಿರುವುದು ಎರಡನೆಯ ಪ್ರಮುಖ ವಿಷಯ. ಆರ್ಥಿಕ ಅಸ್ಥಿರತೆ ಹಾಗೂ ಹಣದುಬ್ಬರದಿಂದ ತತ್ತರಿಸಿದ್ದ ಈ ರಾಷ್ಟ್ರಗಳ ಮತದಾರರು ಮತ್ತೆ ಅಂತಹ ಪ್ರಯೋಗಗಳನ್ನು ಸಹಿಸುವುದಿಲ್ಲ.

ಎಡ ಪಂಥೀಯ ಧೋರಣೆಯ ಅಲೆಜ್ಞಾಂಡ್ರೋ ಟೋಲೇಡೊ ಅವರ ಐದು ವರ್ಷದ ಆಡಳಿತದಲ್ಲಿ ಪೆರು ದೇಶ ಅಭೂತ ಪೂರ್ವವಾದ ಆರ್ಥಿಕ ಬೆಳವಣಿಗೆ ಸಾಧಿಸಿದ್ದು ಸಾಕಷ್ಟು ಪ್ರಮಾಣದಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಿಸಿದೆ. ಪೆರು ಈಗಾಗಲೇ ಅಮೆರಿಕಾ ಜತೆಗೆ ಎಫ್‌ಟಿಎ ಒಪ್ಪಂದಕ್ಕೆ ಸಹಿ ಹಾಕಿದೆ. ಉರುಗ್ವೆ ಸಹಾ ಈ ದಿಶೆಯಲ್ಲಿ ಗಂಭೀರವಾಗಿ ಯೋಚಿಸುತ್ತಿದೆ. ಮೆಕ್ಸಿಕೋದಲ್ಲಿನ ಎಎಂಎಲ್‌ಒ ಅವರ ಸರ್ಕಾರ ಅಮೆರಿಕಾ ಹಾಗೂ ಎನ್‌ಎಫ್‌ಟಿಎ ಯೋಜನೆಯ ಜತೆ ತಿಕ್ಕಾಟಕ್ಕೆ ಕಾರಣವಾದ ಆರ್ಥಿಕ ನೀತಿಯನ್ನು ಈಗಲೂ ಮುಂದುವರೆಸುತ್ತದೆ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಈಗಾಗಲೇ ನಾನು ಅರ್ಜೆಂಟೈನಾ ಮತ್ತು ಬ್ರೆಜಿಲ್ ದೇಶಗಳು ಆರ್ಥಿಕ ಸುಸ್ಥಿತಿ ತಲುಪಿರುವ ಬಗ್ಗೆ ಹಾಗೂ ಚಿಲಿ ದೇಶದ ಅದ್ಭುತ ಕೆಲಸಗಳ ಬಗ್ಗೆ ಹೇಳಿದ್ದೇನೆ. ಎಡ ಪಂಥೀಯ ಧೋರಣೆಯ ಅಲೆಜ್ಞಾಂಡ್ರೋ ಟೋಲೇಡೊ ಅವರ ಐದು ವರ್ಷದ ಆಡಳಿತದಲ್ಲಿ ಪೆರು ದೇಶ ಅಭೂತ ಪೂರ್ವವಾದ ಆರ್ಥಿಕ ಬೆಳವಣಿಗೆ ಸಾಧಿಸಿದ್ದು ಸಾಕಷ್ಟು ಪ್ರಮಾಣದಲ್ಲಿ ವಿದೇಶಿ ಬಂಡವಾಳವನ್ನು ಆಕರ್ಷಿಸಿದೆ. ಪೆರು ಈಗಾಗಲೇ ಅಮೆರಿಕಾ ಜತೆಗೆ ಎಫ್‌ಟಿಎ ಒಪ್ಪಂದಕ್ಕೆ ಸಹಿ ಹಾಕಿದೆ. ಉರುಗ್ವೆ ಸಹಾ ಈ ದಿಶೆಯಲ್ಲಿ ಗಂಭೀರವಾಗಿ ಯೋಚಿಸುತ್ತಿದೆ. ಮೆಕ್ಸಿಕೋದಲ್ಲಿನ ಎಎಂಎಲ್‌ಒ ಅವರ ಸರ್ಕಾರ ಅಮೆರಿಕಾ ಹಾಗೂ ಎನ್‌ಎಫ್‌ಟಿಎ ಯೋಜನೆಯ ಜತೆ ತಿಕ್ಕಾಟಕ್ಕೆ ಕಾರಣವಾದ ಆರ್ಥಿಕ ನೀತಿಯನ್ನು ಈಗಲೂ ಮುಂದುವರೆಸುತ್ತದೆ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಬಲಪಂಥೀಯರು ಮತ್ತು ಎಡಪಂಥೀಯರ ನಡುವಿನ ವ್ಯತ್ಯಾಸ

ಸಾಮಾಜಿಕ ನೀತಿಗಳ ವಿಷಯದಲ್ಲಿ ಎಡಪಕ್ಷಗಳು ಬಲಪಂಥೀಯರಿಗಿಂತ ಭಿನ್ನ ಎನಿಸಿಕೊಳ್ಳುತ್ತಾರೆ.

ಮೊದಲನೆಯದಾಗಿ ಪ್ರಸಕ್ತ ಸಂದರ್ಭದಲ್ಲಿ ಖಾಸಗಿ ವಲಯವೇ ಆರ್ಥಿಕವಾಗಿ ದೇಶವನ್ನು ಮುನ್ನಡೆಸುವ ಸಾಧನಗಳಾದರೂ, ಸರ್ಕಾರ ಸಹಾ ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಂಪನ್ಮೂಲಗಳ ನಿಯಂತ್ರಣ, ಹಾಗೂ ವ್ಯವಹಾರ ಕೌಶಲ್ಯದ ಉಪಯೋಗ ಪಡೆಯುವ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ರೂಪಿಸುವಲ್ಲಿ ಸರ್ಕಾರ ಮಹತ್ತರ ಪಾತ್ರ ವಹಿಸುತ್ತದೆ. ಲ್ಯಾಟಿನ್ ಅಮೆರಿಕಾದಂತಹ ಖಂಡದಲ್ಲಿ ತುರ್ತಾಗಿ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿರುವುದು ಒಂದು ಉತ್ತಮ ನಿದರ್ಶನ.

ಮುಕ್ತ ಮಾರುಕಟ್ಟೆ ತನ್ನೊಡನೆ ಹೈವೇಗಳನ್ನು, ಸೇತುವೆಗಳನ್ನು, ಟನೆಲ್‌ಗಳನ್ನು, ವಿಮಾನ ನಿಲ್ದಾಣಗಳನ್ನು ಹೊತ್ತು ತರುತ್ತದೆ ಎಂಬ ದೃಷ್ಟಿಕೋನ, ಸಾರ್ವಜನಿಕ ವಲಯ ದೇಶದ ಅಭಿವೃದ್ಧಿಗೆ ಅವಶ್ಯಕವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತದೆ ಎಂಬ ಆಶಾವಾದದಷ್ಟೇ ಟೊಳ್ಳು. ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವವೇ ಇದೆಲ್ಲದಕ್ಕೂ ತಕ್ಕ ಉತ್ತರ. ಭಾರತ ಕೂಡ ಇದೇ ನೀತಿಯನ್ನೇ ಅನುಸರಿಸುತ್ತಿರುವುದು. ಇತ್ತೀಚೆಗೆ ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳ ಅಭಿವೃದ್ಧಿ ಯತ್ನಕ್ಕೆ ಸಂಬಂಧಿಸಿದ ನ್ಯಾಯಾಂಗ ನಿರ್ಣಯವನ್ನು ಇಲ್ಲಿ ಉಲ್ಲೇಖಿಸಬಹುದು. ಚಿಲಿ ದೇಶಮೂಲಭೂತ ಸೌಕರ್ಯಕ್ಕಾಗಿ ೧೯೯೫ ರಿಂದ ೨೦೦೩ರವರೆಗೆ ಆರು ಬಿಲಿಯನ್ ಡಾಲರ್‌ಗಳಷ್ಟು ಖಾಸಗಿ ಬಂಡವಾಳವನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ದೇಶದ ಹೈವೇಗಳು ಮತ್ತು ವಿಮಾನ ನಿಲ್ದಾಣಗಳು ಈ ಪ್ರದೇಶದ ಅತ್ಯುತ್ತಮ ಹೈವೇಗಳು ಹಾಗೂ ವಿಮಾನ ನಿಲ್ದಾಣಗಳ ಸಾಲಿನಲ್ಲಿ ನಿಲ್ಲುತ್ತದೆ.

ಸಾಮಾಜಿಕ ಅಸಮಾನತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ 'ಅಭಿವೃದ್ಧಿಯ ಜಿನುಗುವಿಕೆ' ಬಲಪಂಥೀಯರ ಪ್ರಮುಖ ಧೋರಣೆಯಾಗಿದೆ. ಆರ್ಥಿಕ ಅಭಿವೃದ್ಧಿ ಸಹಜವಾಗಿ ಶೋಷಿತರನ್ನು ಮೇಲೆತ್ತುವಲ್ಲಿ ಸಹಕರಿಸುತ್ತದೆ ಎಂಬ ಸಿದ್ಧಾಂತ ಇದು.ವ ಆರ್ಥಿಕ ವೃದ್ಧಿಯಿಲ್ಲದೆ ಸಂಪನ್ಮೂಲಗಳ ಸಮಾನ ಹಂಚಿಕೆ ಸಾಧ್ಯವಿಲ್ಲ ಎನ್ನುವುದು ನಿಜ. ಆದರೆ ಸೂಕ್ತವಾದ ಸಾಮಾಜಿಕ ನೀತಿಗಳನ್ನು ಅಳವಡಿಸದೆ ಹೋದರೆ ಬಡತನ ಹಾಗೂ ಅಸಮಾನತೆಯನ್ನು ನಾಶಪಡಿಸಲಾಗುವುದಿಲ್ಲ ಎನ್ನುವುದೂ ಕೂಡ ಅಷ್ಟೇ ಸತ್ಯ. ಈ ವಾದದ ಪುಷ್ಟೀಕರಣಕ್ಕೆ ಸಾಕಷ್ಟು ಆಧಾರಗಳಿವೆ. ಜವಾಬ್ದಾರಿಯುತ ಎಡಪಂಥೀಯ ಸರ್ಕಾರ ಅನುಷ್ಠಾನಗೊಳಿಸಿದ ಹೊಸ ನೀತಿಗಳಿಂದಾಗಿ ಚಿಲಿ ದೇಶದಲ್ಲಿ ೧೯೯೦ರಲ್ಲಿ ಶೇ ೪೦ರಷ್ಟಿದ್ದ ಬಡತನ ಒಂದೇ ದಶಕದಲ್ಲಿ ಅರ್ಧಕ್ಕಿಂತಲೂ ಕಡಿಮೆ ಅಂದರೆ ಶೇ ೧೮ಕ್ಕೆ ಇಳಿದಿದೆ.

ಹೌದು, ಎಡಪಂಥೀಯರು ಲ್ಯಾಟಿನ್ ಅಮೆರಿಕಾದಲ್ಲಿ ಸಾಕಷ್ಟು ಚುನಾವಣೆಗಳನ್ನು ಗೆದ್ದಿದ್ದಾರೆ. ಲ್ಯಾಟಿನ್ ಅಮೆರಿಕಾದ ಬಹುತೇಕ ರಾಷ್ಟ್ರಗಳನ್ನು ಈಗ ಎಡಪಂಥೀಯ ಸರ್ಕಾರಗಳು ಆಳುತ್ತಿವೆ. ಈ ರಾಷ್ಟ್ರಗಳಲ್ಲಿ ಈಗ ನಿಜವಾದ ಅರ್ಥದಲ್ಲಿ ಜನರನ್ನು ಪ್ರತಿನಿಧಿಸುವ ನಾಯಕರಿದ್ದಾರೆ. ಈ ನಾಯಕರು ಈ ಹಿಂದೆ ವಿಫಲವಾಗಿರುವ, ನಿಷ್ಕ್ರಿಯವಾದ ಹಳೆಯ ಆರ್ಥಿಕ ನೀತಿಗಳಿಗೆ ಜೋತು ಬೀಳುವ ಬದಲು, ಲ್ಯಾಟಿನ್ ಅಮೆರಿಕಾ ಖಂಡವನ್ನು ದಿವಾಳಿಯೆಬ್ಬಿಸಿದ ಏಕರೂಪಿ ಅಭಿವೃದ್ಧಿ ನೀತಿಯನ್ನು ಅನುಸರಿಸುವ ಬದಲು, ತಮ್ಮ ದೇಶಗಳ ಬೇಡಿಕೆಗಳಿಗೆ ಅನುಗುಣವಾಗಿ ಹೊಸ ದಿಶೆಯಲ್ಲಿ ಹೊಸ ನೀತಿಗಳನ್ನು ಅನುಷ್ಠಾನಗೊಳಿಸುವಲ್ಲಿ ಆಸಕ್ತಿ ವಹಿಸುತ್ತಿದ್ದಾರೆ.

(ಸೌಜನ್ಯ: ದಿ ಹಿಂದೂ) □

(ಲೇಖಕರು ಭಾರತದಲ್ಲಿ ಚಿಲಿದೇಶದ ರಾಯಭಾರಿಗಳು)

ಬಾಬಾ ಸಾಹೇಬ್ ಅಂಬೇಡ್ಕರ್ - ಶೋಷಿತ ವರ್ಗಗಳ ಶಕ್ತಿ ಮತ್ತು ಸ್ಫೂರ್ತಿ

1891 - 1956

"ಯಾವುದೇ ರಕ್ತಪಾತವಿಲ್ಲದೆ ಪ್ರಜೆಗಳ ಸಾಮಾಜಿಕ ಮತ್ತು ಆರ್ಥಿಕ ಜೀವನ ಮಟ್ಟದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸರ್ಕಾರದ ಸ್ವರೂಪ ಮತ್ತು ವಿಧಾನವೇ ಪ್ರಜಾಪ್ರಭುತ್ವ."

- ಡಾ. ಬಿ.ಆರ್. ಅಂಬೇಡ್ಕರ್

ನ್ಯಾಯಕ್ಕಾಗಿ ಸದಾ ಹೋರಾಡಿ, ಶೋಷಣೆಯ ಮೂಲೋತ್ಪಾಟನೆಗೆ ಪ್ರೇರಕರಾಗಿ, ದುರ್ಬಲ ವರ್ಗದವರ ಸ್ವಾಭಿಮಾನವನ್ನು ಜಾಗೃತಗೊಳಿಸಿ, ಸಮಾಜದಲ್ಲಿ ಅವರಿಗೆ ಗೌರವ ಸ್ಥಾನ ತಂದುಕೊಟ್ಟ ಮಹಾನ್ ಚೇತನ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್.

115ನೇ ಜಯಂತ್ಯುತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಗೌರವ ನಮನಗಳು

ಶ್ರೀ ಎಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯ ಮಂತ್ರಿಗಳು



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ
ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು

- ಪರಿಶಿಷ್ಟ ಜಾತಿ / ಪಂಗಡಗಳ ಮಹಿಳೆಯರು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಅನುವಾಗುವಂತೆ 2006-07ನೇ ಸಾಲಿನಲ್ಲಿ ಎರಡು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.
- ಸಮಾಜದ ದುರ್ಬಲ ವರ್ಗಗಳ ಜೀವನಮಟ್ಟ ಸುಧಾರಿಸಲು ಈ ವಲಯದ ಯೋಜನಾ ಅನುದಾನ ರೂ.439 ಕೋಟಿಗಳಿಂದ ರೂ.640.7 ಕೋಟಿಗಳಿಗೆ ಏರಿಕೆ.
- ಗಂಗಾ ಕಲ್ಯಾಣ ಯೋಜನೆಯ ಪ್ರತಿ ಘಟಕದ ವೆಚ್ಚವನ್ನು 75,000 ರೂ.ಗಳಿಂದ ಗರಿಷ್ಠ ಒಂದು ಲಕ್ಷ ರೂ.ಗಳಿಗೆ ಹೆಚ್ಚಳ.
- 2006-07ನೇ ಸಾಲಿನಲ್ಲಿ 20 ಪರಿಶಿಷ್ಟ ಜಾತಿ ಮತ್ತು 5 ಪರಿಶಿಷ್ಟ ಪಂಗಡಗಳ ವಸತಿ ಶಾಲೆಗಳ ಸ್ಥಾಪನೆಗೆ ಕ್ರಮ. ಇದಲ್ಲದೆ ವಸತಿ ಶಾಲೆಗಳ ನಿರ್ಮಾಣಕ್ಕೆ ಪ್ರಸ್ತುತ ಹಂಚಿಕೆಯನ್ನು 2005-06ನೇ ಸಾಲಿನ ರೂ.10 ಕೋಟಿಗಳಿಂದ 2006-07ನೇ ಸಾಲಿಗೆ ರೂ.31.5 ಕೋಟಿಗಳಿಗೆ ಹೆಚ್ಚಿಸಲು ನಿರ್ಧಾರ.
- 2006-07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 50 ಹೊಸ ವಸತಿ ನಿಲಯಗಳನ್ನು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ 10 ನೂತನ ವಿದ್ಯಾರ್ಥಿ ನಿಲಯಗಳನ್ನು ತೆರೆಯಲು ಕ್ರಮ.
- ಪರಿಶಿಷ್ಟ ಪಂಗಡಕ್ಕೆ ವಿಶೇಷ ಆದ್ಯತೆ ನೀಡುವ ದೃಷ್ಟಿಯಿಂದ ಅವರ ಅಭ್ಯುದಯಕ್ಕಾಗಿ ಪ್ರತ್ಯೇಕವಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು 2006-07ರಲ್ಲಿ ಸ್ಥಾಪನೆ.
- ಪರಿಶಿಷ್ಟ ಜಾತಿ / ಪಂಗಡಗಳ ಮತ್ತು ಹಿಂದುಳಿದ ವರ್ಗಗಳೇ ಹೆಚ್ಚಿರುವ ಗ್ರಾಮಾಂತರ ಪ್ರದೇಶದ ಎರಡು ಕುಗ್ರಾಮಗಳನ್ನು ಆಯ್ಕೆ ಮಾಡಿ ಈ ಗ್ರಾಮಗಳ ಪೈಕಿ ಒಂದು ಗ್ರಾಮಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಗ್ರಾಮ ಮತ್ತು ಇನ್ನೊಂದು ಗ್ರಾಮಕ್ಕೆ ಡಾ. ಬಾಬು ಜಗಜೀವನರಾವ್ ಎಂದು ಹೆಸರಿಸಿ ಸರ್ವತೋಮುಖ ಅಭಿವೃದ್ಧಿಗೆ ಕ್ರಮ.

ಕರ್ನಾಟಕ ವಾರ್ತೆ

ಸಮಾನತೆ ಮತ್ತು ಸಾಮಾಜಿಕ ನ್ಯಾಯ – ಸರ್ವಾಂಗೀಣ ಅಭಿವೃದ್ಧಿಯ ಧ್ಯೇಯ

ಕಾಳಜಿ

ನೀರಿನ ಖಾಸಗೀಕರಣ: ಅಗ್ನಿ ಮುಖದಲ್ಲಿ ಕರ್ನಾಟಕ

ಜಾಗತೀಕರಣದ ನಿಜವಾದ ಬೇಟೆ ಈಗ ಕರ್ನಾಟಕಲ್ಲಿ ಆರಂಭವಾಗಿದೆ. ಜನರ ಜೀವನಾಧಾರವಾದ ನೀರಿನ ವಿತರಣೆಯನ್ನು ಸರ್ಕಾರ ಖಾಸಗಿಯವರಿಗೆ ವಹಿಸುವ ತರಾತುರಿಯಲ್ಲಿದೆ. ಏನೂ ಅರಿಯದ ಜನ, ರಾಜಕಾರಣಿಗಳ ಲಾಭಕೋರತನ ತಿಳಿಯುವ ಮುನ್ನವೇ ಬೀದಿಪಾಲಾಗುವ ಸಂಭವವೇ ಈಗ ಹೆಚ್ಚಾಗಿದೆ. ಬೆಂಗಳೂರಿನ ಕುಡಿಯುವ ನೀರು ಸರಬರಾಜು ಇನ್ನೇನು ಪರರ ಪಾಲಾಗಲಿದೆ. ಬದುಕಿನ ಕನಿಷ್ಠ ಅಗತ್ಯವಾದ ನೀರನ್ನೂ ಪೂರೈಸಲಾರದ ಸರ್ಕಾರ ಜನ ಹಿತವನ್ನು ಕಾಯುವುದೇ? ನೀರಿನ ಖಾಸಗೀಕರಣ ಕುರಿತಾದ ಲೇಖನಮಾಲೆಯ ಮೊದಲ ಕಂತು ಇದು.

ಟಿ.ಎಸ್. ವಿವೇಕಾನಂದ

ಕರ್ನಾಟಕ ಇಂದು ನೀರಿನ ಖಾಸಗೀಕರಣದ ಹೊಸ್ತಿಲಿನಲ್ಲಿ ನಿಂತಿದೆ. ಹೀಗೆನ್ನುವುದಕ್ಕಿಂತ ಒಂದು ಹೆಜ್ಜೆಯನ್ನು ಈಗಾಗಲೇ ಒಳಗಿಟ್ಟಿದೆ ಎನ್ನುವುದೇ ಸರಿ. ೨೦೦೪ ರ ಆರಂಭದಲ್ಲಿ ಈ ಕುಡಿಯುವ ನೀರಿನ ಖಾಸಗೀಕರಣ ಕುರಿತು ಸರಣಿ ಲೇಖನಗಳು ಪ್ರಕಟವಾದಾಗ ಅದರ ಸಾಹಿತ್ಯಕ ಗುಣವನ್ನು ಮೆಚ್ಚಿಕೊಂಡವರೇ ಹೆಚ್ಚು, ಓದಿ ಸುಮ್ಮನಾದವರು ಇನ್ನೂ ಹೆಚ್ಚು, ಅಯ್ಯೋ... ಇದೊಂದು ಪರಿಸರವಾದಿಗಳ ಉತ್ಪ್ರೇಕ್ಷೆ ಎಂದು ನಿರ್ಲಕ್ಷಿಸಿದವರು ಇನ್ನೂ ಹೆಚ್ಚು. ಇದೆಲ್ಲಾ ನಮ್ಮಲ್ಲಿ ಸಾಧ್ಯವೇ ಇಲ್ಲ ಎಂಬ ಖಚಿತ ನಂಬಿಕೆಯಿಂದ ಸಮ್ಮನಾದವರು ಇವರೆಲ್ಲರಿಗಿಂತ ಹೆಚ್ಚು. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ದಿಗ್ಭ್ರಾಂತಿಯಿಂದ ಇದು ಆಕಸ್ಮಿಕ ನಮ್ಮಲ್ಲಿ ಸಾಧ್ಯವಾದರೆ, ಮಾಡುವುದೇನು? ಎಂದು ಕೇಳಿದ್ದರು.

ಆದರೆ ಅಷ್ಟು ಹೊತ್ತಿಗಾಗಲೇ ಇದೇ ರಾಜ್ಯದ ಅನೇಕ ಸರ್ಕಾರಿ ಸಂಸ್ಥೆಗಳು ಈ ನೀರಿನ ಖಾಸಗೀಕರಣವನ್ನು ಮಾಡಿಯೇ ತೀರುವ ಛಲದೊಂದಿಗೆ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದವು. ಪ್ರಾಯೋಗಿಕವಾಗಿ ಇವರು "ಗ್ರೇಟರ್ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೀವರೇಜ್ ಬೋರ್ಡ್–(GBWASP)" ಎಂಬ ಪರಿಕಲ್ಪನೆಯನ್ನು ಹುಟ್ಟಿಹಾಕಿದ್ದವು. ಬೆಂಗಳೂರು ಅಗಾಧವಾಗಿ ಬೆಳೆಯುತ್ತಿದ್ದು, ಇದರ ನೀರಿನ ಬೇಡಿಕೆಯೂ ಇದರೊಂದಿಗೆ ಏರುತ್ತಿರುವ ಕಾರಣದಿಂದ ಅದಕ್ಕೆ ಸೂಕ್ತವಾದ ನೀರಿನ ಹಾಗೂ ಒಳ ಚರಂಡಿಯ ವ್ಯವಸ್ಥೆಯನ್ನು ಮಾಡಬೇಕೆಂಬ ಹಂಬಲ ಇವರದಾಗಿತ್ತು. ಇದರಲ್ಲಿ ತಪ್ಪೇನೂ ಇರಲಿಲ್ಲ. ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಕ್ಕನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ವಿಸ್ತರಿಸುವುದು ಒಂದು ಸರ್ಕಾರದ ಕರ್ತವ್ಯ. ಇದಕ್ಕಾಗಿಯೇ ಜನರು ಸರ್ಕಾರವನ್ನು ಆರಿಸಿರುತ್ತಾರೆ, ಶುಲ್ಕ ಹಾಗೂ ತೆರಿಗೆಯನ್ನೂ ಕೊಡುತ್ತಾರೆ.

ಆದರೆ ಸರ್ಕಾರ ಇದರ ಜವಾಬ್ದಾರಿಯನ್ನು ನೇರವಾಗಿ ಹೊರಲು ತಯಾರಿರಲಿಲ್ಲ. ಇದಕ್ಕಾಗಿ ರಚಿಸಿ ಅದರ ಅನುಷ್ಠಾನದ ಹೊಣೆಯನ್ನು ಈಗಿರುವ ಜಲಮಂಡಲಿಯ ಜೊತೆಗೆ 'ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್' ಹಾಗೂ 'ಜನಾಗ್ರಹ' ಸಂಸ್ಥೆಗೆ ವಹಿಸಿತು. ವಹಿಸಿತು ಎನ್ನುವುದಕ್ಕಿಂತ ಅವರೇ ಈ ಎಲ್ಲವನ್ನೂ ಮಾಡಿ ಸರ್ಕಾರದ ಮೂಲಕ ನಾಮಕಾವಸ್ತೆ ಅನುಮತಿ ಪಡೆದರೆಂಬವುದೇ ಸರಿ.

ಏಕೆಂದರೆ ಇಂಥಾ ಒಟ್ಟೂ ಪರಿಕಲ್ಪನೆಯನ್ನು ಚಾಲ್ತಿಗೆ ತಂದ ಮೊದಲ ಸಂಸ್ಥೆಯೆಂದರೆ 'ಜನಾಗ್ರಹ' ಎಂಬ ಸಂಸ್ಥೆ. ಇದು ನಗರದ ಅತ್ಯಂತ ಶ್ರೀಮಂತರಿಂದಲೇ ಸ್ಥಾಪಿಸಲ್ಪಟ್ಟ, ಅವರಿಂದಲೇ, ಅವರಿಗಾಗಿಯೇ ನಡೆಸಲ್ಪಡುತ್ತಿರುವ, ಐಟಿ ಬಿಟಿ ದೊರೆಗಳೇ ಆದರ ಆಡಳಿತ ಮಂಡಲಿಯಲ್ಲಿರುವ ಹಾಗೂ ಇಡೀ ಬೆಂಗಳೂರೇ ಅವರ ಖಾಸಗೀ ಸ್ವತ್ತು, ಈ ಸ್ವತ್ತನ್ನು ಅನೇಕ ಪಾಪಿಪರದೇಶಿಗಳು ತಿಂದು ಮುಕ್ಕುತ್ತಿದ್ದಾರೆ. ತಮ್ಮ ಬೆಂಝ್ ಕಾರುಗಳ ವೇಗದ ಓಡಾಟಕ್ಕೆ ಅಡ್ಡಿಯಾಗುತ್ತಿ

ರೆ. ಸಿಂಗಪೂರದಂಥೆ ಥಳಥಳ ಹೊಳೆಯಬೇಕಿದ್ದ ಈ
ರ ಊರನ್ನು ಕಾರ್ಪೊರೇಷನ್ ತೊಟ್ಟಿ ಮಾಡಿಟ್ಟಿದ್ದಾರೆ
ದೇ ಭಾವಿಸಿರುವ, ಹಾಗೆಯೇ ವರ್ತಿಸುತ್ತಿರುವ,
ದು ಜನವಿರೋಧಿ ಗುಂಪು.

ಇವರು ಈ ತಮ್ಮ ಕನಸುಗಳ ಸಾಕಾರಕ್ಕಾಗಿ
ಡಿಸುವುದು ನೇರವಾಗಿ ಖಾಸಗೀಕರಣವನ್ನು.
ಸಗೀಕರಣ ಎಂದರೆ ನಮ್ಮೂರಿನವನೊಬ್ಬ ಅದರ
ಾಬ್ದಾರಿ ತೆಗೆದುಕೊಂಡು, ನ್ಯಾಯವಾದ ದರಕ್ಕೆ ನೀರು
ಬರಾಜು ಮಾಡಿ, ಬಂದ ಆದಾಯದಲ್ಲಿ ಸರ್ಕಾರಕ್ಕೆ
ದು ಪಾಲು ಹಾಗೂ ಸೂಕ್ತ ತೆರಿಗೆ ಕಟ್ಟಿ ಉಳಿದ
ವನ್ನು ಈ ನಾಡಿನಲ್ಲೇ ಮತ್ತೆ ಚಲಾವಣೆಗೆ ಬಿಡುವ
ಸಗೀಕರಣವಲ್ಲ. ಇವರ ಖಾಸಗೀಕರಣದ ಪರಿಕಲ್ಪ
ಟೀ 'ಹುಟ್ಟಾ ಮೆಗಾ'. ಎಲ್ಲಾ ಬಿಲಿಯನ್ ಡಾಲರ್‌ಗಳ
ದಲ್ಲೇ ಆಗಬೇಕು. ಆ ಹಣವೂ ವಿದೇಶೀ ಬ್ಯಾಂಕುಗ
ದಲೇ ಬರಬೇಕು. ಇದರ ಕಾರಣ ಇಷ್ಟೇ ಈ ಯೋಜ
ುನ್ನು ಜನಾಗ್ರಹದ ಮೂಲಕ ಚಾಲನೆಗೆ ತರಲು
ರಟ ರಮೇಶ್ ರಾಮನಾಥನ್ ಎಂಬ ಮನುಷ್ಯ
ಾಲತಃ ಒಬ್ಬ ವಿಶ್ವಬ್ಯಾಂಕಿನ ದಳ್ಳಾಳಿ. ಈತ ಏಕಾಂಗಿ
ೀನಲ್ಲ, ಈತನೊಂದಿಗೆ ಇಡೀ ಸರ್ಕಾರದ ಸಂಬಂಧಿ
ಬಹುಪಾಲು ಇಲಾಖೆಗಳು ನೇರವಾಗಿ ಹೆಗಲು
ಟ್ಟಿವೆ. ಇವುಗಳಲ್ಲಿ ಕೆ.ಯು.ಐ.ಡಿ.ಎಫ್.ಸಿ. ಯೋಜ
ು ಅಭಿವೃದ್ಧಿ ಮತ್ತು ಆರ್ಥಿಕ ಅಗತ್ಯಗಳ ಮೇಲುಸ್ತು
ವಹಿಸಿದೆ, ಬಿ.ಡಬ್ಲಿಯು.ಎಸ್.ಎಸ್.ಬಿ. ಯೋಜ
ು ಅನುಷ್ಠಾನದ ಜವಾಬ್ದಾರಿ ವಹಿಸಿದೆ, ಡಿ.ಎಂ.ಎ.
ಸಭೆಗಳ ಕಾನೂನುಗಳನ್ನು ಇದಕ್ಕೆ ಹದಗೊಳಿಸಲು
ರಟಿದೆ. ಇವರೆಲ್ಲರ ಆಸೆ ಆಕಾಂಕ್ಷೆಗಳಿಗೆ ಜನರನ್ನು
ಜ್ಜಗೊಳಸಲು ಜನಾಗ್ರಹ ಜನರ ಹಿತಾಸಕ್ತಿಯೇ ನಮ್ಮ
ಯವೆಂಬ ಮಂತ್ರ ಹಿಡಿದು ಈ ಪ್ರದೇಶಗಳ ಬಡಜನ
ನ್ನು ನೀರಿನ ಮಾರಾಟಕ್ಕೆ ಮಾನಸಿಕವಾಗಿ ಸಿದ್ಧಗೊಳ
ವ ಕಾಯಕದಲ್ಲಿ ತೊಡಗಿಕೊಂಡಿದೆ. ಈ ಕೆಲಸವನ್ನು
ಡಲು ನೇರವಾಗಿ ಯಾವ ಹಣವನ್ನು ಪಡೆಯಲಿಲ್ಲ.
ರೆ ಯಾವ್ಯಾವ ಕೆಲಸ ಯಾರಿಗೆ ಕೊಡಬೇಕು, ಗುತ್ತಿಗೆ
ನ್ನು ಯಾರು ಹಿಡಿಯಬೇಕು ಎಂಬ ವಿಷಯಗಳಲ್ಲಿ
ೀ ಪ್ರಮುಖಪಾತ್ರ ವಹಿಸತಕ್ಕದ್ದೆಂದು ಒಪ್ಪಂದ ಮಾಡಿ
ಳ್ಳಲಾಗಿತ್ತು.

ಏನೀ GBWASP?

ಬಹಳ ಸರಳ. ಬೆಂಗಳೂರು ಬೆಳೆಯುತ್ತಿದೆ. ಇದರ
ತ್ತಮುತ್ತ ಒಟ್ಟು ಎಂಟು ನಗರಸಭೆಗಳಿವೆ. ಇದರ ಒಟ್ಟೂ
ರ್ಣ ೨೪೦ ಚ.ಕಿ.ಮೀ., ಇಲ್ಲಿ ೧೩ ಲಕ್ಷ ಜನ ವಾಸಿ
ತ್ತಿದ್ದಾರೆ. ಇನ್ನು ಮುಂದೆ ನಗರ ವಿಸ್ತರಿಸುವುದಿದ್ದರೆ ಈ
ರ ಸಭೆಗಳ ವ್ಯಾಪ್ತಿಯಲ್ಲಿ ಮಾತ್ರ ಸಾಧ್ಯ. ಅಷ್ಟೇ ಏಕೆ
ಿನ ಬಹುಪಾಲು ಐಟಿ ಬಿಟಿ ಕಂಪನಿಗಳಿರುವುದೂ ಈ
ಪ್ತಿಯಲ್ಲಿಯೇ. ೨೦೧೧ರ ಹೊತ್ತಿಗೆ ಇಲ್ಲಿನ ಜನಸಂಖ್ಯೆ
ಲಕ್ಷ ದಾಟುತ್ತದೆ, ಹಾಗೇ ೨೦೨೧ರ ಹೊತ್ತಿಗೆ ೩೦
ಚಿಲ್ಲರೆ ಆಗುತ್ತದೆ. ಆದರೆ ಅಲ್ಲಿ ಅಂತರ್ಜಲದ
ರತು ಬೇರೆ ನೀರಿನ ಮೂಲಗಳಿಲ್ಲ. ಹಾಗಾಗಿ ಈ
ೇಶಗಳಿಗೆ ನೀರೊದಗಿಸಲು ಈ ಮಹಾ ಯೋಜನೆ
ನ್ನು ರೂಪಿಸಲಾಗಿದೆ. ಇದರ ಅಂದಾಜು ವೆಚ್ಚ ೬೫೮.
ಕೋಟಿ. ಇದರಲ್ಲಿ ಎಂಟು ನಗರಾಡಳಿತ ವ್ಯಾಪ್ತಿಯ
ಗರೀಕರಿಂದ ೧೧೯.೪೪ ಕೋಟಿಯನ್ನೂ, ಮೆಗಾಸಿಟಿ
ದಿಂದ ರೂ. ೪೬.೮೨ ಕೋಟಿಯನ್ನೂ, ರಾಜ್ಯ
ರ್ಕಾರದ ಅನುದಾನವಾಗಿ ೭೪.೮೨ ಕೋಟಿಯನ್ನೂ

> **ಖಾಸಗೀಕರಣ ಎಂದರೆ ನಮ್ಮೂರಿನವನೊಬ್ಬ ಅದರ ಜವಾಬ್ದಾರಿ ತೆಗೆದುಕೊಂಡು, ನ್ಯಾಯವಾದ ದರಕ್ಕೆ ನೀರು ಸರಬರಾಜು ಮಾಡಿ, ಬಂದ ಆದಾಯದಲ್ಲಿ ಸರ್ಕಾರಕ್ಕೆ ಒಂದು ಪಾಲು ಹಾಗೂ ಸೂಕ್ತ ತೆರಿಗೆ ಕಟ್ಟಿ ಉಳಿದ ಹಣವನ್ನು ಈ ನಾಡಿನಲ್ಲೇ ಮತ್ತೆ ಚಲಾವಣೆಗೆ ಬಿಡುವ ಖಾಸಗೀಕರಣವಲ್ಲ.**

ಇತರೆ ಮೂಲಗಳಿಂದ ಸಾಲವಾಗಿ–ರೂ. ೧೦೦ ಕೋಟಿಯನ್ನೂ ಒದಗಿಸಿಕೊಡುವುದು ಇದರ ಉದ್ದೇಶ. ಆದರೆ ಇಷ್ಟೆಲ್ಲಾ ಆಗಿ ಇದನ್ನು ನಿರ್ವಹಿಸುವುದು, ಸರಬರಾಜು ಮಾಡುವುದು, ಹಣ ಸಂಗ್ರಹಿಸುವುದು ಮಾತ್ರ ಖಾಸಗಿ ಕಂಪನಿ. ಈ ಹಣವನ್ನು ಹೇಗೆ ವಸೂಲಿ ಮಾಡಬಹುದೆಂಬುದಕ್ಕೆ ಅವರೇ ಕೆಲವು ಮಾದರಿಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವುಗಳನ್ನು ನೋಡಿದರೆ ಜನರು ಇಡೀ ತಿಂಗಳು ನೀರಿನ ಬದಲು ಬೀರನ್ನೋ ಇಲ್ಲಾ ಹಾಲನ್ನೋ ಕುಡಿಯಬಹುದು. ಇಷ್ಟು ಯೋಜನೆಯ ಸಂಕ್ಷಿಪ್ತ ರೂಪ.

ಒಟ್ಟಾರೆ ಏನು ಮಾಡಲು ಹೊರಟಿದ್ದಾರೆ?

ಇದು ತುಂಬಾ ಸರಳ. ಇಷ್ಟು ಬಂಡವಾಳ ಹೂಡಿ, ಎಂಟೂ ನಗರ ಸಭೆಗಳಿಗೆ ನೀರು ಸರಬರಾಜು ಮಾಡುವ ಗುತ್ತಿಗೆಯನ್ನು ಥೇಮ್ಸ್ ವಾಟರ್ ಎಂಬ ಕಂಪನಿಗೆ ಕೊಡುವುದು. ಈ ಕಂಪನಿಯು ತಾನು ಅಧಿಕಾರ ಹಿಡಿತಕ್ಕೆ ಬಂದ ನಂತರದಲ್ಲಿ ಪ್ರತಿ ಲೀ. ನೀರಿನ ಬೆಲೆಯನ್ನು ನಿರ್ಧರಿಸಿ, ವಿಧಿಸುತ್ತದೆ. ಹಾಗೂ ಕನಿಷ್ಟ ಇಂತಿಷ್ಟೇ ಕಿಲೋ ಲೀಟರ್ ಕೊಳ್ಳಲೇಬೇಕೆಂದು ಶರತ್ತು ವಿಧಿಸುತ್ತದೆ. ಅದನ್ನು ನಾವು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಸರ್ಕಾರದ ಗತಿ ಛತ್ತೀಸ್‌ಘಡ ಸರ್ಕಾರಕ್ಕಿಂತ ಹೀನಾಯವಾಗುತ್ತದೆ. ಏಕೆಂದರೆ ಈ ಎಲ್ಲಾ ಪ್ರದೇಶಗಳಿಗೆ ನೀರು ಸರಬರಾಜು ಮಾಡುತ್ತಿರುವ ಕಾವೇರಿ ನದಿಯ ಮೇಲಿನ ಅಧಿಕಾರ ಅವರದ್ದಾಗಿರುತ್ತದೆ. ಮಾರಾಟದ ಒಪ್ಪಂದದಲ್ಲಿ ಈ ನದೀ ಮಾರಾಟವೂ ಸೇರಿರುತ್ತದೆ. ನದಿಗಳ ಮೇಲೆ ಒಡೆತನ ಸಿಗದೆ ಖಾಸಗಿ ಕಂಪನಿಗಳು ಈ ವ್ಯವಹಾರದ ಮೇಲೆ ಬಂಡವಾಳ ಹೂಡುವುದಿಲ್ಲ. ಅವರಿಗೆ ಗೊತ್ತಿದೆ ಎಲ್ಲಿಗೆ ಒದ್ದರೆ ಯಾವ ಅಂಗ ನಿಷ್ಕ್ರಿಯವಾಗುತ್ತದೆಂದು.

ಇದು ೧೯೯೮ ರ ಮಾತು. ಇದು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ನೀರಿನ ಖಾಸಗೀಕರಣದ ಹೆಸರಿನಲ್ಲಿ ವಿದೇಶೀ ಕಂಪನಿಯೊಂದು ನಮ್ಮ ದೇಶದ ನದಿಯ ಮೇಲೆ ಒಡೆತನ ಪಡೆದಂಥ ಘಟನೆ. ಸ್ಥಳ: ಮಧ್ಯಪ್ರದೇಶ. ಅಲ್ಲಿನ ಸರ್ಕಾರ ಶೆಣ್ಯೈನಾಥ್ ನದಿಯ ಮೂಲಕ ಕೈಗಾರಿಕೆಗಳಿಗೆ ಅಗತ್ಯವಾದ ನೀರನ್ನು ಸರಬರಾಜು ಮಾಡುವ ಯೋಜನೆಯೊಂದನ್ನು ಒಂಭತ್ತು ಕೋಟಿ ರೂಪಾಯಿವೆಚ್ಚದಲ್ಲಿ ಮಾಡಲು ನಿರ್ಧರಿಸಿತು. ಇದರಲ್ಲಿ ಮಧ್ಯಪ್ರದೇಶದ ಔದ್ಯೋಗಿಕ ಕೇಂದ್ರ ವಿಕಾಸ ನಿಗಮ–(ಎಂ.ಪಿ.ಎ.ಕೆ.ವಿ.ಎನ್.) ರೇಡಿಯಸ್ ವಾಟರ್ ಲಿಮಿಟೆಡ್ ಎಂಬ ವಿದೇಶಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿತು. ಈ ಇಬ್ಬರೂ ಸೇರಿ ಬಿಲ್ಡ್, ಓನ್, ಆಪರೇಟ್ ಅಂಡ್ ಟ್ರಾನ್ಸ್‌ಫರ್ ಒಪ್ಪಂದದ ಮೇರೆಗೆ ಕಾರ್ಯಪ್ರವೃತ್ತವಾದವು. ಇವು ದುರ್ಗ್ ಜಿಲ್ಲೆಯ ಬೋರ್ರ್ಯಾ ಕೈಗಾರಿಕಾ ವಲಯಕ್ಕೆ ನಿತ್ಯ ಮೂವತ್ತು ಮಿಲಿಯಾನು ಲೀಯರ್ ನೀರನ್ನು ಸರಬರಾಜು ಮಾಡುವ ಗುರಿ ಹೊಂದಿದ್ದವು. ಇದಕ್ಕಾಗಿ ಶೆಣ್ಯೈನಾಥ್ ನದಿಗೆ ಅಣೆಕಟ್ಟೆಯನ್ನು ಜನವರಿ ೨೦೦೧ರಲ್ಲಿ ಕಟ್ಟಿ ಮುಗಿಸಲಾಯಿತು.

ಇದಾಗುವವರೆಗೂ ಇಡೀ ಯೋಜನೆಯ ರೂಪರೇಷೆಗಳ ಸುಳಿವು ಜನಕ್ಕಿರಲಿಲ್ಲ. ಅಣೆಕಟ್ಟೆ ಮುಗಿದು ನೀರು ಸರಬರಾಜು ಆರಂಭವಾಗುವುದಕ್ಕೆ ಮುಂಚಿತವಾಗಿಯೇ ರೇಡಿಯಸ್ ಕಂಪನಿ ಇಡೀ ೨೩.೬ ಕಿ.ಮೀ. ಉದ್ದ ನದಿಯ ಮೇಲೆ ತನ್ನ ಒಡೆತನವನ್ನು ಸಾಧಿಸಿತು. ಸ್ಥಳೀಯರನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿತು. ಅವರ ಮಾತು ಮೀರಿದವರಿಗೆ ಕಿರುಕುಳ ನೀಡಿತು. ಇದಕ್ಕೆ ಸ್ಥಳೀಯ ಕಾನೂನು ಪಾಲಕರೂ ನೆರವಾಗಹತ್ತಿದರು. ಜನ ತನ್ನ ಜೀವನದಿಯ ಮೂಲದಿಂದ ದೂರವಾಗಿ ಕಂಗಾಲಾದರು. ದಿನಬಳಕೆ, ದನಕರುಗಳ ಬಳಕೆಗೂ ನದಿಯ ಬಳಿಗೆ ಹೋಗುವುದು ಗಂಭೀರ ಅಪರಾಧವಾಗಿತ್ತು.

ಇದೆಲ್ಲಾ ಹೇಗೆ ಸಾಧ್ಯವೆಂದು ಸ್ಥಳೀಯ ಪತ್ರಿಕೆ ದೀನಬಂಧು ಸಂಪಾದಕರು ತನಿಖೆ ಮಾಡಲು ಹೊರಟಾಗ ಹೊರಬಿದ್ದ ಸತ್ಯಾಂಶಗಳು ಗಾಬರಿ ಹುಟ್ಟಿಸುವಂತಿದ್ದವು. ಇಷ್ಟು ಹೊತ್ತಿಗೆ ಮಧ್ಯ ಪ್ರದೇಶ ವಿಭಜನೆಗೊಂಡು ಛತ್ತೀಸ್‌ಘಡ ರಾಜ್ಯ ಪ್ರತ್ಯೇಕವಾಗಿತ್ತು. ಈ ಯೋಜನೆ ಇದರ ವಲಯಕ್ಕೆ ಬಂದಿತ್ತು. ಇಡೀ ಒಪ್ಪಂದ ೨೦೦೦ದಲ್ಲಿನ ರಾಜ್ಯ ವಿಭಜನೆಯೊಂದಿಗೇ ಛತ್ತಿಸ್‌ಘಡ ರಾಜ್ಯ ಇಂಡಸ್ಟ್ರಿಯಲ್ ಕಾರ್ಪೋರೇಷನ್– (ಸಿಎಸ್‌ಐಡಿಸಿ) ಹೆಸರಿಗೆ ವರ್ಗಾವಣೆಯಾಗಿತ್ತು. ೨೨ವರ್ಷಗಳ ಅವಧಿಗೆ ಶೆಣ್ಯೈನಾಥ್ ನದಿಯ ೨೩.೬ ಕಿ.ಮೀ ನದಿಯನ್ನು ಸಂಪೂರ್ಣವಾಗಿ ರೇಡಿಯಸ್ ವಾಟರ್ ಲಿಮಿಟೆಡ್ ವಶಕ್ಕೆ ನೀಡಲಾಗಿತ್ತು. ಇಡೀ ಬೋರ್ರ್ಯಾ ಕೈಗಾರಿಕಾ ಪ್ರದೇಶಕ್ಕೆ ನೀರಿನ ಸರಬರಾಜಿನ ಏಕಸ್ವಾಮ್ಯವನ್ನು ಅವರು ಪಡೆದುಕೊಂಡಿದ್ದರು. ಇದಕ್ಕೆ ಅಗತ್ಯವಾದ ಭೂಮಿ ಮತ್ತು ಇತರ ಸೌಲಭ್ಯಗಳನ್ನು ಸಿಎಸ್‌ಐಡಿಸಿ ಉಚಿತವಾಗಿ ನೀಡುವುದೆಂದು ಒಪ್ಪಂದದಲ್ಲಿ ತಿಳಿಸಲಾಗಿತ್ತು. ಹೀಗೆ ಇವರು ಸರಬರಾಜು ಮಾಡುವ ನೀರನ್ನು ಸಗಟಾಗಿ ಸಿಎಸ್‌ಐಡಿಸಿ ಖರೀದಿಸಿ ಅದನ್ನು ರೀಟೈಲಾಗಿ ಕೈಗಾರಿಕೆಗಳಿಗೆ ಮಾರುವ ಜವಾಬ್ದಾರಿಯನ್ನೂ ಸಹ ಸಿಎಸ್‌ಐಡಿಸಿ ಒಪ್ಪಿಕೊಂಡಿತ್ತು. ಇಲ್ಲಿ ಬಳಕೆದಾರರಿಗೆ ಯಾವ ಪ್ರಾತಿನಿಧ್ಯವೂ ಇರಲಿಲ್ಲ.

ಇದೆಲ್ಲಾ ಆಗಿಹೋದ ಮೇಲೆ ರೇಡಿಯಸ್ ಕಂಪನಿ ಒಂದು ತಕರಾರನ್ನು ಸಿಎಸ್‌ಐಡಿಸಿ ಮುಂದೆಇಟ್ಟಿತು. ದಿನಕ್ಕೆ ನಾಲ್ಕು ಮಿಲಿಯನ್ ಲೀಟರ್‌ಗಳ (ಎಮ್‌ಎಲ್‌ಡಿ) ಕನಿಷ್ಟ ಖರೀದಿ ಗ್ಯಾರಂಟಿಯನ್ನು ಕೊಡಬೇಕು ಎಂದು ಹಠ ಹಿಡಿಯಿತು. ಆದರೆ ಇದಕ್ಕೆ ಸಿಎಸ್‌ಐಡಿಸಿ ಆರಂಭದಲ್ಲಿ ಒಪ್ಪಲಿಲ್ಲ. ಅದಕ್ಕೆ ರೇಡಿಯಸ್ ಹೇಳಿತು ಈ ಅಂಶ ಈಗಾಗಲೇ ನಮ್ಮ ಒಪ್ಪಂದದಲ್ಲಿದೆ. ನೀವು ಬೇಡ ಎನ್ನುವುದು ಸಾಧ್ಯವೇ ಇಲ್ಲ. ನಿಮಗೆ ಅಂಥಾ ಸ್ವಾತಂತ್ರ್ಯವಾಗಲೀ ನಿರ್ಧಾರದ ಅಧಿಕಾರವಾಗಲೀ ಇಲ್ಲ. ಆದ್ದರಿಂದ ನೀವು ೪ ಎಮ್‌ಎಲ್‌ಡಿ ಗ್ಯಾರಂಟಿ ನೀಡುವುದು ಮಾತ್ರವಲ್ಲ, ನೀವು ಅದಕ್ಕಿಂತ ಹೆಚ್ಚು ಸರಬರಾಜು ಮಾಡಿದರೆ ಅದರ ಕಿಲೋ ಲೀಟರ್ ಬೆಲೆಯನ್ನು ಹೆಚ್ಚಿಸಲಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ನೀವು ೪ ಎಮ್‌ಎಲ್‌ಡಿಗಿಂತ ಕಡಿಮೆ ನೀರನ್ನೂ ಬಳಸಿದರೂ ಸರಿ ನಮಗೆ ಗ್ಯಾರಂಟಿ ಪ್ರಕಾರ ೪ ಎಮ್‌ಎಲ್‌ಡಿ ನೀರಿನ ದರವನ್ನೇ ಕೊಡಬೇಕು.

ಮೊದಲೇ ಎಲ್ಲಾ ಅಂಗಗಳನ್ನೂ ತಾನೇ ಹಗ್ಗ ಕೊಟ್ಟು ಕಟ್ಟಿಸಿಕೊಂಡಿದ್ದ ಅರಿವಿದ್ದರೂ ಸಿಎಸ್‌ಐಡಿಸಿ ಅನಿವಾರ್ಯವಾಗಿ ಈ ಶರತ್ತನ್ನು ವಿರೋಧಿಸಿತು. ಆದಕ್ಕೆ ಕಂಪನಿ "ಈ ಒಪ್ಪಂದದಿಂದ ಹಿಂದೆ ಸರಿಯುವುದಾದರೆ

ಸರ್ಕಾರ ಇದಕ್ಕೆ ಪಡೆದಿರುವ ಒಟ್ಟೂ ಸಾಲವನ್ನು ಒಂದೇ ಕಂತಿನಲ್ಲಿ ಹಿಂತಿರುಗಿಸಬೇಕು ಹಾಗೂ ಈಗ ಆಗಿರುವ ನಷ್ಟ ಮತ್ತು ಭವಿಷ್ಯದಲ್ಲಿ ನಾವು ಗಳಿಸಲಿದ್ದ ಲಾಭದ ಹಣವಾಗಿ ೪೦೦-ನಾಲ್ಕು ನೂರು ಕೋಟಿಯನ್ನು ದಂಡವಾಗಿ ಕೊಡಬೇಕು" ಎಂದು ಹೇಳಿತು.

ಇದರಿಂದ ಬೆಚ್ಚಿಬಿದ್ದ ಸರ್ಕಾರ ಇಂದು ರೇಡಿಯಸ್ ವಾಟರ್ ಕಂಪನಿಯಿಂದ ಪ್ರತಿನಿತ್ಯ ೪ ಎಮ್‌ಎಲ್‌ಡಿ ನೀರನ್ನು ಖರೀದಿಸುತ್ತಿದೆ. ಆದರೆ ಅಲ್ಲಿನ ಕೈಗಾರಿಕೆಗಳೆಲ್ಲಾ ಈ ಸರಬರಾಜು ವೆಚ್ಚದ ದುಬಾರಿ ದರಕ್ಕೆ ಹೆದರಿ ಪ್ರತ್ಯೇಕ, ಖಾಸಗೀ ನೀರಿನ ವ್ಯವಸ್ಥೆ ಮಾಡಿಕೊಂಡಿವೆ. ಸಿಎಸ್‌ಐಡಿಸಿ ನಿತ್ಯ ಅಷ್ಟು ನೀರನ್ನು ಮಾರಲಾಗುತ್ತಿಲ್ಲ. ಸದ್ಯಕ್ಕೆ ನಿತ್ಯ ೧ ರಿಂದ ೧.೫ ಎಮ್‌ಎಲ್‌ಡಿ ನೀರು ಮಾತ್ರ ಖರ್ಚಾಗುತ್ತಿದೆ. ಆದರೆ ಸಿಎಸ್‌ಐಡಿಸಿ ನಿತ್ಯ ೪೦೦ ಎಮ್‌ಎಲ್‌ಡಿ ನೀರಿಗೆ ಬೆಲೆ ತೆರುತ್ತಿದೆ. ಇಂದು ಶಿವನಾಥ್ ನದಿಯ ಅತ್ಯಂತ ಪ್ರಮುಖ ಭಾಗ ರಾಜ್ಯಸರ್ಕಾರದ ಅಥವಾ ಜನರ ಹಕ್ಕಾಗಿ ಉಳಿದು ಕೊಂಡಿಲ್ಲ. ಅದು ಯಾವುದೋ ಒಂದು ವಿದೇಶಿ ಖಾಸಗೀ ಕಂಪನಿಯ ಒಡೆತನದಲ್ಲಿದೆ ಹಾಗೂ ಸರ್ಕಾರ ಮತ್ತು ಜನರಿಗೆ ನಿತ್ಯ ನಷ್ಟದ ನದಿಯಾಗಿ ರಾಜ್ಯವನ್ನು ಸಗಟಾಗಿ ಕಾಡುತ್ತಿದೆ.

ಇದೊಂದು ಕೇವಲ ಉದಾಹರಣೆ. ಹೀಗೆ ಕೇರಳ ರಾಜ್ಯದಲ್ಲೇ ನಾಲ್ಕು ನದಿಗಳು ಮಾರಾಟವಾಗಿವೆ. ಒರಿಸ್ಸಾದ ಮೂರು ನದಿಗಳು ಮಾರಾಟಗೊಂಡಿವೆ ಹಾಗೂ ಇನ್ನೂ ಮೂರು ಮಾರಾಟದ ಹಂತದಲ್ಲಿವೆ. ಇಷ್ಟೇ ಅಲ್ಲ ದೆಹಲಿಗೆ ನೀರಿನ ಸರಬರಾಜು ನೆಪದಲ್ಲಿ ಯಮುನೆಯೂ ಮಾರಾಟದ ಬಿಕ್ಕಟ್ಟಿನಲ್ಲಿದ್ದಾಳೆ. ಹೀಗೆ ಒಟ್ಟಾರೆ ದೇಶದ ೧೩೫ಕ್ಕೂ ಹೆಚ್ಚು ನಗರಗಳಿಗೆ ನೀರು ಸರಬರಾಜು ಮಾಡುವ ನೆಪದಲ್ಲಿ ಬಹುಪಾಲು ಇಡೀ ಭಾರತವನ್ನೇ ಖಾಸಗೀ ಕಂಪನಿಗಳ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರದಲ್ಲಿವೆ.

ಆಶ್ಚರ್ಯದ ಸಂಗತಿ ಎಂದರೆ ಇದನ್ನು ನಮ್ಮ ಚುನಾಯಿತ ಸರ್ಕಾರಗಳು ಜಾಗತೀಕರಣದ ಹೆಸರಿನಲ್ಲಿ ದೇಶಸೇವೆ ಎಂಬಂತೆ ಮಾಡುತ್ತಿವೆ. ಹಾಗೂ ಇಡೀ ಪ್ರಕಿಯೆ ಮುಗಿದು ನದಿ ಮತ್ತು ಸರಬರಾಜು ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಿ ಕೊಡುವವರೆಗೆ ಇದನ್ನೆಲ್ಲಾ ಆದಷ್ಟು ರಹಸ್ಯವಾಗಿ ನಡೆಸಲಾಗುತ್ತದೆ. ಇದಕ್ಕೆ ಆಕಸ್ಮಿಕ ಜನ ವಿರೋಧ ಬಂದರೆ ಬೆಂಗಳೂರಿನ 'ಜನಾಗ್ರಹ' ದಂಥ 'ದೇಶಭಕ್ತ' ಸಂಸ್ಥೆಗಳೂ ರಮೇಶ್ ರಾಮನಾಥನ್ ರಂಥ 'ಅಪ್ರತಿಮ ದೇಶಭಕ್ತರೂ' ಅತ್ತ ಸರ್ಕಾರಕ್ಕೂ ಇತ್ತ ಅಧಿಕಾರಿಗಳಿಗೂ ಹಾಗೇ ಮತ್ತೊಂದು ಮುಖದಲ್ಲಿ ಈ ನಾಡಿನ ಬಡಜನರಿಗೂ 'ನೈತಿಕ ಬೆಂಬಲ' ಕೊಡುತ್ತಿವೆ. ಇದಕ್ಕಾಗಿ ವರ್ಡ್‌ಬ್ಯಾಂಕ್, ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕುಗಳ ಜೊತೆ ಒಪ್ಪಂದ ಮಾಡಿಕೊಳ್ಳುತ್ತವೆ. ಅವರು ಹೇಳಿ ಕೊಟ್ಟ ಅಂಶಗಳನ್ನೇ ಈ ರಾಜ್ಯ ಕೊಳಗೇರಿ ಜನರ ಮುಂದೆ ಕ್ರಿಯಾತ್ಮಕವಾಗಿ ಮಂಡಿಸುತ್ತಿವೆ.

ಕೇರಳರಾಜ್ಯದಲ್ಲೇ ನಾಲ್ಕು ನದಿಗಳು ಮಾರಾಟವಾಗಿವೆ. ಒರಿಸ್ಸಾದ ಮೂರು ನದಿಗಳು ಮಾರಾಟಗೊಂಡಿವೆ ಹಾಗೂ ಇನ್ನೂ ಮೂರು ಮಾರಾಟದ ಹಂತದಲ್ಲಿವೆ. ಇಷ್ಟೇ ಅಲ್ಲ ದೆಹಲಿಗೆ ನೀರಿನ ಸರಬರಾಜು ನೆಪದಲ್ಲಿ ಯಮುನೆಯೂ ಮಾರಾಟದ ಬಿಕ್ಕಟ್ಟಿನಲ್ಲಿದ್ದಾಳೆ. ಹೀಗೆ ಒಟ್ಟಾರೆ ದೇಶದ ೧೩೫ಕ್ಕೂ ಹೆಚ್ಚು ನಗರಗಳಿಗೆ ನೀರು ಸರಬರಾಜು ಮಾಡುವ ನೆಪದಲ್ಲಿ ಬಹುಪಾಲು ಇಡೀ ಭಾರತವನ್ನೇ ಖಾಸಗೀ ಕಂಪನಿಗಳ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರದಲ್ಲಿವೆ. ಆಶ್ಚರ್ಯದ ಸಂಗತಿ ಎಂದರೆ ಇದನ್ನು ನಮ್ಮ ಚುನಾಯಿತ ಸರ್ಕಾರಗಳು ಜಾಗತೀಕರಣದ ಹೆಸರಿನಲ್ಲಿ ದೇಶಸೇವೆ ಎಂಬಂತೆ ಮಾಡುತ್ತಿವೆ.

"ಈ ನಗರದ ಮಹಾ ಬಡಜನರೇ ನೀವು ಇನ್ನೇನು ಇಂದೋ ನಾಳೆಯೋ ನೀರಿನ ಕೊರತೆಯಿಂದ ಸಾಯಲಿದ್ದೀರಿ. ನಿಮ್ಮನ್ನು ನಿಮ್ಮ ಸರ್ಕಾರ ಉದ್ಧಾರ ಮಾಡಲು ಸಾಧ್ಯವಿಲ್ಲ. ನಿಮಗೆ ಕುಡಿಯುವ ನೀ[ರು] ಕೊಡಲು ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಇಲ್ಲ. ಅದಕ್ಕಾ[ಗಿ] ವರ್ಡ್‌ಬ್ಯಾಂಕ್, ಏಷ್ಯಾ ಡೆವಲಪ್ ಮೆಂ[ಟ್] ಬ್ಯಾಂಕುಗಳಂಥ ಮಹಾನ್ ಸಂಸ್ಥೆಗಳು ನಿಮ್ಮ ಉದ್ಧಾರ[ಕ್ಕೆ] ಮುಂದೆ ಬಂದಿವೆ. ಅವು ಕೋಟ್ಯಾಂತರ ಡಾಲ[ರ್] ಬಂಡವಾಳ ಹೂಡಿ ಈ ನಗರಕ್ಕೆ ಅದರಲ್ಲೂ ನಿಮ[ಗೆ] ನೀರು ಕೊಡಲು ಹೊರಟಿವೆ. ಅದಕ್ಕೆ ನೀವು ಈಗ ಮಾ[ಡ] ಬೇಕಾದುದಿಷ್ಟೇ: ತಕ್ಷಣ ನಿಮ್ಮ ಗುಡಿಸಲಿಗೆ ಒಂ[ದು] ನಲ್ಲಿಯ ಸಂಪರ್ಕವನ್ನು ಹಾಕಿಸಿಕೊಳ್ಳಿ! ಇಂತಿಷ್ಟು ಎಂ[ದು] ಸಣ್ಣದಾಗಿ ದರ ನಿಗಧಿ ಮಾಡುತ್ತೇವೆ ಅಷ್ಟನ್ನು ಕ[ಟ್ಟಿ] ಆಮೇಲೆ ನೋಡೋಣ" ಎಂದು ಈ ಬೆಂಗಳೂ[ರು] ನಗರದ ಜನರ ಮನ ಒಲಿಸಲು ಸಾಯುವಷ್ಟು ಪ್ರಯ[ತ್ನ] ಮಾಡುತ್ತಿವೆ. ಕೆಲವು ಸ್ಲಂಗಳಲ್ಲಿ ಗೂಸಾ ತಿಂದಿರುವುದು ಬೇರೆ ಕಥೆ.

ಇದು ಎಲ್ಲರಿಗೂ ಹೊರ ನೋಟಕ್ಕೆ ತುಂಬಾ ಸರಳವಾಗಿ ಕಾಣುತ್ತದೆ. ಹೌದು, ಸದ್ಯಕ್ಕೆ ನೀರಿನ ಕೊರ[ತೆ] ಇದೆ. ಅವರು (ಯಾರಾದರೂ ಆಗಿರಲಿ) ನೀರು ಕೊಡು[ತ್ತಾ]ತಾರೆ. ಅದಕ್ಕೆ ದುಡ್ಡುಕೊಟ್ಟರೆ ತಪ್ಪೇನು? ಆದರೆ ಎಲ್ಲಾ ದುರಂತಗಳ ಮೂಲ ಸಹ ಇಲ್ಲೇ ಇದೆ. ಇದು ಜನರಿ[ಗೆ] ಅರ್ಥವಾಗುವ ಹೊತ್ತಿಗೆ ಇಡೀ ರಾಜ್ಯ ಖಾಸಗೀ ದೊ[ರೆ]ಗಳ ಕಪಿಮುಷ್ಟಿಯಲ್ಲಿ ಸೇರಿಹೋಗಿರುತ್ತದೆ. ಅಂದು ಬಿಡಿ[ಸಿ] ಕೊಳ್ಳಲು ಜನ ಬಯಸಬಹುದು. ಅದಕ್ಕೆ ಸರ್ಕಾರವು ಸ್ಪಂದಿಸಬಹುದೇನೋ! ಆದರೆ ಅಂಥ ಒಂದೊಂದು ಪ್ರಯತ್ನಗಳೂ ಈ ರಾಜ್ಯವನ್ನು ಮತ್ತಷ್ಟು ಇಕ್ಕಟ್ಟಿಗೆ ಸಿ[ಲು]ಸುತ್ತಾ ಹೋಗುತ್ತವೆ. ಸದ್ಯಕ್ಕೆ ಕರ್ನಾಟಕದ ೨೨ ನಗರಗಳು ಈ ಪಟ್ಟಿಯಲ್ಲಿವೆ. ಒಂದೆಡೆ ಗ್ರೇಟರ್ ಬೆಂಗಳೂರು ಆದರೆ ಮತ್ತೊಂದೆಡೆ ಗ್ರೇಟರ್ ಮಂಗಳೂರು, ಮ[ತ್ತೊಂ]ದೊಂದೆಡೆ ಗ್ರೇಟರ್ ಗುಲ್ಬರ್ಗಾ ಸಹಾ ಆಗುತ್ತಿವೆ. ಒಟ್ಟಾ[ರೆ] ೨೦೧೦ರ ಹೊತ್ತಿಗೆ ಇಡೀ ರಾಜ್ಯದ ನೀರು ಸರಬರಾಜು ಹಾಗೂ ನಗರಾಭಿವೃದ್ಧಿಯ ಹೆಸರಿನಲ್ಲಿ ರಾಜ್ಯ ವಿದೇಶೀ ಕಂಪನಿಗಳಿಗೆ ಮಾರಾಟ ವಾಗುವುದು ಬಹುಪಾಲು ಖಚಿತವಾಗಿದೆ.

ಇದೇನು ಖಾಸಗೀಕರಣದ ವಿರೋಧ ಎಂದಲ್ಲ. ಆದರೆ ಈ ಖಾಸಗೀಕರಣದ ಹಿಂದೆ ಮತ್ತು ಮುಂದೆ ಸಾವಿರಾರು ಪ್ರಶ್ನೆಗಳಿವೆ. ಇದರಲ್ಲಿ ಜನರನ್ನು ಸರ್ಕಾರ ಮಾರುವುದರಿಂದ ಹಿಡಿದು, ನಮ್ಮ ಪ್ರಭುತ್ವವನ್ನು ಯಾರೋ ಖರೀದಿಸುವವರೆಗೆ, ಪ್ರಜಾಪ್ರಭುತ್ವದ ಅಳಿವು ಉಳಿವಿನಿಂದ ಹಿಡಿದು ಈ ರಾಜ್ಯ ಶೇಕಡಾ ೮೦ ಭಾಗ ಬಡಜನರ ಸಾವು ಬದುಕಿನವರೆಗೆ ಈ ಪ್ರಶ್ನೆಗಳು ವಿಸ್ತರಿಸಿ ಕೊಂಡಿವೆ. ಇವನೆಲ್ಲಾ ವಿವರವಾಗಿಯೇ ಚರ್ಚಿಸಬೇಕಾಗುತ್ತದೆ.

(ಮುಂದುವರೆಯುವುದು....)

ಬಾಟಲಿನೀರಿನ ಮಾಯಾಜಾಲ

ಮೆಕ್ಸಿಕೋದಲ್ಲಿ ಮಾರ್ಚ್‌ನಲ್ಲಿ ...ದ ಜಾಗತಿಕ ನೀರಿನ ಸಮಾವೇಶದಲ್ಲಿ ...ಮಾರು ೧೨೦ ದೇಶಗಳಲ್ಲಿ ಯಾವ ದೇಶ ...ರೂ ಸ್ವಚ್ಛ ಹಾಗು ಕುಡಿಯಲು ಯೋಗ್ಯ ...ದ ನೀರು ಬಳಸುವುದು ಎಲ್ಲಾ ಮನುಷ್ಯರ ...ು ಎಂದು ಘೋಷಿಸಲಾಗಿಲ್ಲ. ಅಥವಾ ...ನ್ನು ಒಂದು ಹಕ್ಕಾಗಿ ಮಾಡ ಲಾಗಿಲ್ಲ. ...ಪ್ರಪಂಚದಲ್ಲಿ ಎಷ್ಟೋ ಮಿಲಿ ಯನ್ ಜನ ...ಕುಡಿಯುವ ನೀರಿಗೆ ಗತಿಯಿಲ್ಲ. ಆದರೆ ...ನ್ನು ಬಾಟಲಿಯಲ್ಲಿ ಮಾಡಿ ಮಾರುವವ ...ಮಾತ್ರ ಸುವರ್ಣ ಯುಗವಾಗಿದೆ. ಅವು ...ಶುದ್ಧ ನೀರನ್ನು ಕುಡಿಯುವ ಅಗತ್ಯ ...ನ್ನು ಮತ್ತು ನಗರದ ಶ್ರೀಮಂತರ ಹಣ ...ಡುವ ಸಾಮರ್ಥ್ಯವನ್ನು ಮುಂದಿಟ್ಟು ...ಂಡು ಮನುಷ್ಯನ ಅತ್ಯಗತ್ಯವಾದ ಕುಡಿ ...ವ ನೀರಿಗೆ ದುಬಾರಿ ಹಣ ಕೀಳು ...ನ್ದಾರೆ.

ಹೀಗೆ ಮೇಲೆ ಹೇಳಿದ ಕಾರ್ಖಾನೆಗಳ ...ಗತಿಕ ಆದಾಯ ಸುಮಾರು ೧೦೦ ಬಿಲಿ...ನ್ ಡಾಲರ್‌ಗಳು ಮತ್ತು ಇದರ ಪರಿಣಾ...ವು ನೇರವಾಗಿ ಇಂದಿನ ಜನರ ಮತ್ತು ...ಸಮಾಜದ ಮೇಲೆ ಬೀಳುತ್ತದೆ. ಅಷ್ಟೇ ಅಲ್ಲದೆ



ಮುಚ್ಚಳದ ಬೆಲೆ:	ರೂ. 0.025
ಬಾಟಲಿನ ಬೆಲೆ:	ರೂ. 1.50 - 2.50
ಸಂಸ್ಕರಣಾ ವೆಚ್ಚ:	ರೂ. 0.10 - 0.25
ಲೇಬಲ್ ಬೆಲೆ:	ರೂ. 0.15-0.25
ಡಬ್ಬದ ಬೆಲೆ:	ರೂ.0.50
ಸಾಗಾಣಿಕಾ ವೆಚ್ಚ	ರೂ. 0.10 - 0.25
ಇತರೆ (ಡಬ್ಬಕ್ಕೆ ತುಂಬುವುದು, ಸೀಲ್ ಮಾಡುವುದು ಇತ್ಯಾದಿ)	ರೂ.0.25
ಒಟ್ಟು	ರೂ. 2.85-4.25
ಮಾರಾಟಬೆಲೆ	ರೂ.10.0-ರೂ.12.0

...ಗೆ ಮಾಡುತ್ತಿರುವ ಭವಿಷ್ಯ ಕೂಡ ನಮ್ಮ ಕೈಯಲ್ಲೇ ... ಹೇಗೆಂದರೆ ನಮ್ಮಲ್ಲಿ ಇರುವ ಎಲ್ಲಾ ಶುದ್ಧ ನೀರಿನ ...ಲಗಳನ್ನು ಹೆಚ್ಚು ಕೊಳಚೆಯಾಗಲು ಬಿಟ್ಟು ಕೊಟ್ಟು ...ರಿಗೆ ನಾವೇ ಅವರಿಗೆ ಇನ್ನಷ್ಟು ಉಪಕಾರ ಮಾಡುತ್ತಿ...ವೆ. ಇಡೀ ಜಗತ್ತಿನಲ್ಲಿ ಸುಮಾರು ೨೦೦ ಬಿಲಿಯನ್ ...ಟರ್‌ಗಳಷ್ಟು ಬಾಟಲ್ ನೀರನ್ನು ಒಂದು ದಿನಕ್ಕೆ ...ಪಯೋಗಿಸಲಾಗುತ್ತಿದೆ ಎಂದು ಅಂದಾಜು ಮಾಡ...ಗಿದೆ. ಹೀಗೆ ಮೇಲೆ ಹೇಳಿದ ನೀರಿನ ಪ್ರಮಾಣದಲ್ಲಿ ...ಮಾರು ೧/೪ ಭಾರತದ ಜನಸಂಖ್ಯೆಗೆ ಆಗುವಷ್ಟು ...ು ಅಥವಾ ೪.೫ ಜಗತ್ತಿನ ಜನಸಂಖ್ಯೆ ನೀರು ...ಗಿಸಬಹುದು.

ಹಾಗೆ ನೋಡಿದರೆ ಭಾರತದಲ್ಲಿ ಬಾಟಲ್ ನೀರಿನ ...ಪಯೋಗ ಬಹಳ ಕಮ್ಮಿ ಎಂದರೆ ಜಾಗತಿಕವಾಗಿ ...ಟಲ್ ನೀರಿನ ಬಳಕೆ ಸುಮಾರು ಸರಾಸರಿ ೨೪ ಲೀಟ...ಳು. ಭಾರತದಲ್ಲಿ ಕೇವಲ ೫ ಲೀಟರ್ ಎಂದು ಕೊಳ್ಳ...ಬಹುದು. ಅದೇನೆ ಆದರು ಈ ನಡುವೆ ಬಾಟರ್ ನೀರಿನ ...ಕೆ ಬಹಳ ಹೆಚ್ಚಿದೆ ಎಂದರೆ ಅದು ೧೯೯೯ ರಿಂದ ...೦೪ ರಲ್ಲಿ ಮೂರು ಪಟ್ಟು ಹೆಚ್ಚಿದೆ. ಸುಮಾರು ೧.೫ ...ಲಿಯನ್ ಲೀಟರ್‌ನಿಂದ ೫ ಬಿಲಿಯನ್ ಆಗಿದೆ. ಈಗಾ...ೇ ಹೇಳಿದಂತೆ ಅವರಿಗೆ ಇನ್ನೊಂದು ಸುವರ್ಣಯುಗ ...ಗಿ ಕಾಣುತ್ತದೆ. ಹೀಗಾಗಲು ಕಾರಣವೇನೆಂದರೆ ...ದಿನ ಅರ್ಥಶಾಸ್ತ್ರಜ್ಞರು ಆರ್ಥಿಕ ಸ್ಥಿತಿಯ ಬಗ್ಗೆ ಹೆಚ್ಚು ...ಕಜಿ ವಹಿಸುವುದು. ಅದಕ್ಕೆ ಇರುವ ತಳಹದಿ ...ವಾಗಿರುವುದು ಅಷ್ಟೇ ಅಲ್ಲದೆ ನಮ್ಮ ಸರ್ಕಾರಕ್ಕೆ ದೇಶದ ನೀರಿನ ಮೂಲಗಳ ಬಗ್ಗೆ ಇಲ್ಲದಿರುವ ಸಾಮಾನ್ಯ ಕಾಳಜಿ.

ಭಾರತವು ಪ್ರಪಂಚದಲ್ಲಿ ನೀರು ಉಪಯೋಗಿಸುವಲ್ಲಿ ೧೦ನೇ ಸ್ಥಾನ ಪಡೆದಿದೆ. ೨೦೦೨ರಲ್ಲಿ ಬಾಟಲ್ ಕಂಪೆನಿಗಳ ಆದಾಯ ಸುಮಾರು ೧೦ ಬಿಲಿಯನ್ ಆಗಿತ್ತು. ಇಂದು ಈ ಬಾಟಲ್ ನೀರಿನ ವ್ಯಾಪಾರ ಅತಿ ವೇಗವಾಗಿ ಬೆಳೆಯುತ್ತಿರುವ ಒಂದು ಉದ್ದಿಮೆ ಎನ್ನಬಹುದು. ೧೯೯೯ ಮತ್ತು ೨೦೦೪ರ ನಡುವೆ ಈ ಬಾಟಲ್ ವ್ಯಾಪಾರ ೨೫ ಪಟ್ಟು ಹೆಚ್ಚಾಯಿತು.

ಸದ್ಯಕ್ಕೆ? ಭಾರತದ ಬಾಟಲಿನ ಕಾರ್ಖಾನೆಯು ೧೦೦ ಸಾವಿರ ಬಾಟಲ್ ಕಂಪನಿಗಳಿಂದ ಇಡೀ ಬಾಟಲಿನ ಕಾರ್ಖಾನೆಗಳಲ್ಲಿ ಮೊದಲನೆಯ ಸ್ಥಾನ ಪಡೆದಿದೆ. ಸದ್ಯಕ್ಕೆ? ೨೦೦ ಬ್ರಾಂಡ್‌ಗಳಿವೆ ಅದರಲ್ಲಿ ೮೦ ಬ್ರಾಂಡ್‌ಗಳು ಸ್ಥಳೀಯವಾದವು. ಸಾಕಷ್ಟು ಸ್ಥಳೀಯರು ತಮ್ಮ ಸರಕನ್ನು ಸಣ್ಣ ಕಾರ್ಖಾನೆಗಳಲ್ಲಿ ತಯಾರಿಸಿ ಯಾವುದೇ ಬ್ರಾಂಡ್ ಇಲ್ಲದೆಯೇ ಸ್ಥಳೀಯ ಮಾರುಕಟ್ಟೆಯನ್ನು ತುಂಬಿಸುತ್ತಾರೆ. ಆದರೆ ಹೀಗೆ ಬಾಟಲ್ ನೀರು ಮಾಡುವುದು ಗೃಹ ಕೈಗಾರಿಕೆ ಆಗಿದೆ. ಅಲ್ಲದೆ ಬಾಟಲ್ ನೀರು ತಯಾರಿಸಿ ಸರಬರಾಜು ಮಾಡುವವರು ಕೇವಲ ಪಟ್ಟಣಗಳಲ್ಲಿ ಮಾತ್ರವಲ್ಲದೆ ಸುಮಾರು ಅಭಿವೃದ್ಧಿಯಾಗಿರುವ ಗ್ರಾಮೀಣ ವಲಯದಲ್ಲೂ ಕಾಣಬಹುದು.

ಹೀಗೆ ಚಿಕ್ಕ ಪುಟ್ಟ ಬಾಟಲ್ ನೀರು ಸರಬರಾಜು ಮಾಡುವವರು ಇದ್ದರೂ ಕೂಡ ಇಡೀ ವ್ಯವಹಾರವು ದೊಡ್ಡ ದೊಡ್ಡ ಕಂಪನಿಗಳ ಕೈಗೊಂಬೆಯೇ ಆಗಿದೆ. ಅವು ಗಳಲ್ಲಿ ಪಾರ್ಲೆ, ಬಿಸ್ಲೇರಿ, ಕೋಕೋ-ಕೋಲಾ, ಪೆಪ್ಸಿಕೊ, ಪಾರ್ಲೆ ಆಗ್ರೋ, ಮೋಹನ್ ಮೀಕಿನ್ಸ್, ಎಸ್ ಕೆ ಎನ್ ಬ್ರೆವರಿಸ್ ಮತ್ತು ಮುಂತಾದುವುಗಳು. ಪಾರ್ಲೆ ಭಾರತದ ಮೊಟ್ಟ ಮೊದಲ ಬಾಟಲ್ ನೀರಿನ ಕಂಪೆನಿ ಎಂದೇ ಹೇಳಬಹುದು. ಏಕೆಂದರೆ ೨೫ ವರ್ಷಗಳ ಹಿಂದೆ ಬಿಸ್ಲೇರಿಗೆ ಹಣ ನೀಡಿದ್ದೇ ಪಾರ್ಲೆ.

ಮೊದಲು ಹೀಗೆ ಬಾಟಲ್ ನೀರಿನ ವ್ಯವಹಾರ ಶುರುವಾಗಿದ್ದು ಆರ್ಥಿಕ ಬಿಡುಗಡೆ ನಡೆದಾಗ ಎಂದರೆ ೧೯೯೧ರಲ್ಲಿ ಇದಕ್ಕಿಂತ ಮುಂಚೆ ಬಾಟಲ್ ನೀರಿನ ವ್ಯವಹಾರ ಸಂಪೂರ್ಣ ನಿಂತಿತ್ತು ಎಂದೇ ಹೇಳಬಹುದು (೧೯೯೧ರ ತನಕ). ಏಕೆಂದರೆ ಒಂದು ವರ್ಷದಲ್ಲಿ ಬಾಟಲ್ ನೀರನ್ನು ಉಪಯೋಗಿಸುವವರ ಸಂಖ್ಯೆ ೨ ಮಿಲಿಯನ್ ಇತ್ತು. ಆದರೆ ಅದರ ಬೇಡಿಕೆ ಒಂದು ವರ್ಷಕ್ಕೆ ೮೨ ಮಿಲಿಯನ್‌ಗೆ ಏರಿದೆ.

ಬಾಟಲ್ ನೀರನ್ನು ತರಾವರಿಯಾದ ಬಣ್ಣ ಬಣ್ಣದ ಪ್ಲಾಸ್ಟಿಕ್ ಚೀಲಗಳಲ್ಲಿ, ಬಾಟಲ್ ಗಳಲ್ಲಿ ಸಿಗುತ್ತದೆ. ೩೩೦ ಎಂ.ಎಲ್ ಬಾಟಲ್, ೫೦೦ ಎಂ.ಎಲ್ ಬಾಟಲ್, ಒಂದು ಲೀಟರ್ ಬಾಟಲ್, ಅಷ್ಟೆ ಅಲ್ಲದ ೨೦ ರಿಂದ ೫೦ ಲೀಟರ್‌ಗಳಲ್ಲಿಯೂ ಸಿಗುತ್ತದೆ. ಭಾರತದಲ್ಲಿ ಈಗಿನ ಬಾಟಲ್ ವ್ಯವಹಾರವನ್ನು ಬೆಲೆಯ ಆಧಾರದ ಮೇಲೆ ಮೂರು ಭಾಗಗಳಾಗಿ ವಿಂಗಡಿಸಬಹುದು. ಅವು ೧. ಪ್ರೀಮಿಯಂ ನ್ಯಾಚುರಲ್ ಮಿನರಲ್ ವಾಟರ್, ೨. ನ್ಯಾಚುರಲ್ ಮಿನರಲ್ ವಾಟರ್, ೩. ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್‌ನ ಬ್ರ್ಯಾಂಡ್‌ಗಳಲ್ಲಿ ಈವಿಯಾನ್, ಸಾನ್ ಪಿಲ್ಲಿಗ್ರೀನೋ, ಪೆರಿಯರ್ ಇವೆಲ್ಲ ವಿದೇಶದ ಮೂಲಗಳು ಮತ್ತು ಇದರ ಬೆಲೆ ಒಂದು ಲೀಟರ್‌ಗೆ ೮೦ರೂ. ನಿಂದ ೧೧೦ ರೂ. ಗಳವರೆಗೂ ಇದೆ. ನಂತರ ನ್ಯಾಚುರಲ್ ಮಿನರಲ್ ವಾಟರ್ ಇದರಲ್ಲಿ ಹಿಮಾಲಯನ್ ಮತ್ತು ಕ್ಯಾಚ್‌ಗಳು ಸೇರುತ್ತವೆ. ಇವುಗಳ ಬೆಲೆ ಒಂದು ಲೀಟರ್‌ಗೆ ೨೦ ರೂ. ಗಳು, ಕೊನೆಯದಾಗಿ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಎಂದರೆ ಕೇವಲ ಯಾವುದೇ ಕ್ರಿಮಿ ಅಥವಾ ಧೂಳು ಗಲೀಜು ಇಲ್ಲದೆಯಿರುವ ನೀರು, ಒಂದೇ ಅರ್ಥದಲ್ಲಿ ಹೇಳುವುದಾದರೆ ಟ್ರೀಟೆಡ್ ವಾಟರ್.

ಇದು ಬೇರೆಲ್ಲಾ ವ್ಯಾಪಾರಕ್ಕಿಂತ ಹೆಚ್ಚು ಚಾಲನೆಯಲ್ಲಿದೆ. ಇದರ ಬ್ರಾಂಡ್‌ಗಳೆಂದರೆ ಪಾರ್ಲೆ, ಕೊಕೊ ಕೋಲಾದವರ ಕಿನ್‌ಲೇ, ಬಿಸ್ಲೇರಿ ಮತ್ತು ಪೆಪ್ಸಿ ಅವರ ಆಕ್ವಾಫಿನ. ಇದರ ಬೆಲೆ ಸುಮಾರು ೧೦-೧೨ ರೂ. ಇರಬಹುದು ಅಷ್ಟೆ.

ಇದು ಹೆಚ್ಚು ಪ್ರಸಿದ್ಧ ಮತ್ತು ಭಾರತದ ಆರ್ಥಿಕ ಪರಿಸ್ಥಿತಿಗೆ ಹೊಂದುವುದರಿಂದ ಪ್ಯಾಕೇಜ್ಡ್ ಡ್ರಿಂಕಿಂಗ್

ವಾಟರ್ ಚಾಲ್ತಿ ಹೆಚ್ಚು ಮತ್ತು ಒಳ್ಳೆಯ ಲಾಭವೂ ಉಂಟು ಆದ್ದರಿಂದ ಕಳೆದ ೧೦ ವರ್ಷದಿಂದ ದೊಡ್ಡ ಬಹು ರಾಷ್ಟ್ರೀಯ ಕಂಪನಿಗಳಾದ ಪೆಪ್ಸಿ ಮತ್ತು ಕೋಲಾ ಅವರು ಇಡೀ ಭಾರತದ ಬಾಟಲ್ ನೀರಿನ ವ್ಯವಹಾರವನ್ನು ಕೈಯಲ್ಲಿಡಿಯಲು ಕಷ್ಟಪಡುತ್ತಿದ್ದಾರೆ.

ಸದ್ಯಕ್ಕೆ ಅವರು ಒಂದು ಗಮನಾರ್ಹವಾದ ಸ್ಥಾನದಲ್ಲಿದ್ದಾರೆ. ಆದರೂ ಪಾರ್ಲೆ ಮತ್ತು ಬಿಸ್ಲೆರಿ ಅವರು ಸುಮಾರು ಶೇ. ೪೦ ಮಾರುಕಟ್ಟೆಗಳನ್ನು ಹಿಡಿದುಕೊಂಡಿದ್ದಾರೆ. ಕಿನ್ಲೆ ಮತ್ತು ಆಕ್ವಾಫಿನ ಅವರು ಬೇಗ ಬೇಗ ಒಳ್ಳೆಯ ಆದಾಯ ಮಾಡಲು ಸಜ್ಜಾಗುತ್ತಿದ್ದಾರೆ. ಅದಕ್ಕೆ? ಪೂರಕವಾಗಿ ಕಿನ್ಲೆ ಅವರು ಶೇ. ೨೦-೨೫ ಮಾರುಕಟ್ಟೆಯನ್ನು ಹಿಡಿದಿದ್ದಾರೆ.

ಭಾರತದಲ್ಲಿ ಹೆಚ್ಚು ಬಾಟಲ್ ನೀರನ್ನು ಉಪಯೋಗಿಸುತ್ತಿರುವ ಕಾರಣದಿಂದ ಎಷ್ಟೋ ದಕ್ಷಿಣ ರಾಷ್ಟ್ರಗಳು ಒಳ್ಳೆಯ ಆದಾಯದಿಂದ ಸುಖವಾಗಿದ್ದಾರೆ. ಸದ್ಯಕ್ಕೆ ಶೇ. ೪೦ ಬಾಟಲ್ ನೀರಿನ ಮಾರುಕಟ್ಟೆಯು ದಕ್ಷಿಣ ರಾಷ್ಟ್ರಗಳ ಕೈಯಲ್ಲಿವೆ. ಇನ್ನು ಮಿಕ್ಕ ೧೦ ಉತ್ತರ ರಾಷ್ಟ್ರಗಳ ಕೈಯಲ್ಲಿವೆ. ಹೀಗಿದ್ದರೂ ಹೆಚ್ಚು ನೀರನ್ನು ಶುದ್ಧಗೊಳಿಸಿ ಪ್ಯಾಕ್ ಮಾಡುವ ಘಟಕಗಳು ಉತ್ತರ ರಾಷ್ಟ್ರಗಳಲ್ಲಿವೆ. ಭಾರತದಲ್ಲೇ ಸುಮಾರು ೧,೨೦೦ ಬಾಟಲ್ ನೀರಿನ ಘಟಕಗಳುಂಟು. ಅದರಲ್ಲಿ ೬೦೦ ತಮಿಳುನಾಡಿನಲ್ಲಿ ಇರುವುದರಿಂದ ಅಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿದೆ.

ಅರ್ಥಶಾಸ್ತ್ರ ಮತ್ತು ಕಾನೂನು

ಹೀಗೆ ಈ ಬಾಟಲ್ ನೀರಿನ ಘಟಕಗಳು ಬಾಟಲ್ ನೀರನ್ನು ತಯಾರಿಸಲಿ ಅಥವಾ ತಂಪು ಪಾನೀಯಗಳನ್ನೇ ತಯಾರಿಸಲಿ ಆದರೆ ಅದರ ಒಟ್ಟು ಪರಿಣಾಮ ಬೀಳುವುದು ಮಾತ್ರ ನಮ್ಮ ಅಂತರ್ಜಲದ ಮೇಲೆ. ಅದು ನಮ್ಮ ಭಾರತದಲ್ಲಿ ಅಂತರ್ಜಲವೇ ಮುಖ್ಯ ನೀರಿನ ಮೂಲವಾದುದರಿಂದ ಆಗಾಗ ನಮ್ಮ ಸಮುದಾಯಗಳಿಗೂ ಮತ್ತು ಕಂಪನಿಗಳಿಗೂ ಜಗಳ ಬೀಳುವುದುಂಟು.

ಸದ್ಯಕ್ಕೆ ಇರುವ ಕಾನೂನಿನ ಪ್ರಕಾರ "ಯಾವ ಮನುಷ್ಯ ಕೈಯಲ್ಲಿ ಭೂಮಿ ಇದೆಯೋ ಆ ಭೂಮಿಯಲ್ಲಿ ಸಿಗುವ ನೀರು ಅವನ ಸ್ವತ್ತು"ಎಂದು. ಹಾಗಾಗಿ ಎಲ್ಲಾ ಕಂಪನಿಯ ಮಾಲೀಕರೂ ಸಹಜವಾಗಿ ದೊಡ್ಡ ಭೂಒಡೆಯರಾದ ಕಾರಣ ಇರುವ ಎಲ್ಲಾ ಅಂತರ್ಜಲವನ್ನು ಅವರೇ ತಿಂದುತೇಗುತ್ತಿದ್ದಾರೆ. ಹಾಗಾದರೆ ಈಗಿರುವ ಕಾನೂನು ಸರಿಯೇ? ಯಾರೋ ಒಬ್ಬ ಮನುಷ್ಯ ಕೇವಲ ಒಂದು ಚದರ ಮೀಟರ್ ಭೂಮಿಯ ಒಡೆಯನಾಗಿರುತ್ತಾನೆ. ಅವನು ಆ ಚ.ಮೀ. ನೆಲದಲ್ಲಿ ಬೋರನ್ನು ಕೊರೆದು ಸುತ್ತಮುತ್ತಲ ಅಂತರ್ಜಲವನ್ನು ಹೀರುತ್ತಾ ಹೋಗುತ್ತಾನೆ. ಇವನನ್ನು ಕೇಳುವವರರಾರು? ಏಕೆಂದರೆ ಭೂಮಿದೆ ಕಾಂಪೌಂಡ್ ಕಟ್ಟಿ ಇದು ನನ್ನ ಭೂಮಿ ಎನ್ನಬಹುದು. ಆದರೆ ಅದೇ ಭೂಮಿಯ ಕೆಳಗಿರುವ ನೀರಿಗೆ ಕಟ್ಟೆ ಕಟ್ಟಿ ಇದು ನನ್ನದು ಎಂದು ಯಾವ ಪಕ್ಕದ ಭೂಮಾಲೀಕನೂ ನಿಗದಿ ಮಾಡಲಾಗುತ್ತಿಲ್ಲ. ಹಾಗಾಗಿ ಇಲ್ಲಿ ಹೇಳಿರುವ ಕಾನೂನೇ ಎಲ್ಲಾ ದುರಂತಗಳಿಗೂ ಕಾರಣವಾಗಿದೆ.

ಇದಕ್ಕೆ ಉದಾಹರಣೆಯಾಗಿ ಜಯಪುರದ ಬರಡು ಭೂಮಿಯಲ್ಲಿರುವ ಕೊಕೋಕೋಲಾ ಕಂಪನಿಯನ್ನು ತೆಗೆದುಕೊಳ್ಳಬಹುದು. (ನಮ್ಮ ಬೆಂಗಳೂರಿನ ಸುತ್ತಮುತ್ತ ಇರುವ ಪೆಪ್ಸಿ, ಕೊಕೋಕೋಲಾ ಕಂಪನಿಗಳೂ ಇದರಿಂದ ಹೊರತಲ್ಲ) ಅದು ಮಾಡಿದ ಗಲೀಜು ಕೊಳಚೆಗೆ ರಾಜ್ಯ

ಒಂದು ಬಾಟಲ್ ಮತ್ತು ಅದರ ಮುಚ್ಚಳ ಮತ್ತು ಆ ಬಾಟಲಿನ ಮೇಲೆ ಹಾಕಿರುವ ಸ್ಟಿಕ್ಕರ್ ಎಲ್ಲವೂ ಸೇರಿ ರೂ. ೨.೫೦ ರಿಂದ ರೂ. ೩.೭೫ವರೆಗೆ ಆಗುತ್ತದೆ. ಅದೇನೇ ಆದರೂ ೨೦-೫೦ ಲೀ. ದೊಡ್ಡ ಕ್ಯಾನಿನಲ್ಲಿ ಒಂದು ಲೀ. ನೀರನ್ನು ಒಂದು ರೂ. ನಂತೆ ಮಾರಿದರೂ ಅವರಿಗೆ ಬೇಕಾದಷ್ಟು ಆದಾಯವಿದೆ. ಅಲ್ಲದೆ ಆ ದೊಡ್ಡ ಕ್ಯಾನುಗಳನ್ನು ಮರುಬಳಕೆ ಮಾಡಲಾಗುತ್ತದೆ. ಇನ್ನು ಅವರು ಉಪಯೋಗಿಸಿಕೊಂಡಿರುವ ಕಾರ್ಮಿಕರ ಸಂಬಳ ಮತ್ತು ಸ್ಥಳೀಯ ಖರ್ಚುಗಳು ಯಾವಾಗಲೂ ಆಯಾ ಪ್ರದೇಶದ ಮೇಲೆ ನಿರ್ಧಾರವಾಗಿರುತ್ತದೆ (ಭಾರತಲ್ಲಿ ಮಾನವ ಶಕ್ತಿ ಎಷ್ಟು ಚೀಪ್ ಎಂದು ಎಲ್ಲರಿಗೂ ಗೊತ್ತಿದೆ) ಮತ್ತು ಕಂಪನಿಯು ಎಷ್ಟು ದೊಡ್ಡದು ಹಾಗೂ ಅದರಲ್ಲಿ ಎಷ್ಟು ಬಂಡವಾಳ ಹೂಡಲಾಗಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಇಷ್ಟೆಲ್ಲಾ ಆದ ಮೇಲೂ

ಮಾಲಿನ್ಯ ನಿಯಂತ್ರಣ ಮಂಡಲಿಗೆ ಸ್ವಲ್ಪ ಮೊತ್ತದ ಹಣ ಎಂದರೆ ಸುಮಾರು ೫೦೦೦ ರೂ. ಕಟ್ಟುವುದು ಬಿಟ್ಟರೆ ಅದಕ್ಕೆ ಅಲ್ಲಿ ಯಾವ ತೊಂದರೆಯೂ ಇಲ್ಲ. ಅದು ಒಂದು ದಿನಕ್ಕೆ ಹೆಚ್ಚು ಕಡಿಮೆ ಎಂದರೆ ಅರ್ಧ ಮಿಲಿ

ಬಾಟಲ್ ನೀರಿನ ಘಟಕಗಳು ಬಾಟಲ್ ನೀರನ್ನು ತಯಾರಿಸಲಿ ಅಥವಾ ತಂಪು ಪಾನೀಯಗಳನ್ನೇ ತಯಾರಿಸಲಿ ಆದರೆ ಅದರ ಒಟ್ಟು ಪರಿಣಾಮ ಬೀಳುವುದು ಮಾತ್ರ ನಮ್ಮ ಅಂತರ್ಜಲದ ಮೇಲೆ. ಅದು ನಮ್ಮ ಭಾರತದಲ್ಲಿ ಅಂತರ್ಜಲವೇ ಮುಖ್ಯ ನೀರಿನ ಮೂಲವಾದುದರಿಂದ ಆಗಾಗ ನಮ್ಮ ಸಮುದಾಯಗಳಿಗೂ ಮತ್ತು ಕಂಪನಿಗಳಿಗೂ ಜಗಳ ಬೀಳುವುದುಂಟು.

ಯನ್ ಲೀಟರ್ ನೀರನ್ನು ಭೂಮಿಯಿಂದ ಹೊರ ಯುತ್ತದೆ. ಅದು ಒಂದು ಸಾವಿರ ಲೀ. ೧೪ ಯಂತೆ. ಅಂದರೆ ಇಲ್ಲಿ ಕಿನ್ಲೆ ಕಂಪನಿ ಒಂದು ನೀರನ್ನು ರೂ. ೧೦ ರಂತೆ ಮಾರಾಟ ಮಾಡುತ್ತ ಆದರೆ ಇದರ ಮೂಲ ಬೆಲೆ ಲೀಟರಿಗೆ ೦.೦೨-೦.೦ ಪೈಸೆಗಳಾಯಿತು. ಇದರೊಂದಿಗೆ ಅವರು ಪ್ರತಿ ಒಂ ಲೀಟರಿನ ಒಂದು ಬಾಟಲಿ ತಯಾರಿಸಲು ಸುಮಾರು ಲೀ. ಅಂತರ್ಜಲವನ್ನು ಬಳಸುತ್ತಾರೆ.

ಭಾರತದಲ್ಲಿ ಬಿಟ್ಟರೆ ಬೇರೆಲ್ಲೂ ನೀರು ಇಷ್ಟು ಕ ಬೆಲೆಗೆ ಕಂಪನಿಗಳಿಗೆ ಸಿಗುವುದಿಲ್ಲ. ಏಕೆಂದರೆ ಕೋಲಾ ತಾಯಿನಾಡಾದ ಅಮೆರಿಕಾದಲ್ಲಿ ೧೦೦೦ಲೀ.ಗೆ ಸುಮಾ ೨೧ ರೂ. ಆಗುತ್ತದೆ. ಇದು ೧೯೯೦ರ ಮಾತು. ಬ್ರಿಟ ನಲ್ಲಿ ಅಷ್ಟೇ ನೀರಿಗೆ ೯೦ ರೂ. ಮತ್ತು ಕೆನಡಾದಲ್ಲಿ ರೂ. ವೆಚ್ಚ ಬೀಳುತ್ತದೆ.

ಇಷ್ಟೆಲ್ಲಾ ಆಗಿ ಕೂಡಾ, ಸದ್ಯಕ್ಕೆ ಲಭ್ಯವಿರುವ ಅ ದುಬಾರಿಯ ಒಳ್ಳೆ ಕಂಪನಿಯ ಯಂತ್ರವನ್ನು ಉ ಯೋಗಿಸುತ್ತಾರೆ ಎಂದೇ ಭಾವಿಸುವುದಾದರೂ ಕೂ ೧೦೦೦ ಲೀ. ನೀರನ್ನು ಶುದ್ಧ ಗೊಳಿಸಲು ೨೫ ಪೈ ಆಗಬಹುದಷ್ಟೇ. ಅಂದರೆ ಒಂದು ಲೀ. ಗೆ ೦.೨೫ ಪೈ ಒಟ್ಟಾಗಿ ಹೇಳುವುದಾದರೆ ನೀರಿಗಾಗಲೀ ಅಥವಾ ಅದ ಶುದ್ಧ ಗೊಳಿಸುವುದಕ್ಕಾಗಿ ಹೆಚ್ಚು ಹಣ ವ್ಯಯವಾಗುವುದಿ ಎಂದಾಯಿತು. ಆದರೆ ಬಾಟಲಿಗೆ ತುಂಬಿದ ನೀರ ಸೀಲ್ ಮಾಡಿ ಅದನ್ನು ಜಾಹೀರಾತುಗಳ ಮೂ ಮಾರುಕಟ್ಟೆಗೆ ತಳ್ಳುವುದಕ್ಕೆ ಇವರು ಅಪಾರ ವೆ ಮಾಡುತ್ತಾರೆ.

ಒಂದು ಬಾಟಲ್ ಮತ್ತು ಅದರ ಮುಚ್ಚಳ ಮ ಆ ಬಾಟಲಿನ ಮೇಲೆ ಹಾಕಿರುವ ಸ್ಟಿಕ್ಕರ್ ಎಲ್ಲವೂ ಸೇ ರೂ. ೨.೫೦ ರಿಂದ ರೂ. ೩.೭೫ವರೆಗೆ ಆಗುತ್ತ ಅದೇನೇ ಆದರೂ ೨೦-೫೦ ಲೀ. ದೊಡ್ಡ ಕ್ಯಾನಿನ ಒಂದು ಲೀ. ನೀರನ್ನು ಒಂದು ರೂ. ನಂತೆ ಮಾರಿದರ ಅವರಿಗೆ ಬೇಕಾದಷ್ಟು ಆದಾಯವಿದೆ. ಅಲ್ಲದೆ ಆ ದೊ ಕ್ಯಾನುಗಳನ್ನು ಮರುಬಳಕೆ ಮಾಡಲಾಗುತ್ತದೆ. ಇನ ಅವರು ಉಪಯೋಗಿಸಿಕೊಂಡಿರುವ ಕಾರ್ಮಿಕರ ಸಂಬ ಮತ್ತು ಸ್ಥಳೀಯ ಖರ್ಚುಗಳು ಯಾವಾಗಲೂ ಆಯ ಪ್ರದೇಶದ ಮೇಲೆ ನಿರ್ಧಾರವಾಗಿರುತ್ತದೆ (ಭಾರತ ಮಾನವ ಶಕ್ತಿ ಎಷ್ಟು ಚೀಪ್ ಎಂದು ಎಲ್ಲರಿಗೂ ಗೊತ್ತಿ ಮತ್ತು ಕಂಪನಿಯು ಎಷ್ಟು ದೊಡ್ಡದು ಹಾಗೂ ಅದರ ಎಷ್ಟು ಬಂಡವಾಳ ಹೂಡಲಾಗಿದೆ ಎಂಬುದರ ಮೇ ನಿರ್ಧಾರವಾಗುತ್ತದೆ. ಇಷ್ಟೆಲ್ಲಾ ಆದ ಮೇಲೂ ಕಂಪನಿ ವರ ಪ್ರಕಾರವೇ ಅವರಿಗೆ ಏನಿಲ್ಲಾ ಎಂದರೂ ಶೇ. ೨೫ ೫೦ ವರೆಗೆ ಲಾಭವಿದೆ.

ಆದರೂ ನಾವು ದಿನನಿತ್ಯ ಈ ಕಂಪನಿಗಳ ನೀರಿ ಬಾಟಲಿಗಳನ್ನು ಹಿಡಿದು ಗರ್ವದಿಂದ ಬೀಗುತ್ತಲೇ ಸಾಗು ದ್ದೇವೆ. ಇದರಿಂದ ನಮಗೆ ನಾಚಿಕೆಯಾಗುವುದಿಲ್ಲ ಎಂದ ಈ ದೇಶದ ಆತ್ಮಸಾಕ್ಷಿಗೆ ಕೀಡೆ ಹತ್ತಿದೆ ಎಂದೇ ಭಾವಿಸಬ ಕಾಗುತ್ತದೆಯಲ್ಲವೇ? ಈ ದುರಂತದ ಪರಾಕಾಷ್ಠೆ ಎಂದ ಈ ದೇಶದ "ಅಪ್ರತಿಮ ದೇಶಭಕ್ತರೆಲ್ಲಾ" ಈ ಖಾಸಗಿ ಕಂಪನಿಗಳ ಪರವಾಗಿಯೇ ಇರುವುದು ಮತ್ತು ಖಾಸಗಿ ಕರಣವನ್ನು ಬೆಂಬಲಿಸುತ್ತಿರುವುದು.

ಈ ಬಗ್ಗೆ ಯೋಚಿಸಬೇಕಾದ ಸರದಿ ಈಗ ಈ ದೇಶದ ಎಂಭತ್ತು ಭಾಗ ಬಡವರ ಮೇಲಿದೆ. □

ಶ್ರೀ ಕೆ.ಪಿ ಪೂರ್ಣಚಂದ್ರ ತೇಜಸ್ವಿ

ನೋಡ್ರಿ...., ನಮ್ಮ ಸರ್ಕಾರಗಳು ಎಷ್ಟು ಇನ್ ...ಕ್ಟೀವ್ ಆಗಿವೆ ಅಂತಾ. ಇಷ್ಟು ವರ್ಷ ಜನರ ದುಡ್ಡಲ್ಲಿ ...ಗೆ ಸಂಬಳಾ, ಅದೂ ಇದೂ ಕೊಟ್ಟು ಸಾಕಿದ್ರೂ ...ಕ್ಕೆ ಕುಡಿಯೋ ನೀರ್ನ ಕೊಡೋವಷ್ಟು ವಿದ್ಯೆನೂ ...ಲಿಲ್ವಲ್ರೀ....!!, ಇವರ್ನ ಏನ್ರೀ ಮಾಡೋದು?

ಇವರ್ನ ಏನ್ ಮಾಡೋಕೆ ಬಿಟ್ರೂ ಜನಾನ ಫೂಲ್ ...ಡ್ತಾರ್ರೀ...., ಇಂಥಾ ಜನಾನ ಹೇಗ್ರೀ ...ಸಿಕೊಳ್ಳೋದು.

ಇಂಥವಕ್ಕೆಲ್ಲಾ ಒಂದು ಕೊನೆ ಅಂತಾ ಐತೇನ್ರೀ? ...ಗೇನೋ ಇಲ್ದಂಗೇ ಕಾಣುತ್ತೆ ಕಣ್ರೀ!

ಪ್ರಾಕ್ಟಿಕಲ್ಲಾಗಿ ಬಿಡ್ರೀ..., ಥಿಯರಿಟಿಕಲ್ಲಾಗಿಯಾದ್ರೂ ...ದು ಪರಿಹಾರ ಹೊಳೀತಿಲ್ವೆಲ್ರೀ.

ಎಂಗ್ರೀ ಸಹಿಸಿಕೊಳ್ಳೋದು ಇಂಥವನ್ನೆಲ್ಲಾ? ೪೦-... ವರ್ಷದಲ್ಲಿ ಈ ದೇಶಾನೇ ಹಾಳ್ಮಾಡಿಬಿಟ್ಟರೆಲ್ರೀ.

ನೀರು ಯಾವುದಾದ್ರೂ ಆಗ್ಲಿ, ಅದು ಜನರ ಸ್ವತ್ತು, ...ನ್ನ ಎಂಗ್ರೀ ಖಾಗಿಯೋರಿಗೆ ಕೊಡ್ತಾರೆ! ಇದು ...ನ್ಯನೇನ್ರೀ?

ಇದು ಸಾಧ್ಯನೇ ಇಲ್ಲಾ ಮಾರಾಯಾ.

ನಮ್ಮ ದೇಶ/ಜನಾ ಅಷ್ಟೋಂದು

ಹಾಳಾಗೋಗಿದ್ದಾರಾ? ಈ ಸರ್ಕಾರದ ಮುಂಡೇ ...ಳ್ಳಿಗೆ ಇದೆಲ್ಲಾ ಯಾಕೆ ಅರ್ಥ ಆಗೋಲ್ಲ ಮಾರಾಯಾ. ...ಥವನ್ನೆಲ್ಲಾ ತಡಕೊಳ್ಳೋಕೆ ಆಗೋಲ್ಲ..., ...ರೋಧಿಸಲೇಬೇಕು. □



ಶ್ರೀ ದೇವನೂರು ಮಹದೇವ

ನಿರುದ್ಯೋಗ, ಬಡತನವನ್ನು ಜನರಿಗೆ ಉಣ್ಣಿಸುತ್ತಿರುವ ಸರ್ಕಾರವು ಕುಡಿಯುವ ನೀರನ್ನು ಖಾಸಗೀಕರಣಗೊಳಿಸುವ ಮೂಲಕ ಸುಲಿಗೆಗೆ ಅವಕಾಶ ಕೊಟ್ಟಿದೆ.

ಇದು ಬಡತನಕ್ಕೆ ಬರೆ ಎಳೆದಂಥ ಕ್ರೂರ ಕ್ರಮ.

ಸರ್ಕಾರ ತನ್ನ ನೌಕರಶಾಹಿ ಅಸಮರ್ಥತೆಯಿಂದಾಗಿ ಖಾಸಗೀಕರಣಕ್ಕೆ ಕುಡಿಯುವ ನೀರನ್ನು ಒಪ್ಪಿಸುವ ಅನಿವಾರ್ಯತೆ ಉಂಟಾದರೆ ಸರ್ಕಾರವೇ ತಗಲುವ ಖರ್ಚನ್ನು ವಹಿಸಿಕೊಂಡು ಜನಸಾಮಾನ್ಯರಿಗೆ ಉಚಿತ ನೀರನ್ನು ನೀಡಬೇಕಾದ ಜವಾಬ್ಧಾರಿ ವಹಿಸಿಕೊಳ್ಳಬೇಕಾಗುತ್ತದೆ. □

ನೀರು ತಾಯಿಯಂತೆ ಮಾರುವುದು ಹೇಗೆ?

ಡಾ॥ ಚಂದ್ರಶೇಖರ ಕಂಬಾರ

ಖಾಸಗೀಕರಣ ಮಾಡಲೇ ಕೂಡದು. ಆಮೇಲೆ ಇದರಲ್ಲಿ ಬೇಕಾದಷ್ಟು ನಮ್ಮ ಅಭಿಮಾನಕ್ಕೆ, ಜೀವಗಳಿಗೆ ಅಪಾಯವಾಗತಕ್ಕಂಥ ಅಂಶಗಳಿವೆ ಮತ್ತು ಇದು ನಮ್ಮನ್ನು ನಾವೇ ಮಾರ್‍ಕೊಳ್ತಕ್ಕಂತಾ ಪರಿಸ್ಥಿತಿಗೆ ಒಡ್ಡುತ್ತದೆ. ತಕ್ಷಣ ಇದನ್ನ ನಿಲ್ಲಿಸಬೇಕು.

ಮತ್ತು ಖಾಸಗೀಕರಣವನ್ನು ಖಂಡಿತಾ... ಖಂಡಿತ... ಖಂಡಿತಾ.... ಮಾಡಕೂಡದು.

ಇದನ್ನ ನಾನು ಬೇಕಂತಲೇ ಮೂರುಸಾರಿ ಹೇಳ್ತಿದ್ದೀನಿ.

ಲೋಕಲ್ ಬಾಡಿಗಳನ್ನ ಕ್ರಿಯೇಟ್ ಮಾಡಿ ಅವರಿಗೇsss ಕೊಡಬೇಕು. ಇನ್ನೊಂದು ಮಾತಿಲ್ಲ ಇದ್ರಲ್ಲಿ..., ದೂಸ್ರಾ ಮಾತಿಲ್ಲ.

ಆಮೇಲೆ ಹಾಗೇ ವಿಶ್ವಬ್ಯಾಂಕಿನ ಹಣವನ್ನ ನಿರಾಕರಿಸಬೇಕಾಗಿ ಬಂದಾಗ ಅಥ್ವಾ ಸಾಲತೀರಿಸಬೇಕಾಗಿ ಬಂದಾಗ ಅದರ ಬಗ್ಗೆ ಮಾತ್ರ ಸರ್ಕಾರ ತಲೆಯನ್ನ ಖರ್ಚುಮಾಡಬೇಕೇ ಹೊರತು ಆಲ್ಟರ್ನೇಟೀವಾಗಿ ಯಾವ ರೀತೀಲಿ ಅವರ ಜೊತೆ ಒಪ್ಪಂದ ಮಾಡ್ಕೋಬೇಕು ಅನ್ನೋದನ್ನ ಯೋಚನೆ ಮಾಡತಕ್ಕದ್ದಲ್ಲ. ಹಾಗೆ ಯೋಚ್ನೆ ಮಾಡಿದ್ರೆ ದೇಶದ್ರೋಹ ಆಗುತ್ತೆ.

ನಾನೂ ನಿಮ್ಮೊಂದಿಗಿರ್‍ತೀನಿ ಮತ್ತು ವಿಧಾನ ಪರಿಷತ್ ವೇದಿಕೆಯಲ್ಲಿ ಇದನ್ನ ಪ್ರಸ್ತಾಪ ಮಾಡ್ತೀನಿ. □



ಪ್ರೊ. ಕೆ. ರಾಮದಾಸ್

ಒಂದು ದುರ್ಬಲ ಸರ್ಕಾರ ಮಾತ್ರ ...ಥಾ ಯೋಚನೆ ಮಾಡಬಲ್ಲದು. ಇದು ...ವಿಧಾನ ದತ್ತವಾದ ಜನರ ಮೂಲಭೂತ ...ಕ್ಕು ಹಾಗೂ ಮುಖ್ಯವಾಗಿ ಮಾನವ ಹಕ್ಕುಗಳ ...ಲ್ಲಂಘನೆಯಾಗುತ್ತದೆ. ಇದನ್ನು ನಮ್ಮ ...ರ್ಕಾರವೇ ಅಲ್ಲ ಯಾವ ಸರ್ಕಾರವೂ ಮಾಡಲು ...ಧ್ಯವಿಲ್ಲ. ನೀರನ್ನು ಮಾರುವ ಅಥವಾ ...ಾರಾಟಕ್ಕೆ ವಹಿಸುವ ಯಾವ ಅಧಿಕಾರಗಳೂ ...ರ್ಕಾರಕ್ಕಿಲ್ಲ. ಹೀಗಿದ್ದಾಗ ಅದು ಹೇಗೆ ನೀರನ್ನು ...ಾರಲು ಬೇರೆಯವರಿಗೆ ಅಧಿಕಾರ ಕೊಡುತ್ತದೆ? ...ೀರು ಜನರ ಸ್ವತ್ತು. ಈ ಜಗತ್ತಿನ ಜೀವಿಗಳ ...ಜನ್ಮ ಸ್ವತ್ತು.

...ಹೀಗೆ ಮಾಡುವುದಾದರೆ ಅದು



ಸಂವಿಧಾನವನ್ನು ಉಲ್ಲಂಘಿಸಿದಂತಾಗುತ್ತದೆ. ಆಗ ಸಂವಿಧಾನದ ನಿಯಮಗಳ ಉಲ್ಲಂಘನೆಯನ್ನು ನಾವು ಹೇಗೆ ಸ್ವೀಕರಿಸಬೇಕೋ ಹಾಗೆ ಸ್ವೀಕರಿಸಬೇಕಾಗುತ್ತದೆ.

ಈ ವರ್ಡ್‌ಬ್ಯಾಂಕ್, ಡಬ್ಲ್ಯುಯು.ಟಿ.ಓ.,ಗಳ ಒತ್ತಡಕ್ಕೇನಾದರೂ ಮಣಿದು ಸರ್ಕಾರ ನೀರನ ಖಾಸಗೀಕರಣ ಮಾಡುವುದಾದರೆ ಅದನ್ನು ಹೇಗೆ ಸರಿಮಾಡಬೇಕೆಂದು ನಮ್ಮ ಜನಕ್ಕೂ ಗೊತ್ತಿದೆ. ಅವರೇನು ದಡ್ಡರಲ್ಲ. ತಮ್ಮ ಜೀವಕ್ಕೇ ಸಂಚಕಾರ ಬಂದಾಗ ಯಾರೂ ಕೈಕಟ್ಟಿ ಕೂಡುವುದಿಲ್ಲ.

ಎಲ್ಲ ಜನಪರ ಸಂಘಟನೆಗಳೂ ಒಗ್ಗೂಡಿ ಹೋರಾಟಮಾಡುವುದು ಅನಿವಾರ್ಯವಾಗುತ್ತದೆ. ನಾನಂತೂ ಈ ಹೋರಾಟದ ಭಾಗವಾಗಿರುತ್ತೇನೆ. ಅವರು ಗೆಲ್ಲುವುದು ಅಷ್ಟು ಸುಲಭವಲ್ಲ. □

ಮುಸ್ಲಿಂ ಮಹಿಳೆಯರ ಹೋರಾಟದ ಬದುಕು

ಕೆ. ಷರೀಫಾ

ಒಡಲಾಳ

ಭಾರತೀಯ ಸಮಾಜದ ಮುಸ್ಲಿಂ ಮಹಿಳೆಯರು ಅಸಂಘಟಿತ ಕ್ಷೇತ್ರಗಳಾದ, ಬೀಡಿ, ಅಗರಬತ್ತಿ ಉಡುಪು ಕೈಗಾರಿಕೆ, ಮಣಿ ತಯಾರಿಸುವ ಉದ್ಯಮಗಳಲ್ಲಿ ಕೆಲಸಮಾಡುತ್ತಿದ್ದಾರೆ. ಇಲ್ಲಿ ದಿನವಿಡೀ ದುಡಿದರೂ ದಕ್ಕುವುದು ಕೇವಲ ೪೦ ರಿಂದ ೫೦ ರೂಪಾಯಿಗಳು ಮಾತ್ರ. ಈ ಮಹಿಳೆಯ ಕೆಲಸಕ್ಕೆ ಕುಟುಂಬದ ಜನರೂ ಮಕ್ಕಳೂ ಕೈಗೂಡಿಸುತ್ತಾರೆ. ಆದರೂ ಗಳಿಸುವ ಮೊತ್ತ ಮಾತ್ರ ಅತ್ಯಲ್ಪ. ಹಣೆಗೆ ಹಚ್ಚುವ ಬಿಂದಿ ತಯಾರು ಮಾಡುವ ಮಹಿಳೆಯರು ೪೪ ಪ್ಯಾಕೆಟ್ ಬಿಂದಿ (ಟಿಕಲಿ) ತಯಾರು ಮಾಡಿದ ನಂತರ ಅವರಿಗೆ ದಕ್ಕುವುದು ಕೇವಲ ೫ ರೂಪಾಯಿ ಗಳ ಕೂಲಿ.

ಭಾರತದಲ್ಲಿಯ ಜನಸಂಖ್ಯೆಯ ಒಂದು ದೊಡ್ಡ ಭಾಗ ಮುಸ್ಲಿ ಮರಿದ್ದಾರೆ. ಆದರೆ ಮುಸ್ಲಿಂಮಹಿಳೆಯರ ಸಮಸ್ಯೆಗಳನ್ನು, ಯಾವ ತ್ತಾದರೂ ಚರ್ಚೆಗೆ ತೆಗೆ ದುಕೊಂಡರೆ ಅದು ಕೇವಲ "ಮುಸ್ಲಿಂ ವೈಯಕ್ತಿಕ ಕಾನೂನಿ ನ"ವರೆಗೆ ಮಾತ್ರ ಸೀಮಿತವಾಗುತ್ತದೆ. ಆದರೆ ಮುಸ್ಲಿಂ ಮಹಿಳೆ ಯರ ಬದುಕಿನ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ನಿರ್ಲಕ್ಷಿಸಲಾಗು ತ್ತಿದೆ ಮುಸ್ಲಿಂ ಮಹಿಳೆ ಬದು ಕಿಗಾಗಿ ಪ್ರತಿದಿನ ಸಂಘರ್ಷ ನಡೆಸುತ್ತಿ ದ್ದಾಳೆ. ಅಸಮಾನತೆ ಯಿಂದ ಕೂಡಿದ ದ್ವಿನೀತಿಯ ಮೌಲ್ಯಗಳ ಮಧ್ಯೆ ಬದುಕುತ್ತಿರುವ ಮುಸ್ಲಿಂ ಮಹಿಳೆ ಸಮಾನತೆಗಾಗಿ ಹಾಗೂ ತಾನು ಜೀವಂತವಾಗಿ ಇರುವುದಕ್ಕಾಗಿ ಅನೇಕ ಹೋರಾಟಗಳನ್ನು ನಡೆಸುತ್ತಿದ್ದಾಳೆ.

ಮುಸ್ಲಿಂ ಮಹಿಳೆ ಮುಸ್ಲಿಂ ಆಗಿರುವ ಕಾರಣಕ್ಕೆ ಹಾಗೂ ಶ್ರಮಿಕಳಾ ಗಿರುವ ಕಾರಣಕ್ಕೆ ಅವಳ ಅಧಿಕಾರವನ್ನು ವಿವಿಧ ಸ್ಥರಗಳಲ್ಲಿ ಹರಣವಾಗು ತ್ತಿಲ್ಲವೆ? ಮುಸ್ಲಿಂ ಮಹಿಳೆಯರವೇ ಆದ ಇಂತಹ ವಿಶೇಷ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುವದೇ ಇಲ್ಲ. ಮುಸ್ಲಿಂ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗಮನಿಸುವುದರ ಮೂಲಕವೇ ನಾವು ವಾಸ್ತವದಲ್ಲಿ ಅವಳ ಹೋರಾಟದ ಗೊತ್ತು-ಗುರಿ ಹಾಗೂ ದಿಕ್ಕುಗಳನ್ನು ನಿರ್ಧರಿಸುವದು ಸೂಕ್ತವಾಗುತ್ತದೆ.

ಭಾರತೀಯ ಸಮಾಜದ ಮುಸ್ಲಿಂ ಮಹಿಳೆಯರು ಅಸಂಘಟಿತ ಕ್ಷೇತ್ರಗಳಾದ, ಬೀಡಿ, ಅಗರಬತ್ತಿ ಉಡುಪು ಕೈಗಾರಿಕೆ, ಮಣಿ ಮತ್ತು ತಯಾರಿಸುವ ಉದ್ಯಮಗಳಲ್ಲಿ ಕೆಲಸಮಾಡುತ್ತಿದ್ದಾರೆ. ಇಲ್ಲಿ ದಿನವಿಡೀ ಬೀಡಿ ಕಟ್ಟಿದರೂ, ದಿನವಿಡೀ ಅಗರಬತ್ತಿ ವಸೆದರೂ, ದಿನವಿಡೀ ಮುತ್ತುಗ ಳನ್ನು ತಯಾರು ಮಾಡಿದರೂ, ದಿನವಿಡೀ ಬಟ್ಟೆ ಹೊಲಿದರೂ ದಕ್ಕುವುದು ಕೇವಲ ೪೦ ರಿಂದ ೫೦ ರೂಪಾಯಿಗಳು ಮಾತ್ರ. ಈ ಮಹಿಳೆಯ ಕೆಲಸಕ್ಕೆ ಕುಟುಂಬದ ಜನರೂ ಮಕ್ಕಳು ಕೈಗೂಡಿಸುತ್ತಾರೆ. ಆದರೂ ಗಳಿಸುವ ಮೊತ್ತ ಮಾತ್ರ ಅತ್ಯಲ್ಪ. ನಿರಂತರ ದುಡಿದರೂ ಅತ್ಯಂತ ಕಡಿಮೆ ಕೂಲಿ ಗಳಿಸುತ್ತಾಳೆ. ಹಣೆಗೆ ಹಚ್ಚುವ ಬಿಂದಿ ತಯಾರು ಮಾಡುವ ಮಹಿಳೆಯರು ೪೪ ಪ್ಯಾಕೆಟ್ ಬಿಂದಿ (ಟಿಕಲಿ) ತಯಾರು ಮಾಡಿದ ನಂತರ ಅವರಿಗೆ ದಕ್ಕುವುದು ಕೇವಲ ೫ ರೂಪಾಯಿಗಳ ಕೂಲಿ ಸಿಗುತ್ತದೆ. ಅದೇ ರೀತಿ ಜರ್ದೋಸಿ ಕೆಲ ಸವಿದೆ. ಜರ್ದೋಸಿ ಕೆಲ ಸದ ಒಂದು ಸೀರೆ ಹೆಣೆಯಲು ಒಂದು ವಾರದ ಸಮಯವಾದರೂ ಕನಿಷ್ಟ ಬೇಕಾಗುತ್ತದೆ ಆದರೆ ಅದಕ್ಕೆ ದೊರಕುವ ಕೂಲಿ ೧೫೦ ಅಥವಾ ೨೦೦- ರೂಪಯಿಗಳು ಮಾತ್ರ.

ಮುಸ್ಲಿಂ ಮಹಿಳೆ ಯರಿಗೆ ಒಟ್ಟಾಗಿ ಒಂದೇ ಸ್ಥರದಲ್ಲಿ ನಿಂತು ಹೋರಾಟ ನಡೆಸುವಂತಿಲ್ಲ. ಅವಳು ಧರ್ಮಾಧಾರಿತ ಅಸಮಾನತೆಯ ವಿರುದ್ಧ ಹೋರಾಟ ಮಾಡುವುದು ಒಂದಾದರೆ ಇನ್ನೊಂದು ದುಡಿಮೆಯಲ್ಲಿ ನಡೆಯುವ ಶೋಷಣೆಯ ವಿರುದ್ಧವೂ ಅವಳ ಹೋರಾಟವಿದೆ-ಒಂದು ಧರ್ಮಾಧಾರಿತವಾದರೆ ಇನ್ನೊಂದು ಶ್ರಮಾಧಾರಿತ ಶೋಷಣೆಯಾಗಿದೆ. ಅವಳು ಈ ಎರಡು ವಿಧವಾದ ಹೋರಾಟಗಳನ್ನು ನಡೆಸಲು ಪ್ರಬಲವಾದ ಸಂಘಟನೆಯನ್ನು ಕಟ್ಟುವುದು ಬಹಳ ಅವಶ್ಯಕವಾಗಿದೆ. ಮುಸ್ಲಿಂ ಮಹಿಳೆಯರ ಸಾಮಾಜಿಕ ಆರ್ಥಿಕ ಹಾಗೂ ಕಾನೂನಿನ ಕುರಿತಾಗಿ ಚರ್ಚೆ ನಡೆಯಬೇಕಿದೆ.

ಮುಸ್ಲಿಂ ಸಮುದಾಯವೂ ಸಹ ಅವರ ಹೆಣ್ಣುಮಕ್ಕಳ ಮೇಲೆ ಧಾರ್ಮಿಕ ನಿರ್ಬಂಧಗಳನ್ನು ಹೇರುತ್ತದೆಯೇ ವಿನಃ ಅವರ ಸಮಸ್ಯೆಗಳ ಕುರಿತು ಗಮನ ಹರಿಸುತ್ತಿಲ್ಲ.

ಮುಸ್ಲಿಂ ಮಹಿಳೆಯರ ಶಿಕ್ಷಣದ ಪ್ರಮಾಣ ತುಂಬಾ ಕಡಿಮೆಯಿ... ನಿರುದ್ಯೋಗ ಸಮಸ್ಯೆ ಬೃಹದಾಕಾರದಲ್ಲಿ ಬೆಳೆದಿದೆ. ಅಗ್ಗದ ಕೂ... ಬಿಟ್ಟರೆ ಅನ್ಯ ಮಾರ್ಗವಿಲ್ಲದಂತಾಗಿದೆ. ಇದಕ್ಕೆ ಆಡಳಿತದಲ್ಲಿರುವ ದಿ... ನಿರ್ಲಕ್ಷ್ಯ ಮತ್ತು ಸ್ತ್ರೀಯರ ಸಮಸ್ಯೆ ಕುರಿತ ಅಸಂವೇದನಾಶೀ... ತೆಯೇ ಕಾರಣವಾಗಿದ್ದು ಒಂದು ಕಡೆಯಾದರೆ, ಇನ್ನೊಂದು ಕ... ಮುಸ್ಲಿಂ ಸಮುದಾಯದ ಕೆಲವು ತಮ್ಮದೇ ಆದ ತೊಡಕುಗಳಿಂದಾ... ಅವರ ಸ್ಥಿತಿಗತಿಗಳಲ್ಲಿ ತೀವ್ರ ಬದಲಾವಣೆ ಸಾಧ್ಯವಾಗುತ್ತಿಲ್ಲ.

ಮುಸ್ಲಿಂ ಸಮುದಾಯವೂ ಸಹ ಅವರ ಹೆಣ್ಣುಮಕ್ಕಳ ಮೇ... ಧಾರ್ಮಿಕ ನಿರ್ಬಂಧಗಳನ್ನು ಹೇರುತ್ತದೆಯೇ ವಿನಃ ಅವರ ಸಮಸ... ಗಳ ಕುರಿತು ಗಮನ ಹರಿಸುತ್ತಿಲ್ಲ. ಗಂಡಸರು ನಿಭಾಯಿಸಬೇಕಾ... ಜವಾಬ್ದಾರಿ ಯಿಂದ ಜಾರಿಕೊಳ್ಳುತ್ತಿದ್ದಾರೆ. ಸ್ತ್ರೀಯರನ್ನು ತಮ್ಮ ಹದು... ಬಸ್ತಿನಲ್ಲಿಡಬೇಕು. ಆದರೆ ತಮಗೆ ಮಾತ್ರ ಯಾವ ಜವಾಬ್ದಾರಿಗಳ... ಹೊರಿಸಕೂಡದೆಂಬ ಹಟಮಾರಿತನವಿದೆ. ಇಂತಹ" ಧಾರ್ಮಿಕ ಜವಾ... ಬ್ದಾರಿ ಹೊರಿಸುವ ಮತ್ತು ಸ್ತ್ರೀಯರಿಗೆ ರಕ್ಷಣೆ ನೀಡುವ "ಮಾಡಲ... ನಿಕಾನಾಮಾ"ವನ್ನು ಅದು ನಿರ್ಲಕ್ಷಿಸುತ್ತದೆ. ಮೂರು ಬಾರಿ ತಲ್ಲಾಖ... ಹೇಳಿ ಹೆಣ್ಣನ್ನು ಬೀದಿಗಟ್ಟುವ ಪದ್ಧತಿ ನಿಲ್ಲಬೇಕಿದೆ-ಇದು ಧರ್ಮಸಮ... ತವೂ ಅಲ್ಲ ಧಾರ್ಮಿಕ ವಿಧಿಗನುಸಾರವಾಗಿಯೇ ಮಹಿಳೆಯರಿಗ... ಕೂಡಮಾಡಿದ ಹಕ್ಕುಗಳ ಬಗ್ಗೆಯೂ ಸಹ ಈ ಸಮಾಜ ದಿವ... ನಿರ್ಲಕ್ಷ್ಯ ತೋರುತ್ತದೆ. ಧಾರ್ಮಿಕ ಸಿವಿಲ್ ಕಾನೂನುಗಳ ಕರ್ತವ್ಯ... ನಿಯಮಗಳನ್ನು ಹೆಂಗಸರ ಹೆಗಲಿಗಿಟ್ಟು ದೂರ ನಿಂತಿರುವ ಮುಸ್ಲಿ... ಸಮುದಾಯದ ಪುರುಷ ವರ್ಗ ಕ್ರಿಮಿನಲ್ ಧಾರ್ಮಿಕ ಕಾನೂನಿ... ಶಿಕ್ಷೆಯ ಕಕ್ಷೆಗೆ ತಮ್ಮನ್ನು ದೂಡದಂತೆ ಬಹಳ ಸುರಕ್ಷಿತವಾಗಿ ದೂ... ನಿಂತಿದ್ದಾರೆ-ತಮ್ಮ ಕರ್ತವ್ಯಗಳಿಂದ ವಿಮುಖವಾಗಿದ್ದಾರೆ. ವರದಕ್ಷಿಣೆ ಪದ್ಧತಿ ಬೇರೆ ಸಮುದಾಯಗಳಲ್ಲಿರುವಂತೆ ಮುಸ್ಲಿಂ ಸಮುದಾಯ... ದಲ್ಲೂ ಜಾರಿಯಿಂದೆ ಆದರೆ ಬೇರೆ ಸಮುದಾಯಗಳಿಗೆ ಹೋಲಿಸಿ... ದರೆ ಇಲ್ಲಿ ವರದಕ್ಷಿಣೆಯ ಪ್ರಮಾಣ ಕಡಿಮೆಯಿದೆ-ಆದರೂ ಇರುವ ವರದಕ್ಷಿಣೆ ಪದ್ಧತಿ ಆ ಸಮುದಾಯಕ್ಕೊಂದು ಕಳಂಕ-ಅದನ್ನು ತೊಡೆದು ಹಾಕಬೇಕಿದೆ.

ತಲ್ಲಾಖ್ ನೀಡಿದ-ಸ್ತ್ರೀಯರಿಗೆ ಕೊಡಬೇಕಾದ ನಿರ್ವ... ಹಣಾಭತ್ಯೆಯನ್ನು ಅವರಿಗೆ ಕೊಡದೇ ವಂಚಿಸಲಾಗುತ್ತಿದೆ. ಎರಡನೇ ವಿವಾಹದ ಸಂದರ್ಭಗಳು, ಅನವಶ್ಯಕವಾಗಿ ಸೃಷ್ಟಿಸಿಕೊಳ್ಳಲಾಗುತ್ತಿದೆ... ಸೇಡುತೀರಿಸಿಕೊಳ್ಳುವ ಅಸ್ತ್ರವಾಗಿಯೂ ಬಳಕೆಯಾಗುತ್ತಿರುವುದು ಖಂಡನಾರ್ಹವಾಗಿದೆ. ೬೫ ವರ್ಷ ವಯಸ್ಸಿನ ಲಖೌನ ಬಕರೀದನ್...

ವಾ ಹೇಳುತ್ತಾಳೆ "ನನಗೆ ವಾಗ ತಲ್ಲಾಖ್ ನೀಡ ಯಿತೋ ನನಗಂತೂ ಗೊತ್ತೇ ಲ್ಲ. ಗಂಡ ತೀರಿಕೊಂಡ ಂತರ ಪೆನ್ಶನ್‌ಗಾಗಿ ನಾನು ಚೇರಿಗೆ ಹೋದಾಗ ನನಗೆ ದು ಬಂತು ನನಗೆ ತಲ್ಲಾಖ್ ಡಲಾಗಿದೆ ಎಂದು. ಇಂದು ನು ಬೀದಿ ಬೀದಿ ಅಲೆಯುತ್ತಿ ನೆ ಯಾವ ಮೌಲಾನಾಗೆ ಸಲಿ? ನಾನೆಲ್ಲಿ ಹೋಗಲಿ? ವಯಸ್ಸಿನಲ್ಲಿ ನಾನು ಬಿಕ್ಷೆ ಡಲೆ?" ಈ ಪ್ರಶ್ನೆಯನ್ನು ರ್ದುರಕ್ಷಕರಿಗೆ ಬಕ್ರೀದನ್ ವಾ ಕೇಳುತ್ತಾರೆ. ಅದಕ್ಕೆ ವ ಮೌಲಾನಾರ ಬಳಿ ತ್ತರವಿದೆ ಹೇಳಿ?

ಸಂಘಟಿತರಾಗಿ ಹೋರಾ ವುದೇ ಈ ಸಮಸ್ಯೆಗಳ ಏಕೈಕ ಹಾರವಾಗಿದೆ- ಸರ್ಕಾರಿ ಲಯಗಳಲ್ಲಿ ಮತ್ತು ಧಾರ್ಮಿಕ ವಲಯಗಳಲ್ಲಿ ರ್ಲಕ್ಷಿತವಾಗಿರುವ ಮುಸ್ಲಿಂ ಸಹೋದರಿಯರು-ಬದುಕಿಗೆ ಂಬಂಧಿಸಿದ ಮೂಲ ಭೂತ ಪ್ರಶ್ನೆಗಳನ್ನು ಹೋರಾಟದ ಸ್ತ್ರವಾಗಿ ಎತ್ತಿ ಕೊಂಡು ತಮ್ಮ ಬದುಕಿನಲ್ಲಿ ಬೆಳಕು ಣಬೇಕಿದೆ.

"ದೀನೀ ತಾಲೀಮ್" ಎಂದರೆ ಧಾರ್ಮಿಕ ಶಿಕ್ಷಣ ಡೆಯುತ್ತಿರುವವರಲ್ಲಿ ಹೆಚ್ಚಿನ ಸಂಖ್ಯೆ ಮಹಿಳೆಯಂದೇ ಗಿದೆ. ಕರ್ನಾಟಕದಲ್ಲಿ ನಾನು ಕಂಡಂತೆ, ಉರ್ದು ಭಾಷಾ ಶಿಕ್ಷಣದ ಕುರಿತ ಸರ್ವೆ ನಡೆಸಿದಾಗ ಕಂಡು ಂದ ಒಂದು ಅಂಶವೇನೆಂದರೆ-ಉರ್ದು ಮಾಧ್ಯಮದಲ್ಲಿ ಯುತ್ತಿರುವ ಮಕ್ಕಳಲ್ಲಿ ೯ ಶೇಕಡಾ ಹೆಣ್ಣು ಮಕ್ಕಳು ದ್ದಾರೆ. ಗಂಡು ಮಕ್ಕಳ ಪ್ರಮಾಣ ಕೇವಲ ಶೇ ೧೦ ಷ್ಟಿತ್ತು. ಇದಕ್ಕೆ ಕಾರಣ ಅನ್ನ ಮೂಲದ ಹುದ್ದೆಗಳಿಗೆ ನ್ನಡ-ಇಂಗ್ಲಿಷ್‌ಗಳು ಸಹಕಾರಿಯಾದಂತೆ ಉರ್ದು ಭಾಷೆ ವರಿಗೆ ಅನ್ನ ಒದಗಿಸುವ ಉದ್ಯೋಗ ಪಡಿಯಲು ಸಹಕಾರಿಯಾಗಿಲ್ಲ. ಸ್ತ್ರೀಯರ ಶಿಕ್ಷಣವನ್ನು ಬಹಳಷ್ಟು ಣವಾಗಿ ಕಾಣುತ್ತಿರುವ ಈ ಸಮಾಜ ಉನ್ನತ ಶಿಕ್ಷಣ ನ್ನು ದಕ್ಕದಂತೆ ಮಾಡಿರುವುದು ಅವರ ಅಂಧ ಶ್ರದ್ಧೆ, ರ್ಮಿಕ ಕಟ್ಟುಪಾಡು ಮತ್ತು ಆರ್ಥಿಕ ಸ್ಥಿತಿಗತಿಗಳಾಗಿವೆ.

ಹೊರ ಜಗತ್ತಿನ ಸಂಪರ್ಕವನ್ನೇ ಕಡಿದುಕೊಂಡ ಮುಸ್ಲಿಂ ಮಹಿಳಾ ಲೋಕ ಬಹಳ ನಿಗೂಢವಾಗಿದೆ- ವರ ಸಮಸ್ಯೆಗಳಿಗಾಗಿ ಅವರೇ ಧ್ವನಿಯೆತ್ತಲೂ ಆಗ ದಂತಹ ಸ್ಥಿತಿ ಅವದಾಗಿದೆ. ಲ್ಲಾ ರೀತಿಯ ಶೋಷಣೆ, ಹಿಂಸೆಯ ವಿರುದ್ಧ ಸಾಮಾ ಜಿಕ ಅನ್ಯಾಯ ಕೋಮುವಾದದ ವಿರುದ್ಧ ಅವರು ಧ್ವನಿ ಎತ್ತಬೇಕಿದೆ. ಅನೇಕ ಮಹಿಳೆಯರು ಇಂದು ಪತಿಯ ನುಮತಿಯಿಲ್ಲದೆ ಹೊರ ಬರುವಂತಿಲ್ಲ. ಒಂದು ವೇಳೆ ಗೇನಾದರೂ ಅವರು ಹೊರಗೆ ಹೋದರೆ ಪತಿಯು ಖ್ ನೀಡಬಹುದೆಂಬ ಬಿಚ್ಚುಗತ್ತಿ ಅವರ ತಲೆಯ ತೂಗುತ್ತಿರುತ್ತದೆ. ಸದಾ ಭಯದ ನೆರಳಲ್ಲಿ ಅವರ ದುಕು ಕೊನೆಗೊಳ್ಳುತ್ತಿದೆ. ಇಂತಹದರಲ್ಲಿ ಈ ಸಮುದಾ

ಹೊರ ಜಗತ್ತಿನ ಸಂಪರ್ಕವನ್ನೇ ಕಡಿದುಕೊಂಡ ಈ ಮುಸ್ಲಿಂ ಮಹಿಳಾ ಲೋಕ ಬಹಳ ನಿಗೂಢವಾಗಿದೆ-ಅವರ ಸಮಸ್ಯೆಗಳಿಗಾಗಿ ಅವರೇ ಧ್ವನಿಯೆತ್ತಲೂ ಆಗದಂತಹ ಸ್ಥಿತಿ ಅವದಾಗಿದೆ. ಎಲ್ಲಾ ರೀತಿಯ ಶೋಷಣೆ, ಹಿಂಸೆಯ ವಿರುದ್ಧ ಸಾಮಾಜಿಕ ಅನ್ಯಾಯ ಕೋಮುವಾದದ ವಿರುದ್ಧ ಅವರು ಧ್ವನಿ ಎತ್ತಬೇಕಿದೆ. ಅನೇಕ ಮಹಿಳೆಯರು ಇಂದು ಪತಿಯ ಅನುಮತಿಯಿಲ್ಲದೆ ಹೊರ ಬರುವಂತಿಲ್ಲ. ಒಂದು ವೇಳೆ ಹಾಗೇನಾದರೂ ಅವರು ಹೊರಗೆ ಹೋದರೆ ಪತಿಯು ತಲ್ಲಖ್ ನೀಡಬಹುದೆಂಬ ಬಿಚ್ಚುಗತ್ತಿ ಅವರ ತಲೆಯ ಮೇಲೆ ತೂಗುತ್ತಿರುತ್ತದೆ. ಸದಾ ಭಯದ ನೆರಳಲ್ಲಿ ಅವರ ಬದುಕು ಕೊನೆಗೊಳ್ಳುತ್ತಿದೆ. ಇಂತಹದರಲ್ಲಿ ಈ ಸಮುದಾಯದ ಮಹಿಳೆಯರು ಹೆಚ್ಚಾಗಿ ಪತಿಯ ಆಣತಿಯಂತೆ, ಪತಿಯ ಅನುಕೂಲಕ್ಕಾಗಿ ನಡೆಯುವ, ಯಾವತ್ತೂ ಸ್ತ್ರೀವಿರೋಧಿಯಾಗಿರುವ ಪುರುಷ ರೂಪಿಸಿದ, ಸಂಘಟಿಸಿದ ಹೋರಾಟಗಳಲ್ಲಿ ಮಾತ್ರ ಭಾಗವಹಿಸಬೇಕಾಗಿರುವ ಅನಿವಾರ್ಯತೆಯಿದೆ.

ಯದ ಮಹಿಳೆಯರು ಹೆಚ್ಚಾಗಿ ಪತಿಯ ಆಣತಿಯಂತೆ, ಪತಿಯ ಅನುಕೂಲಕ್ಕಾಗಿ ನಡೆಯುವ, ಯಾವತ್ತೂ ಮಹಿಳಾ ವಿರೋದಿಯಾಗಿರುವ ಪುರುಷ ರೂಪಿಸಿದ, ಸಂಘಟಿಸಿದ ಹೋರಾಟಗಳಲ್ಲಿ ಮಾತ್ರ ಭಾಗವಹಿಸಬೇಕಾಗಿರುವ ಅನಿವಾರ್ಯತೆಯಿದೆ. ಶಾಬಾನು ಪ್ರಕರಣದಲ್ಲಿಯೂ ಸ್ತ್ರೀಯರೇ ಒಬ್ಬ ಸ್ತ್ರೀಯ ವಿರೋಧಿಯಾಗಬೇಕಾದ ಅನಿವಾರ್ಯತೆ ಅವರಿಗಿತ್ತು. ಏಕೆಂದರೆ ಸ್ವತಂತ್ರ ನಿರ್ಣಯ ಕೈಕೊಳ್ಳುವ ಹಂತವಿನ್ನೂ ಅವರು ತಲುಪಿಲ್ಲ. ಅದಕ್ಕೆ ಬೇಕಾದ ಶಿಕ್ಷಣ, ಉದ್ಯೋಗ ಮಾನಸಿಕ ಹಾಗೂ ಆತ್ಮ ವಿಶ್ವಾಸ ಅವರಲ್ಲಿ ಮೂಡಿ ಬರಬೇಕಿದೆ.

ಇಸ್ಲಾಂನಲ್ಲಿ ಕುಡಿಯು ವುದು, ನಿಶೆ ಮಾಡುವುದು ನಿಷಿದ್ಧವಾಗಿದೆ. ಆದರೂ ಶೇ ೮೦ ರಷ್ಟು ಪುರುಷರು ಕುಡಿ ಯುತ್ತಾರೆ, ಜೂಜಾಡುತ್ತಾರೆ. ಅದರಲ್ಲಿ ಅನೇಕರು ಇಸ್ಲಾಂನ -ನಿಷಿದ್ಧ ಎಷ್ಟೋ ಕಾರ್ಯಗಳನ್ನು ರಾಜಾ ರೋಷವಾಗಿ ಮಾಡುತ್ತಾರೆ. ಆದರೆ ಅದೇ ಮಹಿಳೆಯರಿಗೆ ಪೈಗಂಬರರು ತಿಳಿಸುವಂತೆ, "ಅವರವರ ದುಡಿಮೆಯ ಲಾಭವನ್ನು ಅವರು ಇಟ್ಟುಕೊಳ್ಳಬಹುದು" ಹೆಣ್ಣಿನ ಆರ್ಥಿಕ ದುಡಿಮೆಯ ಹಣವನ್ನು ಅವಳು ತನ್ನಿಷ್ಟದಂತೆ ಖರ್ಚು ಮಾಡಬಹುದಾಗಿದೆ. ಆದರೆ ಇಂದಿಗೂ ಅವರ ಕುಟುಂಬ ಗಳು ಅವರ ಹಕ್ಕಿನ ಹಣವನ್ನು ಬಳಸಲು ಬಿಡುವುದಿಲ್ಲ. ಗಂಡನ ಹೊಡೆತಗಳಿಂದಲೂ ಈ ಸಮುದಾಯದ ಸ್ತ್ರೀಯರು ಬಿಡುಗಡೆಯಾಗಿಲ್ಲ.

ಮುಸ್ಲಿಂ ಮಹಿಳೆ ಸುಶಿಕ್ಷಿತಳಾಗುವುದರೊಂದಿಗೆ ಸಂಘ ಟಿತರಾಗಲು ಬಹಳಷ್ಟು ಮಹಿಳೆಯರು ಮುಂದ ಬರಬೇಕಿದೆ-ಸಮುದಾಯದ ಸಮಸ್ಯೆಗಳೊಂದಿಗೆ ಸ್ತ್ರೀಯ ರವೇ ಆದ ಪ್ರತ್ಯೇಕ ಸಮಸ್ಯೆ ಬಗ್ಗೆಯೂ ಹೋರಾಡ ಬೇಕಿದೆ. ಆ ಮೂಲಕ ಅವರದೇ ಆದ ವಿಶೇಷ ಸಮಸ್ಯೆ ಗಳತ್ತ ಸರ್ಕಾರದ ಗಮನ ಸೆಳೆಯುವುದ ರೊಂದಿಗೆ ತಮ್ಮ ಸಮಸ್ಯೆಗಳ ಸಮೀಪ ಬರುವಂತೆ ಮಾಡಿ ಬೇಕಿದೆ. ಮತ್ತು ಅವರದೇ ಆದ ಧಾರ್ಮಿಕ, ಸಾಂಪ್ರದಾಯಿಕ ಶಕ್ತಿಗಳ ಕಾರಣದಿಂದಾಗಿ ೧೯೮೦ರ ದಶಕದಿಂದೀಚೆಗೆ ಹಬ್ಬಿ ರುವ ಧಾರ್ಮಿಕ ವಿಷಮತೆಯಿಂದಾಗಿ ಉಂಟಾಗಿರುವ ಕಂದಕ ಗಳನ್ನು ತುಂಬುವ ಕೆಲಸವಾಗಬೇಕಿದೆ. ಒಬ್ಬರು ಇನ್ನೊ ಬ್ಬರನ್ನು ನೋಡುತ್ತಿರುವ ಸಂಶಯದ ದೃಷ್ಟಿಕೋನಗಳ ನಿವಾರಣೆಯಾಗಿ, ಸದ್ಭಾವನೆ ಒಡಮೂಡಬೇಕಿದೆ. ಕೋಮುವಾದಿ ದಂಗೆಗಳು ಮೇಲಿಂದ ಮೇಲೆ ನಡೆಯುತ್ತಿ ರುವುದರಿಂದ ಭಾರತೀಯ ಮುಸ್ಲಿಂ ಸಮುದಾಯ ಯಾವತ್ತೂ ಭಯದ ನೆರಳಲ್ಲಿ ಅಭದ್ರ ಬದುಕು ಸಾಗಿ ಸುತ್ತಿದೆ ದೇಶದ ಯಾವುದಾದರೂ ಒಂದು ಮೂಲೆಯಲ್ಲಿ

ತಾನು ಸುರಕ್ಷಿತವಾಗಿ ಬದುಕಬಹುದೆಂಬ ಬದುಕಿನ ತಾಣಗಳು ಭಾರತದಲ್ಲಿ ನಿರ್ಮಿಸಬೇಕಿದೆ. ಅದಕ್ಕಾಗಿ ಸೌಹಾರ್ದ ಬದುಕಿಗೆ ಒತ್ತು ನೀಡಬೇಕಿದೆ. ಮುಸ್ಲಿಂ ಧರ್ಮದ ಗುತ್ತಿಗೆದಾರರು-ಧರ್ಮವನ್ನೇ ತಮ್ಮ ಅಸ್ತ್ರವನ್ನಾಗಿ ಮಾಡಿಕೊಂಡು ಹೆಣ್ಣುಮಕ್ಕಳ ಹಕ್ಕು ಮತ್ತು ಸ್ವಾತಂತ್ರ್ಯಗಳ ಮೇಲೆ ನಿರಂತರ ಹಲ್ಲೆ ನಡೆಸುತ್ತಿದ್ದಾರೆ. ಅದು ಇಮ್ರಾನ್‌ಳ ಪ್ರಕರಣವೇ ಆಗಿರಬಹುದು ಶಾಬಾನು ವಿನ ಪ್ರಕರಣವೇ ಆಗಿರಬಹುದು. ಅಥವಾ ಸಾನಿಯಾ ಮಿರ್ಜಾಳ ಆಟ, ಉಡುಗೆಯ ವಿರುದ್ಧದ ಪಾತ್ವ ಆಗಿರ ಬಹುದು. ಈ ಎಲ್ಲ ಸಮಸ್ಯೆಗಳು ಮುಸ್ಲಿಂ ಮಹಿಳೆಯರ ಸಮಸ್ಯೆಯೆಂದು ಇತರ ಸಮುದಾಯದ ಮಹಿಳೆಯರು ಗೌಣವಾಗಿ ಕಾಣಬೇಕಾಗಿಲ್ಲ ಅಥವಾ ಈ ಸಮಸ್ಯೆಗಳು ಮಹಿಳಾ ಚಳುವಳಿಯ ಭಾಗವಲ್ಲ-ಇವು ಒಂದು ಸಮುದಾಯದ ಸ್ತ್ರೀಯರ ಸಮಸ್ಯೆಗಳೆಂದು ಅಲ್ಲಗಳೆಯಲಾಗದು. ಒಟ್ಟು ಮಹಿಳಾ ಆಂದೋಲನದ ಭಾಗವಾಗಿ ಮುಸ್ಲಿಂ ಮಹಿಳೆ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕಿದೆ-ಒಟ್ಟಾರೆಯಾಗಿ ಮಹಿಳಾ ಸಮಸ್ಯೆಗಳ ವಿರು ಧ್ಧದ ಹೋರಾಟದಲ್ಲಿ ಮುಸ್ಲಿಂ ಮಹಿಳಾ ಸಮಸ್ಯೆಗಳನ್ನೂ ಸಹ ಪರಿಗಣಿಸಬೇಕಿದೆ. ಆಗಲೇ ಅವರ ಸಮಸ್ಯೆಗಳ ಪರಿಹಾರಕ್ಕೆ ವಿಶಾಲ ವೇದಿಕೆ ದೊರಕುತ್ತವೆ. ಯಾವ ಕೋಮಿನ ಮಹಿಳೆಯ ಸಮಸ್ಯೆಯೇ ಆಗಲಿ ಅದು ಮಹಿಳಾ ಸಮಸ್ಯೆಯಾಗಿ ಪರಿಗಣಿ ಸುವ ವಿಶಾಲ ವೇದಿಕೆಗಳು ಬೇಕಿವೆ-ಹಿಂದುತ್ವ ವಾದಿ ಶಕ್ತಿಗಳು ಮುಸ್ಲಿಮರ ವಿರುದ್ಧ ಭ್ರಮೆಗಳನ್ನು ಹುಟ್ಟು ಹಾಕಿ ಅವರನ್ನು ಅರಕ್ಷಿತರಂತೆ ಅನಾಥ ಪ್ರಜ್ಞೆ, ಹುಟ್ಟು ಹಾಕುವ, ಅವರನ್ನು ಸಂಶಯದ ದೃಷ್ಟಿಯಿಂದ ನೋಡುವಂತೆ ಮಾಡಿರುವ ವಾತಾ ವರಣವನ್ನು ಪ್ರೀತಿ ಸೌಹಾರ್ದದಿಂದ ಕೂಡಿರುವಂತೆ ಮಾಡಲು ಯೋಜನೆಗಳನ್ನು ರೂಪಿಸಿಕೊಳ್ಳಬೇಕಿದೆ. ಈ ಎರಡು ಸಮುದಾಯಗಳ ನಡುವಿನ ಗೋಡೆಯನ್ನು ಕೆಡುವಬೇಕಿದೆ.

ಮುಸ್ಲಿಂ ಮಹಿಳೆ ಮದುವೆಯಾಗುವಾಗಲೇ ವರನಿಂದ ಅವಳ ನಿರ್ಧಾರಿತ 'ಮೆಹರ್'ನ ಮೊತ್ತ ಕೊಡಬೇಕೆಂದಿದೆ. ಆದರೆ ೧೦೦೦ ಕ್ಕೆ ಒಬ್ಬರಾದರೂ ಮದುವೆ ಸಮಯದಲ್ಲಿ ಮೆಹರ್‌ನ ಮೊತ್ತ ನೀಡಿದವರು ಸಿಗುವುದಿಲ್ಲ ನೂರಕ್ಕೆ ೯೫ ಜನ ಮಹಿಳೆಯರು ಬುರ್ಖಾ ಧರಿಸುವುದನ್ನು ಇಷ್ಟ ಪಡುವುದಿಲ್ಲ. ಆದರೂ ಮನೆಯವರ ಒತ್ತಾಯಕ್ಕೆ ಮಾತ್ರ ಧರಿಸುತ್ತಿದ್ದಾರೆ.

ಮುಸ್ಲಿಂ ಸಮಾಜದಲ್ಲಿಯೂ ಹೆಣ್ಣು ಮಗುವಿನ ಭ್ರೂಣ ಹತ್ಯೆಯೂ ನಡೆಯುತ್ತಿದೆ. ಭಾರತದಲ್ಲಿರುವ ಒಟ್ಟು ಮುಸ್ಲಿಂ ಪುರುಷರ ಸಂಖ್ಯೆಗೆ ಹೋಲಿಸಿದರೆ ೪೫, ೬೦,೦೦೦ ಮುಸ್ಲಿಂ ಮಹಿಳೆಯರು ಕಡಿಮೆಯಿದ್ದಾರೆ. ಉತ್ತರ ಪ್ರದೇಶದಲ್ಲಿ ೧೩,೧೬, ೦೦೦ ಮಹಿಳೆಯರು ಕಡಿಮೆಯಿದ್ದಾರೆ. ಸಹಾರನಪುರದಲ್ಲಿ ೭೭,೦೦೦ ಮತ್ತು ಲಖೌನಲ್ಲಿ ೩೪,೦೦೦, ಖಾನಪುರದಲ್ಲಿ ೪೦,೦೦೦ ದಷ್ಟು ಹೆಣ್ಣುಮಕ್ಕಳು ಕಡಿಮೆಯಿರುವುದೇ-ಮುಸ್ಲಿಂ ಸಮಾಜದಲ್ಲಿಯೂ ಭ್ರೂಣಹತ್ಯೆ ನಡೆಯುತ್ತಿರುವುದನ್ನು ಸೂಚಿಸುತ್ತವೆ.

ಮುಸ್ಲಿಂ ಮಹಿಳೆ, ತನ್ನ ಶಿಕ್ಷಣಕ್ಕಾಗಿ, ತನ್ನ ಒಳಗಿನ ಮತೀಯ ಶಕ್ತಿಗಳ ವಿರುದ್ಧ ಮತ್ತು ತನ್ನ ಹಕ್ಕುಗಳಿಗಾಗಿ ಹೋರಾಡುತ್ತಲೇ ನೈಸರ್ಗಿಕ ಸಮತೋಲನ ಕಾಯ್ದುಕೊಳ್ಳಲು ಹೆಣ್ಣು ಭ್ರೂಣ ಹತ್ಯೆ ವಿರುದ್ಧ ಹೋರಾಡಬೇಕಿದೆ-ದಿನನಿತ್ಯ ಬದುಕಿಗಾಗಿ ಹೋರಾಡುತ್ತಲೆ ಬಂದ ಈ ಸಮುದಾಯದ ಮಹಿಳೆ ತನ್ನ ಮಾನವೀಯ ಹಕ್ಕುಗಳಿಗಾಗಿ ವಿಶ್ವಶಾಂತಿಗಾಗಿ ಇನ್ನೂ ಹೋರಾಡುತ್ತಲೇ ಬದುಕಬೇಕಿದೆ. □

ಝೆನ್ ಗಜಲು



ಬುದ್ಧ ಭಿಕ್ಷೆಗೆ ಬಂದಾನ, ತಂಗಿ ನೀಡ ಬಾರೆ
ಇವನಂಥ ಜ್ಞಾನಿಯಿಲ್ಲ ಬೇರೆ ನೋಡ ಬಾರೆ

ನಡೆ,ನಡೆ ಒಂದೊಂದು ಅತಿದೃಢ ನೋಡೆ
ಕಣ್ಣು ತುಂಬಿದ ಕಕ್ಕುಲಾತಿ ನೋಡಬಾರೆ

ಮಡದಿಮಗನ್ನ ಬಿಟ್ಟು, ರಾಜಭೋಗವಬಿಟ್ಟು
ತನ್ನೊಳಗೆ ತಾಸುಟ್ಟ ಬೆಳಕನ್ನುಡ ಬಾರೆ

ಮನಮೊ‘ಟ, ತನುಮೊ‘ಟ, ಜೀವಕಿನ್ನುರಿಮೊ‘ಟ,
ಮೋಧದಿ ಹರಿವ ನಾದದ ನದಿಯ ಕೂಡ ಬಾರೆ

ಶಾಂತಿ ಸಹನಾಮೂರ್ತಿ, ಭೂಭಾಗ ಬೆಳಗಿದ ಕೀರ್ತಿ
ಕಾಲವರಿತ ತಥಾಗತನಿಗೆ ಎಡೆ ನೀಡ ಬಾರೆ

ಬೆಟ್ಟಗುಡ್ಡ ಸುತ್ತಿ, ಕಾಡು ಮೇಡು ಅಲೆದ ಬುದ್ಧನ-
ಬಾಧೆಯ ಬೋದಿಯ ಬೆಳಕು ಪಡೆಬಾರೆ

ದುಡ್ಡು, ದುಗ್ಗಾಣಿ ಬೇಡೋದಿಲ್ಲ ನೋಡು ಬುದ್ಧನು
ದುಗುಡ, ದುಮ್ಮಾನ ಕೇಳ್ತಾನೆ, ಕೊಡ ಬಾರೆ

ದುಃಖಕೆ ಆಶೆ ಮೂಲ ಅಂತಾನೆ ಬುದ್ಧನು
ಅಷ್ಟಾಂಗ ಮಾರ್ಗವ ತೋರುವಾತನ ಬೇಡಬಾರೆ

ನಿಬ್ಬಾಣ: ಅರಿವಿನ ದಿಬ್ಬಣ, ಶಾಂತಿಯ ನಿಲ್ದಾಣಾ
ಜೀವನ್ಮುಖಿಯಾಗಿ ಸಾಗುವ ಕಾರವಾನ, ಕೂಡ ಬಾರೆ

ಬುದ್ಧನಿಗೆ ಶರಣಾಗಿ, ಧರ್ಮ, ಸಂಘಕೆ ಋಣಿಯಾಗಿ
ಪ್ರೇಮ ಮಾರ್ಗದಿ ಸಾಗಿ ಪೂರ್ಣ ಪ್ರಜ್ಞೆ ಪಡೆಯ ಬಾರೆ



○ ಜಂಬಣ್ಣ ಅಮರ ಚಿಂತ

ಏಪ್ರಿಲ್ 'ಸಂವಾದ' ಸಂಚಿಕೆಯ 'ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ' ಎಂಬ ಶಿರೋನಾಮೆಯ ಡಾ॥ ಆನಂದ್ ತೇಳ್ ತುಂಬ್ಡೆಯವರ ಲೇಖನ ಪಾಂಡಿತ್ಯ ಪೂರ್ಣವಾಗಿ ಮೂಡಿ ಬಂದಿದೆ. ಕ್ರಾಂತಿಕಾರಿ ಅಂಬೇಡ್ಕರರನ್ನು ಜಾನಪದ ಅಂಬೇಡ್ಕರ್ ಜಾಗದಲ್ಲಿ ಪ್ರತಿ ಷ್ಠಾಪಿಸಬೇಕೆನ್ನುವ ಇವರ ವಾದ ವಾಸ್ತವಿಕ ಸನ್ನಿವೇಶಗಳಿಗೆ ಚಾಲನೆಯಾಗುವ ನಿಟ್ಟಿನಲ್ಲಿ ಅತ್ಯಂತ ಚಿಂತನಾರ್ಹ ವಿಚಾರವಾಗಿದೆ.

ಈ ಲೇಖನದಲ್ಲಿ ಶ್ರೀಯುತರು 'ಅಂಬೇಡ್ಕರರನ್ನು ಒಂದು ಪ್ರತಿಮೆಯಾಗಿ ಗ್ರಹಿಸಬಹುದೇ?' ಎಂಬ ಮಹತ್ವದ ಪ್ರಶ್ನೆಯನ್ನು ಹಾಕಿಕೊಂಡು... 'ಹಲವು ಅಂಬೇಡ್ಕರ್‌ಗಳಿರುವುದರಿಂದ ನಾವು ಯಾವ ಅಂಬೇಡ್ಕರರನ್ನು ಸ್ಮರಿಸುತ್ತಿದ್ದೇವೆ?' ಎಂಬ ಪ್ರೊ ಭಕ್ಷಿಯವರು ಹೇಳಿದ್ದನ್ನು ಉದಾಹರಿಸುತ್ತಾ ...ಹಲವು ರೀತಿಯಲ್ಲಿ ವಿಂಗಡಿಸಬಹುದಾದ ಅಂಬೇಡ್ಕರರ ವ್ಯಕ್ತಿತ್ವವಿತ್ತು ಅವುಗಳಲ್ಲಿ ಕಾಲಾನುಕ್ರಮದಲ್ಲಿ ವಿಂಗಡಿಸುವುದಾದರೆ ೧೯೪೭ ಕ್ಕೆ ಮುಂಚಿನ ಅಪ್ರತಿಮ ವಿದ್ವತ್ತು ಹೊಂದಿದ್ದ ತನ್ನ ವಿಮೋಚನೆಗಾಗಿ ಒಳಗೂ ಹೊರಗೂ ಹೋರಾಡುತ್ತಿದ್ದ ಅಸ್ಪೃಶ್ಯ ಯುವ ಅಂಬೇಡ್ಕರ್‌ಗೂ.... ವೈಸ್‌ರಾಯ್‌ರ ಆಡಳಿತ ಸಮಿತಿಯ ಸದಸ್ಯರಾಗಿದ್ದ ಅಥವಾ ಆನಂತರದ ನೆಹರೂ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯಾಗಿದ್ದ ಅಂಬೇಡ್ಕರ್‌ಗೂ ಅಥವಾ ಅದಕ್ಕೂ ಮುಂಚೆ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅಥವಾ ಆನಂತರದ ವರ್ಷಗಳಲ್ಲಿ ಬೌದ್ಧಧರ್ಮದ ಜೊತೆಗೆ ಸಂಪೂರ್ಣ ವಾಗಿ ತನ್ನನ್ನು ತಾನೇ 'ಸ್ಪಿರಿಚುಯಲ್' ಆಗಿಸಿಕೊಂಡ ಅಂಬೇಡ್ಕರ್‌ಗೂ ಸಾಕಷ್ಟು ವ್ಯತ್ಯಾಸಗಳಿವೆ ಎನ್ನುತ್ತಾರೆ.

ಬಾಬಾ ಸಾಹೇಬರ ಪ್ರಖರ ಆಧ್ಯಾತ್ಮಿಕತೆ

ಸಂದರ್ಭ ಮತ್ತು ಅನುಭವಾಭಿಪ್ರಾಯಗಳು ಕಾಲದ ಸೆರೆಯಲ್ಲಿ ವ್ಯತ್ಯಸ್ತವಾಗುವುದು ಪ್ರಕೃತಿಯ ಸಹಜ ಕ್ರಿಯೆ ಎಂದಿಟ್ಟುಕೊಳ್ಳುವುದಾದರೆ, ಅಂಬೇಡ್ಕರರ ಜೀವಮಾನದ ಕೊನೆಘಟ್ಟವನ್ನು 'ಸ್ಪಿರಿಚುಯಲ್' ಆಗಿಸಿಕೊಂಡ ಅಂಬೇಡ್ಕರ್' ಎಂದು ವ್ಯಾಖ್ಯಾನಿಸುವಾಗ 'ಸ್ಪಿರಿಚುಯಲ್' ಎಂಬುದೇ ಬಾಬಾಸಾಹೇಬರ ಬರಹಳಗಳ ದೌರ್ಬಲ್ಯವೆಂಬಂತೆ "ಅವರ ಚಿಂತನೆ ಯಲ್ಲಿದ್ದ ದೌರ್ಬಲ್ಯಗಳು ಭೌತಿಕ ವಸ್ತುಗಳ ಜೊತೆ ಸಂಬಂಧ ಕಳೆದುಕೊಂಡ ಧರ್ಮದ ನೈತಿಕ ಶಕ್ತಿಯ ಪರಿಕಲ್ಪನೆಯಿಂದ ಉಗಮವಾಗುತ್ತದೆ. ಆದ್ದರಿಂದಲೇ ಅವರು ಯಾವುದೇ ರಕ್ತಪಾತವಿಲ್ಲದೇ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯದ ತಳಹದಿಯುಳ್ಳ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂಬ ಬರವಸೆ ಇಟ್ಟಿದ್ದರು"–ಎಂದು ಹೇಳುತ್ತಾರೆ. ಹೀಗೆ ಹೇಳುವಾಗ ಇಲ್ಲಿ ಲೇಖಕರು 'ಧರ್ಮ' ಪದವನ್ನು 'ಭೌತಿಕ ವಸ್ತುಗಳ ಜೊತೆ ಸಂಬಂಧ ಕಳೆದುಕೊಂಡುವು ಎಂದು ಒಬ್ಬ ಕಾಮ್ರೇಡ್ ಅಧರ್ಮವನ್ನು ಅಥೈಸುವಂತೆ Spiritual ಅನ್ನು Concerned With the Spirit or Soul of Religion ಅರ್ಥಕ್ಕೆ ಅಂಬೇಡ್ಕರರನ್ನು ಹಚ್ಚುತ್ತಾರೆ.

ಬಾಬಾಸಾಹೇಬರು ಯತಾರ್ಥದಲ್ಲಿ ಯಾವುದು ಮಾನವ ಬದುಕು ಮತ್ತದರ ಸಂಕೀರ್ಣತೆ ಅಥವಾ ಅದರ ಅಸ್ತಿತ್ವ ಹಾಗೂ ಈ ಸೃಷ್ಟಿಯ ಸಮೃದ್ಧಿಗೆ ಸಂಬಂಧಿಸಿಲ್ಲವೋ ಅಂತಹದ್ದನ್ನು ಅತ್ಯಂತ ನಿಷ್ಠೂರವಾಗಿ ವಿರೋಧಿಸುತ್ತಾರೆ. ಮತ್ತವರು ವೈಜ್ಞಾನಿಕ ದೃಷ್ಟಿಗೆ ಕೊಟ್ಟ ಪ್ರಾಮುಖ್ಯತೆಯನ್ನು ತಮ್ಮ ಜೀವಮಾನದಲ್ಲಿ ಎಲ್ಲೂ ಸಡಿಲಗೊಳಿಸಿಕೊಂಡಿಲ್ಲ! ಅವರ ಬರಹಗಳ ಸಂಪುಟ–೩, ಪು.ಸಂ. ೧೨೬ ರಲ್ಲಿ ಧರ್ಮಗಳಿಗೆ [Religion] ಸಂಬಂದಿಸಿದಂತೆ ನೇರವಾಗಿ ಶ್ರೀ ಪೊಮೆನ್ಸ್‌ರ ಹೇಳಿಕೆಯನ್ನು ಪ್ರಸ್ತಾಪಿಸುತ್ತಾ "ಧರ್ಮವು ಕೇವಲ ಅನುಭಾವವಾಗಿದ್ದರೆ ಸಾಲದು ಸಾಮಾನ್ಯನಿಗೂ ಧರಿದ್ರನಿಗೂ ಇಂತಹ ಧರ್ಮದಿಂದ ಏನೂ ಪ್ರಯೋಜನವಿಲ್ಲ, ರಾಜಕಾರಣದ ಮೇಲೆ ಸತ್ತ್ವ ಪೂರ್ಣ ಹಾಗೂ ನೇರ ಪರಿಣಾಮ ಬೀರದ ಆದರ್ಶವಾಗಿ ಬಂದು ಧರ್ಮವನ್ನು ನಂಬುವುದಾದರೆ ಅಂತಿಮವಾಗಿ ಮೂರ್ಖತನದ ನಂಬಿಕೆಯೇ ಆದೀತು" ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಇಂತಹ ಮತ ವಿರೋಧಿ ಹೇಳಿಕೆಗಳು ಅವರ ಬರಹಗಳಲ್ಲಿ ಅತ್ಯುಗ್ರವಾಗಿ ಮತ್ತು ವಿಫುಲವಾಗಿ ಸಿಗುತ್ತವೆ. ಬಾಬಾ ಸಾಹೇಬರಲ್ಲಿ ಸೈದ್ಧಾಂತಿಕವಾಗಿ ವೈರುಧ್ಯಗಳಿರುವುದಿಲ್ಲ!

ಬಾಬಾಸಾಹೇಬರ ವಿದ್ವತ್ ಪೂರ್ಣ ಇತಿಹಾಸಜ್ಞವೂ ಆದ 'buddha and His dhamma' ಎಂಬ ಗ್ರಂಥದಲ್ಲಿ ಬುದ್ಧ ಮತ್ತು ಅವನ ಚರಿತೆ ಹಾಗೂ ಅವನ ಧರ್ಮವನ್ನು ೨೫೦೦ ವರ್ಷಗಳಿಂದ ಭಾರತೀಯರು ಹಾಗೂ ಈ ವಿಶ್ವದ ಜನ ಹೇಗೆ ನಂಬಿದ್ದರೋ ಅಂತಹ ನಂಬಿಕೆಗಳನ್ನೆಲ್ಲ ತೂರೆದು ಅವೈಜ್ಞಾನಿಕ ವಿಚಾರಗಳನ್ನೆಲ್ಲಾ ತಿರಸ್ಕರಿಸಿ ನೈಜ ಇತಿಹಾಸವು ಒಪ್ಪುವಂತಹ ವಿಶ್ವಾಸ ಪೂರ್ಣವಾದ ರೀತಿಯಲ್ಲಿ ಬುದ್ಧನ ಧರ್ಮಕ್ಕೆ ವೈಜ್ಞಾನಿಕ ತತ್ವ ದರ್ಶನದ ನವ್ಯ ನೇಪಥ್ಯವನ್ನು ಹಾಕಿ ಕೊಡುತ್ತಾರೆ. ಈ ರೀತಿಯಲ್ಲಿನ ಬುದ್ಧನ ಧರ್ಮವನ್ನು ಇಂದಿಗೂ ಬೌದ್ಧ ಮೂಲಭೂತವಾದಿಗಳು ಸಮ್ಮತಿಸುವುದಿಲ್ಲವೆಂಬುದು ಗಮನಾರ್ಹವಾದ ವಿಷಯ. ಈ ರೀತಿ ಮಾಡಿದ ಬಾಬಾ ಸಾಹೇಬರ ಸತ್ಯವಾದ ಉದ್ದೇಶವೇನು? ಮತದ ಅರ್ಥವ್ಯಾಪ್ತಿಗೆ ಸೀಮಿತಗೊಂಡಿದ್ದ ಬೌದ್ಧ ಧರ್ಮವನ್ನು ತಿರಸ್ಕರಿಸುವುದರ ಮೂಲಕ ಮತಾತೀತಗೊಳಿಸಿದ್ದು!!! ಈ ವಿಷಯದ ಬಗ್ಗೆ ಸಂಶಯ

ಪ್ರತಿಕ್ರಿಯೆ

ದ್ಧ ಮತ್ತು ಅವನ
ತೆ ಹಾಗೂ ಅವನ
ರ್ಮವನ್ನು ೨೫೦೦
ರ್ಷಗಳಿಂದ
ರತೀಯರು ಹಾಗೂ
ವಿಶ್ವದ ಜನ ಹೇಗೆ
ಬಿದ್ದರೋ ಅಂತಹ
ಬಿಕೆಗಳನ್ನೆಲ್ಲ
ರೆದು ಅವೈಜ್ಞಾನಿಕ
ಕಾರಗಳನ್ನೆಲ್ಲಾ
ಸ್ಕರಿಸಿ ನೈಜ
ಹಾಸವು
ಪ್ಪುವಂತಹ ವಿಶ್ವಾಸ
ರ್ಣವಾದ ರೀತಿಯಲ್ಲಿ
ದ್ಧನ ಧರ್ಮಕ್ಕೆ
ಜ್ಞಾನಿಕ ತತ್ವ
ರ್ಶನದ ನವ್ಯ ನೇಪ
ವನ್ನು ಬಾಬಾ
ಹೇಬರು ಹಾಕಿ
ಡುತ್ತಾರೆ. ಈ
ತಿಯಲ್ಲಿನ ಬುದ್ಧನ
ರ್ಮವನ್ನು ಇಂದಿಗೂ
ದ್ಧ ಮೂಲಭೂತವಾದಿ
ು ಸಮ್ಮತಿಸುವುದಿಲ್ಲ
ಬುದು ಗಮನಾರ್ಹ
ದ ವಿಷಯ.

ದ್ಯಾಲಯ ನಾಗರಾಜ

ಪಡುವವರು ಬೇಕಾದರೆ ಬಾಬಾಸಾಹೇಬರು ಬೌದ್ಧ ಮತವು ಗೌರವಿ ಸಲ್ಪಡುವ ಪುನರ್ಜನ್ಮ, ಕರ್ಮಸಿದ್ಧಾಂತ, ನಿರ್ವಾಣ [ನಿಬ್ಬಾಣ] ಸಿದ್ಧಾಂತಗಳನ್ನು ತಿದ್ದುಪಡಿ ಮಾಡಿ ಅವರದೇ ಆದರೀತಿಯಲ್ಲಿ ವೈಜ್ಞಾ ನಿಕವಾಗಿ ವಿಷದೀಕರಿಸಿರುವುದನ್ನು ಗಮನಿಸಬಹುದು.

ಇಡೀ ವಿಶ್ವದ ಚರಿತ್ರೆ, ಇತಿಹಾಸಗಳು "ಅಧ್ಯಾತ್ಮ, ಧರ್ಮ, ನೀತಿ, ತತ್ವ" ಎಂಬ ವಿಚಾರಗಳನ್ನು ಮತದ ಬಿಗಿ ಮುಷ್ಠಿಯಲ್ಲಿ [Religion] ಭದ್ರಪಡಿಸಿಕೊಂಡಿವೆ. ನಮ್ಮ ಮನಸ್ಸು ಕೂಡ ಈ ಶಬ್ದಗಳು ಬಂದ ತಕ್ಷಣ ಮತ ದೊಂದಿಗೆ ಅಥೈಸಿಕೊಳ್ಳುವಷ್ಟು ಬಿಗಿಯಾಗಿ.... ಇಂತಹ ಸಹಜ ಸೀಮಿತಾರ್ಥಗಳಿಂದಾಗಿ ನೈಜಧರ್ಮ, ಅಧ್ಯಾತ್ಮ ಗಳು, ತತ್ವಗಳು ಮರೆಮಾಚಿ ಅನರ್ಥಕಾರಿಯಾಗುತ್ತಾ.... ಗೊಂದಲ ಮಾಯವಾಗುತ್ತಾ.... ಆಯಾಮತಗಳು ಅವುಗ ಳಿಂದಲೇ ಸ್ವಯಂ ಪೋಷಣೆಗೋಳಪಡುತ್ತಾ ಸ್ವಸಹಾಯ ಮಾಡಿಕೊಳ್ಳುತ್ತಿವೆ. ಇವೆಲ್ಲವುಗಳ ಫಲವಾಗಿ ಮೂಲಭೂ ತವಾದವು ವ್ಯಗ್ರತೆಯನ್ನು ಪಡೆದುಕೊಳ್ಳುತ್ತಾ, ಮಾನವ ಜನಾಂಗಕ್ಕೆ ಮಾನವನಿಂದಲೇ ಕಂಟಕವಾಗುತ್ತಿರುವ ಅಸಂಖ್ಯಾತ ಅಸಂಗತಗಳನ್ನು ಗ್ರಹಿಸಿ, ವಿಕಾಸೋನ್ಮುಖ ವಾದ ನಾಗರೀಕತೆಯ ವಿಶ್ವಕ್ಕೆ ಅನಿವಾರ್ಯವೂ... ಕಾರ್ಯ ಕಾರಣಗಳನ್ನಾಧರಿಸಿದದ್ದೂ... ಪ್ರಜ್ಞಾ ಪೂರ್ವಕವೂ... ಸಮಗ್ರ ಮಾನವ ಬದುಕಿನ ಸಾರ್ಥಕ್ಯವಾಗಿಯೂ ಇಡೀ ಮಾನವ ಕುಲಕ್ಕೆ ಮಾನವನಿಂದ ಮಾನವನಿಗಾಗಿ ಒಳಿತನ್ನುಂಟು ಮಾಡುವ ಯಶಸ್ವಿ ಪ್ರಜಾಪ್ರಭುತ್ವ ವಿಧಾನ ವಾಗಿ "ಮತಗಳ ವಿಸ್ತರವನ್ನು ಮೀರಿ ನಿಲ್ಲಬಲ್ಲ" ಧರ್ಮ ಅಧ್ಯಾತ್ಮ, ತತ್ವಗಳನ್ನು ಬುದ್ಧನೊಂದಿಗೆ ಹೆಕ್ಕಿ ತೆಗೆಯು ತ್ತಾರೆ. ಮತದ ಅರ್ಥದಲ್ಲಿನ 'ಧರ್ಮವನ್ನು ಪೂರ್ಣವಾಗಿ ನಿರಾಕರಿಸಿದರೂ 'ಧರ್ಮ' ಎಂಬ ಪದವನ್ನು 'ಪರಿಷ್ಕರಿ ಸಲ್ಪಟ್ಟ ನೀತಿ ಸಂಹಿತೆ' ಎಂಬರ್ಥದಲ್ಲಿ ಬಳಸುತ್ತಾರೆ. ಇಂತಹ ನೀತಿ ಸಂಹಿತೆಯನ್ನು ಜಾರಿಗೆ ತರುವಲ್ಲಿ ಇರುವ ಅಡ್ಡಿ ಆತಂಕಗಳನ್ನು ಚರ್ಚಿಸಿ ಇಂತಹವುಗಳನ್ನು ನೈಜ ಜೀವನಕ್ಕೆ ಅಳವಡಿಸಿಕೊಳ್ಳುವ ಕಲೆಯಾಗಿ ಅಥವಾ ಮನಸ್ಸಿನ ತರಬೇತಯಾಗಿ 'ಅಧ್ಯಾತ್ಮ'ವನ್ನು ಗ್ರಹಿಸುತ್ತಾರೆ. ಬಾಬಾಸಾಹೇಬರು ಬೌದ್ಧಧರ್ಮದಲ್ಲಿ ಅಸಹನೀಯವೆನಿಸಿ ನಾನೊಬ್ಬ ಹಿಂದು ಎಂಬ ಹಣೆಪಟ್ಟಿ ತೊರೆಯಲು ಪರ್ಯಾಯ ಮಾರ್ಗವಾಗಿ ಜೀವನ ವಿಜ್ಞಾನವೆಂಬಂತೆ ಬುದ್ಧನ ಆಧ್ಯಾತ್ಮವನ್ನು ಪಾಲಿಸಲು ಪ್ರಮಾಣ ವಚನ ಸ್ವೀಕ ರಿಸಿದರು. ಬಾಬಾಸಾಹೇಬರು ನಾಗಪುರದಲ್ಲಿ ಬೌದ್ಧ ಸಂನ್ಯಾಸ ಸ್ವೀಕರಿಸುವ ಸಂದರ್ಭದಲ್ಲಿ ಅವರು ನೀಡಿರುವ ೨೨ ಹೇಳಿಕೆಗಳನ್ನು ನೋಡಬಹುದು.

ಅವರು ಸ್ವೀಕರಿಸಿದ ಬೌದ್ಧ ಸಂನ್ಯಾಸದಲ್ಲಿ ಅದ್ಯಾತ್ಮ ದಲ್ಲಿ ಪುರಾಣಗಳಿಲ್ಲ; ಗುಹ್ಯಾನುಭವ [ರಹಸ್ಯಾನು ಭವ]ಗಳಿಲ್ಲ ಅನುಭ ವಂತೂ; ಇಲ್ಲ; ನಿಗೂಢಹುದುಕಾಟಗ ಳಂತೂ ಇಲ್ಲವೆ ಇಲ್ಲ!!! ಈ ಮಹತ್ತರ ಕಾರಣಗಳಿಂದ ಅವರದು ಧರ್ಮಾತೀತ ವಾದ ಅದ್ಯಾತ್ಮ, ಮತಾತೀತ ವಾದ ತತ್ವ ಸಿದ್ಧಾಂತಗಳೆಂದು ಹೇಳಬಹುದು. ಏಕೆಂದರೆ ಸರ್ವರಿಗೂ ಸಮಬಾಳು ಸಮಪಾಲು ಎಂಬ ವಿಚಾರದಲ್ಲಿ ಕಮ್ಯೂನಿಸ್ಟರು ತಳೆದಿರುವ ದೋರಣೆಗಳಲ್ಲಿ ಬಲಪ್ರಯೋ ಗವನ್ನು ವಜಾ ಮಾಡಿದರೆ ಆ ಜಾಗದಲ್ಲಿ ಧರ್ಮವನ್ನು ಕಾಣಬಹುದೆನ್ನುತ್ತಾರೆ. ಕಮ್ಯೂನಿಸ್ಟರಲ್ಲಿ 'ಧರ್ಮ' ತಿರಸ್ಕ ರಣೀಯವಾದುದೆಂದು ಧರ್ಮದಿಂದಾಗುವ ಉಪ ಯೋಗ ವನ್ನು ವಿವೇಚಿಸುವ ತಾಳ್ಮೆ ಕಮ್ಯೂನಿಸ್ಟರಲ್ಲಿ ಇಲ್ಲ ವೆಂದು ಆಪಾದಿ ಸುತ್ತಾರೆ. ಅವರದೇ ಆದ ರೀತಿಯಲ್ಲಿ ವಿವರಿಸುವ ಬೌದ್ಧ ಧರ್ಮವನ್ನು ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ಎಂಬ ಪ್ರಬಂಧದಲ್ಲಿ ಸಂಕ್ಷಿಪ್ತವಾಗಿ ಹಾಗೂ ಸರಳವಾಗಿ ವ್ಯಾಖ್ಯಾನಿಸುತ್ತಾರೆ ಈ ಅಂಶಗಳಲ್ಲಿ ಅಂಬೇಡ್ಕ ರರ ಮತಗಳ ವಿಸ್ತಾರಕ್ಕೆ ಮೀರಿ ನಿಲ್ಲಬಲ್ಲ ಅಧ್ಯಾತ್ಮ ಮತ್ತು ತತ್ವಾದರ್ಶಗಳನ್ನು ಸ್ಪಷ್ಟವಾಗಿ ಗ್ರಹಿಸ ಬಹುದು. [ಈ ಪಟ್ಟಿ ಯಲ್ಲಿನ ಕಾರಣಗಳಿಂದಾಗಿಯೇ ಬುದ್ಧ ಮತ್ತು ಅವನ ಧರ್ಮವನ್ನು ಬಾಬಾಸಾಹೇಬರು ತುಂಬಾ ಪ್ರೀತಿಸಿದರೆನ್ನಿ ಸುತ್ತದೆ] ಅವು ಹೀಗಿವೆ...

* ಮುಕ್ತ ಸಮಾಜಕ್ಕೆ ಧರ್ಮ ಅತ್ಯಗತ್ಯ.

* ಎಲ್ಲಾ ಧರ್ಮಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥ ವಿಲ್ಲ.

* ಧರ್ಮ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು, ದೇವರು ಅಥವಾ ಆತ್ಮ ಅಥವಾ ಸ್ವರ್ಗ ಅಥವಾ ಭೂಮಿ ಬಗೆಗಿನ ಊಹೆಗಳು ಮತ್ತು ವಾದಗಳಿಗಲ್ಲ

* ದೇವರನ್ನು ಧರ್ಮದ ಕೇಂದ್ರವನ್ನಾಗಿಸುವುದು ತಪ್ಪು

* ಆತ್ಮೋದ್ಧಾರವನ್ನು ಧರ್ಮದ ಕೇಂದ್ರವನ್ನಾಗಿಸುವುದು ತಪ್ಪು.

* ಪ್ರಾಣಿಬಲಿಗಳನ್ನು ಧರ್ಮದ ಕೇಂದ್ರವನ್ನಾಗಿಸುವುದು ತಪ್ಪು.

* ನಿಜವಾದ ಧರ್ಮ ಮಾನವ ಹೃದಯದಲ್ಲಿದೆ, ಶಾಸ್ತ್ರಗಳಲ್ಲಿಲ್ಲ.

* ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರಬಿಂದು ವಾಗಿರ ಬೇಕು, ಅಲ್ಲದಿದ್ದರೆ ಧರ್ಮವೆನ್ನುವುದು ಕ್ರೂರ ಮೌಢ್ಯವಾಗುತ್ತದೆ.

* ನೈತಿಕತೆ ಜೀವನ ಆದರ್ಶವಾಗಿದ್ದರೆ ಸಾಲದು ದೇವರು ಇಲ್ಲದೇ ಇರುವುದರಿಂದ ಅದೇ ಜೀವನ ಧರ್ಮ ವಾಗಬೇಕು.

* ಧರ್ಮದ ಕೆಲಸ ಪ್ರಪಂಚದ ಪುನರ್ರಚನೆ ಮತ್ತು ಸುಖಿಸಂವ ರ್ಧನೆ ಮಾಡುವುದು; ಆದರೆ ಆದಿ ಅಂತ್ಯ ಗಳನ್ನು ವಿವರಿಸುವುದಿಲ್ಲ.

* ಹಿತಾಸಕ್ತಿಗಳ ಸಂಘರ್ಷದಿಂದ ಲೋಕದಲ್ಲಿ ದುಃಖವಿದೆ, ಅದನ್ನು ಹೋಗಲಾಡಿಸಲು ಇರುವ ಒಂದೇ ದಾರಿ ಅಷ್ಟಾಂಗ ಮಾರ್ಗ.

* ಎಲ್ಲಾ ಮಾನವರು ಸಮಾನರು.

* ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕೆ ವಿನಃ ಹುಟ್ಟಿನಿಂದಲ್ಲ.

ಬಾಬಾಸಾಹೇಬರು ಇಂತಹ ಧರ್ಮವೊಂದು ದಲಿತರಿಗೆ ಅತ್ಯಾವಶ್ಯಕವೆಂಬ ಒತ್ತಡಕ್ಕೆ ಸಿಲುಕಿದ್ದರಿಂದಲೇ ಗಾಢ ಚಿಂತನೆಗಳಿಂದ ಇದನ್ನು ರೂಪಿಸಿದರು. ಇಂದಿನ ಮುಕ್ತ ಆರ್ಥಿಕತೆ ಮತ್ತು ಜಾಗತೀಕರಣದ ಬಲವಂತದಲ್ಲಿ ನೈತಿಕತೆ ಮತ್ತು ಧರ್ಮಗಳು ತೇಲಿ ಹೋಗಬಹುದು. ಪರಿವರ್ತನಾ ಶೀಲವಾದ ಸಮಾಜಕ್ಕೆ ಇಂತಹದ್ದೊಂದು ಸರ್ವಕಾಲಿಕವಾಗಿ ಹೊಂದಬಹುದೇ? ಧರ್ಮವೇ ಇಲ್ಲ ದಾದಾಗ ಅಂತಹ ವರ್ಗವು ಯಾವುದಾದರೂ ಪ್ರತಿಕೂಲ ಪರಿಣಾಮವನ್ನೆದಿರಿಸಬೇಕಾದೀತೆ? ಹೇಗೆ?

* ಉನ್ನತ ಆದರ್ಶಗಳು ಮುಖ್ಯವಾಗಬೇಕು. ಶ್ರೇ[...] ಹುಟ್ಟಲ್ಲ.

* ಎಲ್ಲರ ಬಗ್ಗೆಯೂ ಮೈತ್ರಿ ಇರಬೇಕು. ಶತ್ರು[...] ಬಗ್ಗೆಯೂ ಆಭಾವನೆ ಇರಬೇಕು.

* ಎಲ್ಲರಿಗೂ ಕಲಿಯುವ ಹಕ್ಕಿದೆ, ಮನುಷ್ಯ ಜೀವಿಸ[...] ಆಹಾರ ಎಷ್ಟು ಮುಖ್ಯವೋ. ವಿದ್ಯೆಯೂ ಅಷ್ಟೇ ಅಗತ್ಯ[...]

* ಶೀಲವಿಲ್ಲದ ಜ್ಞಾನ ಅಪಾಯಕಾರಿ.

* ಯಾವುದೂ ನಿರ್ದೋಷವಲ್ಲ, ಯಾವುದೂ ಸ[...] ಬದ್ಧ ವಲ್ಲ, ಪ್ರತಿಯೊಂದು ವಿವರಣೆಗೂ ಪರಿಶೀಲನೆ[...] ಅಧೀನವಾಗಿದೆ.

* ಯಾವುದೂ ಅಂತಿಮವಲ್ಲ

* ಎಲ್ಲವೂ ಕಾರ್ಯ ಕಾರಣ ನಿಯಮ[...] ಅಧೀನವಾಗಿದೆ.

* ಯಾವುದೂ ಸನಾತನವಲ್ಲ ಯಾವುದೂ ಶಾಶ್ವತವ[...] ಎಲ್ಲವೂ ಪರಿವರ್ತನಾ ಶೀಲವಾದದ್ದು ಇರುವಿಕೆ ಎಂದ[...] ಸದಾ ಆಗುವಿಕೆ.

* ಸತ್ಯ ನ್ಯಾಯಕ್ಕಲ್ಲದಿದ್ದರೆ ಯುದ್ಧ ಕೆಟ್ಟದ್ದು.

* ಗೆದ್ದವನು ಸೋತವನನ್ನು ಧರ್ಮದಿಂದ ಕಾಣಬೇಕ[...]

–ಬಾಬಾಸಾಹೇಬರು ಇಂತಹ ಧರ್ಮವೊಂ[...] ದಲಿತರಿಗೆ ಅತ್ಯಾವಶ್ಯಕವೆಂಬ ಒತ್ತಡಕ್ಕೆ ಸಿಲುಕಿದ್ದರಿಂದ[...] ಗಾಢ ಚಿಂತನೆಗಳಿಂದ ಇದನ್ನು ರೂಪಿಸಿದರು. ಇಂದ[...] ಮುಕ್ತ ಆರ್ಥಿಕತೆ ಮತ್ತು ಜಾಗತೀಕರಣದ ಬಲವಂತದ[...] ನೈತಿಕತೆ ಮತ್ತು ಧರ್ಮಗಳು ತೇಲಿ ಹೋಗಬಹುದ[...] ಪರಿವರ್ತನಾ ಶೀಲವಾದ ಸಮಾಜಕ್ಕೆ ಇಂತಹದ್ದೊಂ[...] ಸರ್ವಕಾಲಿಕವಾಗಿ ಹೊಂದಬಹುದೇ? ಧರ್ಮವೇ ಇ[...] ದಾದಾಗ ಅಂತಹ ವರ್ಗವು ಯಾವುದಾದರೂ ಪ್ರತಿಕೂ[...] ಪರಿಣಾಮವನ್ನೆದಿರಿಸಬೇಕಾದೀತೆ? ಹೇಗೆ?

ಈ ಸಂದರ್ಭಕ್ಕೆ ಪೂರಕವಾಗಿ ೨೦೦೬ ಮಾರ್ಚ್[...] ತಿಂಗಳ ಸಂವಾದ ಪತ್ರಿಕೆಯ 'ದಲಿತ್ ಡೈರಿ'ಯಲ್ಲಿ ಚಂ[...] ಬಾನ್ ಪ್ರಸಾದರ ಮಾತುಗಳನ್ನು ಗಮನಿಸಬಹುದ[...] ಇವರು ದಲಿತ ಬಂಡವಾಳ ವಾದದ ಪ್ರಶ್ನೆಯನ[...] ಎತ್ತುತ್ತಾ... "ದಲಿತರನ್ನು ರಕ್ಷಿಸುವ ಮಾರ್ಗವಾಗಿ ದಲಿ[...] ಬಂಡವಾಳವನ್ನು ಸೃಷ್ಟಿಸಬೇಕೆ ನ್ನುವ ಅಂಶವನ[...] ಪ್ರಸ್ತಾಪಿಸುತ್ತಾರೆ" ಇಲ್ಲಿ ದಲಿತ ಬಂಡವಾಳವು ಬೆಳೆದ[...] ದಲಿತರಿಂದ ದಲಿತರಿಗೇ ಆಗುವ ಉಪಯೋಗವನ್ನು ವಿ[...] ರಿಸುತ್ತಾ... ಕ್ಯಾಲಿಪೋರ್ನಿಯಾದಲ್ಲಿರುವ ಸಾಫ್ಟ್‌ವೇ[...] ಇಂಜಿನಿಯರುಗಳಾದ ಚಿಂಜಮಿಗ್ ಮತ್ತು ರಾಮಕೃ[...] ಭೂಪತಿ ಯವರು ಒಂದುಗೂಡಿ ೨೦೦೩ ರಲ್ಲಿ ಅಂಬೆ[...] ಡ್ಕರ್ ಫೆಲೋ ಷಿಪ್ ಚಳುವಳಿಯನ್ನು ಆರಂಭಿಸಿದ[...] ಮತ್ತೆ ಈ ಯೋಜನೆ ಯಡಿ ಆಂಧ್ರದ ನೂರಾರು ಅಹ[...] ವಿದ್ಯಾರ್ಥಿಗಳು ವಾರ್ಷಿಕ ೫೦೦೦ ರೂಗಳನ್ನು ವಿದ್ಯಾರ್ಥಿ[...] ವೇತನವನ್ನು ಪಡಿಯುತ್ತಿರುವುದನ್ನು ಸಹ ಪ್ರಸ್ತಾಪಿಸುತ್ತಾರೆ[...]

["ಪ್ರಸಾದರ ದಲಿತ ಬಂಡವಾಳವು, ಬರಗಾ[...] ದಲ್ಲಿಯೂ ನಿರಮ್ಮಳವಾಗಿ ಮೃಷ್ಟಾನ್ನ ಭೋಜನ ಮಾಡು[...] ಭೂಮಾಲಿಕರು ಹಸಿವೆಯಿಂದ ನರಳುವ ದರಿದ್ರರಿಗೆ ಗಂ[...] ಕೇಂದ್ರಗಳನ್ನು ತೆರೆಯುತ್ತಿದ್ದ ನೆನಪು ಬರಬಹುದ[...] ಏಕೆಂದರೆ ಹಸಿವೆಯ ಸಮಸ್ಯೆ ಜೀವಂತವಾಗಿರುವಷ[...] ಕಾಲ ಮಾತ್ರ ಭೂಮಾಲಿಕರು ಬರಗಾಲದಲ್ಲಿಯ[...] ಮೃಷ್ಟಾನ್ನ ಭೋಜನ ಮಾಡಲು ಸಾಧ್ಯವಿಲ್ಲವೆ?"]

...ಈ ಚರ್ಚೆ ಹಾಗೆಯೇ ಮುಂದುವರಿದು ಪ್ರಸಾ[...] ದರಿಗೆ ಬೆಂಗಳೂರಿನ ಜೆ.ಕೆ. ಕೃಷ್ಣ ಎಂಬ ಅಭಿಮಾ[...]

ಬ್ಬರು 'ದಲಿತ ಬಂಡವಾಳದ' ಬಗ್ಗೆ ಅನುಮಾನ ನ್ನು ವ್ಯಕ್ತ ಪಡಿಸುತ್ತಾ ಬರೆದ ಪತ್ರವನ್ನು ನೀಡಿದ್ದಾರೆ. ದ ಸಾರಂಶ.... 'ಭಾರತೀಯ ಸಂಪನ್ಮೂಲಗಳಲ್ಲಿ ದಲಿ ಪಾಲು ಸಿಗಬೇಕಾದರೆ ಹೊಸ ಚಳುವಳಿಯ ಅಗತ್ಯ ಈ ಚಳುವಳಿಯು ನಗರದಲ್ಲಿರುವ ಸುಶಿಕ್ಷಿತ ದಲಿತ ಗ್ರಾಮೀಣ ದಲಿತರಿಂದ ಬೇರ್ಪಡಿಸುವುದಿಲ್ಲವೇ? ರುವ ಸಂಗತಿಯೆಂದರೆ ದಲಿತರಲ್ಲಿ ಶೇ ೭೦% ರಷ್ಟು ತರು ಹಳ್ಳಿಗಳಲ್ಲಿ ಭೂರಹಿತ ಕಾರ್ಮಿಕರಾಗಿ ನರಳುತ್ತಿ . ನಗರದ ಅನುಕೂಲಸ್ಥ ದಲಿತರು ಉಪ್ಪಿನ ಕಾಯಿ ಮಾತನಾಡುತ್ತಿದ್ದರೆ ಅಲ್ಲಿ ಅವರು ಒಪ್ಪತ್ತು ಊಟ ಬಡಿ ದಾಡುತ್ತಿದ್ದಾರೆಂಬ ಸಂಗತಿಯನ್ನು ಈ ಚಳು ಧ್ವನಿಸುತ್ತಿಲ್ಲವೇ?

ಜೆ.ಕೆ. ಕೃಷ್ಣರ ಈ ಪತ್ರಕ್ಕೆ ಪ್ರಸಾದ್‌ರವರು ಪ್ರತಿಕ್ರಿಯಿ ಮರು ಪತ್ರದಲ್ಲಿ... 'ನೀನೊಬ್ಬ ವ್ಯಕ್ತಿಯಾಗಿ ಾಚಿಸಿ ಬರೆದಿರುವುದನ್ನು ಒಂದು ವಿಭಾಗದ ದಲಿತ ರ ಆಳದ ವಿಚಾರಗಳೆಂದು ನಾನು ಗ್ರಹಿಸುತ್ತೇನೆ.

* ಹಾಗಾದರೆ ದಲಿತ ವ್ಯಕ್ತಿ ಐ.ಎ.ಎಸ್, ಐ.ಪಿ, ಐ. ಆರ್.ಎಸ್, ಐ.ಎಫ್.ಎಸ್ ಆಗ ಬಾರದಲ್ಲವೇ?

ಹಾಗಾದರೆ ವೈಟ್‌ಕಾಲರ್ ಹುದ್ದೆಗಳಿಗೆ ದಲಿತರು ದರೆ ಅದೂ ಸಹ ಸಾಮಾನ್ಯ ದಲಿತರಿಂದ ದೂರ ಸುತ್ತದಲ್ಲವೆ?

ದಲಿತನೊಬ್ಬ ಕಾರು/ಬೈಕ್ ಹೊಂದಿದ್ದಲ್ಲಿ ಸಾಮಾನ್ಯ ತನಿಂದ ದೂರವಾಗುತ್ತಾನಲ್ಲವೆ?

ಹಾಗಾದರೆ ದಲಿತರಲ್ಲಿ ಯಾರು ಸಹ ಸಂಘಟಿತ ಂಗ್ ಕಾಲೋನಿಯಲ್ಲಿ ಜೀವಿಸಿದ್ದಲ್ಲಿ ಅದೂ ಸಹ ನನ್ನು ಸಾಮಾನ್ಯ ದಲಿತರಿಂದ ಬೇರ್ಪಡಿಸುತ್ತದಲ್ಲವೇ?

ಹಾಗಾದರೆ ದಲಿತರು ಇಂಗ್ಲಿಷ್ ಮಾತನಾಡಿದರೆ ಮಾನ್ಯ ದಲಿತರಿಂದ ದೂರವಾಗುತ್ತಾರಲ್ಲವೆ?

ಚಂದ್ರಬಾನ್ ಪ್ರಸಾದ್ ಮತ್ತು ಜೆ.ಕೆ. ಕೃಷ್ಣರ ಈ ನನ್ನು ಇಲ್ಲಿ ನೀಡಬೇಕಾದ ಅವಶ್ಯಕವೇನೆಂದರೆ, ಂತ್ರ್ಯದ ನಂತರ ಒಂದು ಸಂಘಟಿತ ಸಂವೇದನೆ ಾಗಿ ಬೆಳೆದ ದಲಿತ ವರ್ಗವು ಪ್ರಸ್ತುತ ಎರಡು ಭಿನ್ನ ಸಕ್ತಿಗಳಾಗಿ ವಿಘಟಿಸಿದಾಗ... ಪ್ರತ್ಯೇಕಗೊಂಡ ತಹ ಗುಂಪುಗಳು ಎಂತಹ ಸಂಘರ್ಷಗಳನ್ನು ಎದುರಿ ಕಾಗಿ ಬರಬಹುದು? ಮುಖ್ಯವಾಗಿ ಜೆ.ಕೆ. ಕೃಷ್ಣರಲ್ಲಿ ಅನುಮಾನಗಳು 'ಪ್ರಬುದ್ಧವಾದ ದಲಿತ ಚಿಂತನೆ ಲ್ಲಿನ ಅಧ್ಯಾತ್ಮಿಕ ಕೊರತೆಯನ್ನು' ಪ್ರತಿನಿಧಿಸುತ್ತಿದ್ದರೆ... ದ್‌ರವರು ವ್ಯಕ್ತ ಪಡಿಸಿರುವ ಪ್ರಶ್ನೆಗಳು "ದಲಿತ ವಂತನೊಬ್ಬನು ಭೌತಿಕವಾಗಿ ಬೆಳೆಯುವುದನ್ನೇ ಯಾಗಿಸಿಕೊಳ್ಳುವ ಆತುರದಲ್ಲಿ ಬದುಕಿನ ಸಾರ್ಥಕತೆ ನ್ನು ಕಟ್ಟಿಕೊಳ್ಳುತ್ತವೆ!" ಈ ಎರಡೂ ವಾದಗಳ ಪರ ರ್ಥವು ಯಾವ ಸತ್ಯವನ್ನು ಗ್ರಹಿಸಬಲ್ಲುದೆಂದು ಅರ್ಥೈ ಳ್ಳುವುದಾರೆ ಭೌತಿಕವಾದವು 'ಸಂಗ್ರಹಣೆ'ಯನ್ನೇ ಪರ ಯವಾಗಿಸಿಕೊಳ್ಳುವ ಅಪಾಯಕ್ಕೆ ಸಿಲುಕಿ ದುರಾ ಗೀಡಾಗುತ್ತದೆ. ಅಷ್ಟಲ್ಲದೆ ದುರಾಸೆಯು 'ಶೋಷಣೆ' ನ್ನು ಸಮೃದ್ಧಿಗೊಳಿಸುವ ಪೋಷಕಾಂಶವಾಗುತ್ತದೆ! ತಹವುಗಳಿಂದ 'ನಿರ್ಮಲದೃಷ್ಟಿ' ಪ್ರಾಪ್ತವಾಗುತ್ತದೆಂದು ು ಸಾಧ್ಯವೇ?

ಆರ್ಥಿಕ ಮತ್ತು ಭೌತಿಕ ಮೌಲ್ಯಗಳಿಲ್ಲದ ಆಧ್ಯಾತ್ಮ ಹಾಗೂ ಆಧ್ಯಾತ್ಮವಿಲದಾ ಭೌತಿಕವಾದ ದುರ್ಬಲ ತೆಯನ್ನಷ್ಟೇ ಮಾಡಬಲ್ಲದು ಎಂದು ಹೇಳುವ ಡಾ॥ ಡ್ಕರರನ್ನು ಅತ್ಯಂತ ಗಾಢವಾಗಿ ಭಾವಿಸುವ ದಲಿತ

ಸ್ವಾತಂತ್ರ್ಯದ ನಂತರ ಒಂದು ಸಂಘಟಿತ ಸಂವೇದನೆ ಯಾಗಿ ಬೆಳೆದ ದಲಿತ ವರ್ಗವು ಪ್ರಸ್ತುತ ಎರಡು ಭಿನ್ನ ಹಿತಾಸಕ್ತಿಗಳಾಗಿ ವಿಘಟಿಸಿದಾಗ... ಪ್ರತ್ಯೇಕಗೊಂಡ ಅಂತಹ ಗುಂಪುಗಳು ಎಂತಹ ಸಂಘರ್ಷಗಳನ್ನು ಎದುರಿಸಬೇಕಾಗಿಬರಬಹುದು? ಮುಖ್ಯವಾಗಿ ಜೆ.ಕೆ. ಕೃಷ್ಣರಲ್ಲಿರುವ ಅನುಮಾನಗಳು 'ಪ್ರಬುದ್ಧವಾದ ದಲಿತ ಚಿಂತನೆಗಳಲ್ಲಿನ ಅಧ್ಯಾತ್ಮಿಕ ಕೊರತೆಯನ್ನು' ಪ್ರತಿನಿಧಿಸುತ್ತಿದ್ದರೆ... ಪ್ರಸಾದ್‌ರವರು ವ್ಯಕ್ತಪಡಿಸಿರುವ ಪ್ರಶ್ನೆಗಳು "ದಲಿತ ವಿದ್ಯಾವಂತನೊಬ್ಬನು ಭೌತಿಕವಾಗಿ ಬೆಳೆಯುವುದನ್ನೇ ಅತಿಯಾಗಿಸಿಕೊಳ್ಳುವ ಆತುರದಲ್ಲಿ ಬದುಕಿನ ಸಾರ್ಥಕತೆಯನ್ನು ಕಟ್ಟಿಕೊಳ್ಳುತ್ತವೆ!"

ಚಳುವಳಿಗಳು ಮತ್ತು ಚಿಂತನೆಗಳು ಅಂಬೇಡ್ಕರರ ಯಾವ ಸೀಮಿತ ಅಂಶಗಳಿಗೆ ಮಹತ್ವ ಕೊಟ್ಟರು ಯಾವ್ಯಾವ ಅಂಶಗಳನ್ನು ಕೊಂದಿತೆಂದು ಅತ್ಯಂತ ಸ್ಪಷ್ಟವಾಗಿಲ್ಲಿ ಗಮನಿಸಬಹುದು. ಕಾಲಾನಂತರದಲ್ಲಿ ಶುದ್ಧ ಭೌತಿಕ ವಾದದ ಭವಿಷ್ಯವು ಎಂತಹ ವಿಪತ್ಕರ ಪರಿಣಾಮ ಗಳನ್ನೆದುರಿಸಬೇಕಾಯಿತೆನ್ನುವುದೂ ಸಹ ಸ್ಮರಣಾರ್ಹ ವಿಚಾರ. ಬಾಬಾಸಾಹೇಬರ ಸಾಮಾಜಿಕ ನ್ಯಾಯದ ಹೋರಾಟವು ಜಾತಿ ಕಾರಣವಾಗಿ ರೂಪುಗೊಂಡಿದ್ದು... ದಲಿತ ರಾಜಕಾರಣವು ಗದ್ದುಗೆಯನ್ನೇರುವ ಮೊದಲೇ ಅರಾಜಕತೆಯಾಗಿ ಪರಿಣಮಿ ಸಿದ್ದು... ದಲಿತ ರಾಜಕಾರಣವು ಭಾರತದಲ್ಲಿ ಮೀಸಲಾತಿ ಎಲ್ಲಾ ದಲಿತರಿಗೂ ಸಮರ್ಪಕವಾಗಿ ತಲುಪುವ ಮೊದಲೇ ಒಳಮೀಸಲಾತಿ ಗುದ್ದಾಟಗಳಾಗಿ ಅನಾವರಣಗೊಂಡು ನಗೆಪಾಟಲಿಗೀಡಾಗಿದ್ದು... ಈ ಎಲ್ಲಾ ಅಂಶಗಳು ಬಾಬಾಸಾ ಹೇಬರ ಭೌತಿಕ ಮತ್ತು ಆರ್ಥಿಕ ವಾದವನ್ನು ನೆಚ್ಚಿಕೊಳ್ಳುವ ಬರದಲ್ಲಿ ಅವರ 'ಪ್ರಖರ ಅಧ್ಯಾತ್ಮವಾದವನ್ನು' ನಿರಪೇಕ್ಷಿಸಿದ್ದರ 'ಪರಿಣಾಮ ಗಳೆಂದೂ ಗ್ರಹಿಸಬಹುದು.

ಡಾ॥ ಬಿ. ಆರ್. ಅಂಬೇಡ್ಕರರನ್ನು ಭಾರತೀಯತೆ ಸ್ಖಾಲಿತ್ಯವಾದ ಸೀಮಾರೇಖೆಯ ಮಿತಿಯಲ್ಲಿ ಗ್ರಹಿಸಿ ಬಿಡುತ್ತದೆ. ಇಂತಹ ಅಲ್ಪಕಾಲಿಕ ಸಂಕುಚಿತ ನಿರ್ಧಾರಗಳೇ ಅಂಬೇಡ್ಕರರ Identification ಗಳಾಗಿ ಪರಿವರ್ತನೆಗೊಂಡಿವೆ. ಮೀಸಲಾತಿಯ ಪ್ರವರ್ತಕರು ಮತ್ತು ನಾಸ್ತಿಕವಾದಿಗಳು ಹಿಂದೂ ವಿರೋಧಿಗಳು ಎಂಬಕಾರಣಕ್ಕಾಗಿ ವಿರೋಧಿಸುವ ಮೂಲಭೂತವಾದಿಗಳು ಒಂದು ಕಡೆಯಾದರೆ, ತಲತಲಾಂತರಗಳಿಂದ ಹಸಿವು ದಾರಿದ್ರ್ಯ ಬಡತನಗಳಿಂದ ಕಂಗೆಟ್ಟಿದ್ದ ದಲಿತರಿಗೆ ಸಾಂವಿಧಾನಿಕವಾಗಿ ಯಾದರೂ ಕನಿಷ್ಟ ಬದುಕನ್ನಾದರೂ ನೀಡಿದ್ದರಲ್ಲ ಮತ್ತು ದಾರ್ಶನಿಕ, ತತ್ವಜ್ಞಾನಿ, ಮಾನವತಾವಾದಿ ಎಂಬ ಪದಗಳ ಸುತ್ತಗಿರಕಿ ಹೊಡೆಯುತ್ತಾ ಯಾಂತ್ರಿಕವಾಗಿ ಅರ್ಥೈಸುವ ದಲಿತವಾದಿಗಳು ತಂತಮ್ಮ ಪೂರ್ವಾಗ್ರಹಗಳನ್ನು ಬದಿಗಿರಿಸಿ ಅರ್ಥೈಸಿಕೊಳ್ಳುವುದಾದರೆ ಬಾಬಾಸಾಹೇಬರು 'ಆಕಾಶದ ಅಗಲಕ್ಕೂ ನಿಂತ ಆಲ'ವಾಗುತ್ತಾ ಸಕಲ ಚರಾ ಚರಾ ಜೀವ ಜಗತ್ತಿಗೆ ತಣ್ಣನೆಯ ಜೀವಾನಿಲ ಜೀವದ್ರವ್ಯ ವಾಗಬಲ್ಲರು. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆ ಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ವೃತ್ತಿಪರ ಶಿಕ್ಷಣದಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ

ನಮ್ಮ ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸರ್ಕಾರವಿದ್ದು ಗ್ರಾಮೀಣ, ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯವಾದ ಅಂಶ. ವೃತ್ತಿಪರ ಶಿಕ್ಷಣ ಗ್ರಾಮೀಣ ಜನತೆಗೆ ತಲುಪಿಸುವಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯಿತಿ, ನಗರಸಭೆ, ಗ್ರಾಮ ಸಭೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದು ಮತ್ತು ಇದರ ಬಗ್ಗೆ ಗಮನಹರಿಸದೇ ಇರುವುದು ಒಂದು ವಿಷಾದದ ಸಂಗತಿ. ಆದ್ದರಿಂದ ಇಂದು ಗ್ರಾಮೀಣ ಪ್ರದೇಶದಲ್ಲಿರುವ ಬಹುತೇಕ ಬಡ ಮತ್ತು ಸಾಮಾನ್ಯ ಜನರಿಗೆ ವೃತ್ತಿಪರ ಶಿಕ್ಷಣ ಕೈಗೆಟುಕದೇ ದೂರ ಉಳಿದಿರುವ ಸತ್ಯಾಂಶ ಇಂದು ಎದ್ದು ಕಾಣುತ್ತಿದೆ. ಅದಕ್ಕೆ ಈ ಸ್ಥಳೀಯ ಸರ್ಕಾರಗಳು ಗ್ರಾಮೀಣ ಪ್ರದೇಶದ ಬಡ ಮತ್ತು ಸಾಮಾನ್ಯವರ್ಗಗಳ ಜನತೆಗೆ ವೃತ್ತಿಪರ ಶಿಕ್ಷಣ ತಲುಪಿಸುವತ್ತ ಚಿಂತಿಸಬೇಕು ಮತ್ತು ಅದಕ್ಕೆ ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾರ್ಯೋನ್ಮುಖವಾಗಬೇಕು.

ಅಲ್ಲದೇ ಇಂದಿನ ಜಾಗತೀಕರಣದ ಹಿನ್ನಲೆಯಲ್ಲಿ ಅವರನ್ನು ಅದರ ಮುಖ್ಯ ವಾಹಿನಿಗೆ ತರುವ ಹೆಚ್ಚಿನ ಜವಾಬ್ದಾರಿ ರಾಜ್ಯ ಸರ್ಕಾರಗಳಿಗಿಂತ ಸ್ಥಳೀಯ ಸರ್ಕಾರಗಳದ್ದಾಗಿದೆ. ಶಿಕ್ಷಣವು ಒಬ್ಬ ವ್ಯಕ್ತಿ, ಒಂದು ದೇಶ ಹಾಗೂ ಪ್ರಪಂಚದ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಸ್ಥಳೀಯ ಸರ್ಕಾರಗಳು ಕೇವಲ ವಯಸ್ಕರ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಸಹಕರಿಸಿದರೇ ಸಾಲದು. ಶಿಕ್ಷಣದ ಪ್ರತಿ ವಿಭಾಗಗಳಿಗೂ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದ್ದು ಅನಿವಾರ್ಯವಾಗಿದೆ. ಅದರಲ್ಲೂ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಗಮನಹರಿಸಬೇಕಾದುದು ಇಂದಿನ ಜಾಗತೀಕರಣ, ಖಾಸಗೀಕರಣ, ಉದಾರಿ ಕರಣಗಳ ಹಿನ್ನೆಲೆಯಲ್ಲಿ ಅತ್ಯವಶ್ಯಕವಾಗಿದೆ.

ವೃತ್ತಿಪರ ಶಿಕ್ಷಣ ಮತ್ತು ಗ್ರಾಮೀಣ ಜನತೆ

ಇಂದು ವೃತ್ತಿಪರ ಶಿಕ್ಷಣವೆಂದರೆ ಎಲ್ಲರೂ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಪದವಿಗಳತ್ತ ಗಮನ ಹರಿಸುತ್ತಿದ್ದಾರೆ. ಈ ಪದವಿಗಳು ಬಹುತೇಕವಾಗಿ ಗ್ರಾಮೀಣ ಪ್ರದೇಶದ ಜನತೆಯಿಂದ ಅದರಲ್ಲೂ ಬಡ ಮತ್ತು ಹಿಂದುಳಿದವರಿಂದ ದೂರ ಉಳಿದಿವೆ. ಇದಕ್ಕೆ ಕಾರಣ ಗ್ರಾಮೀಣ ಪ್ರದೇಶದಲ್ಲಿರುವ ಬಡ ಮತ್ತು ಹಿಂದುಳಿದ ವರ್ಗದವರಿಗೆ ವೃತ್ತಿಪರ ಶಿಕ್ಷಣಗಳ ಸ್ವರೂಪ, ಕಾಲೇಜುಗಳು, ಪ್ರವೇಶ ನೀತಿ ನಿಯಮಗಳು, ಶುಲ್ಕ, ಸರ್ಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸೌಲಭ್ಯಗಳ ಮಾಹಿತಿ ಕೊರತೆ ಹಾಗೂ ಈ ಪದವಿಗಳ ಶಿಕ್ಷಣ ಪಡೆಯುವ ಸಾಮರ್ಥ್ಯ ಹಣವಂತ ರಿಗೆ ಮತ್ತು ವಿದ್ಯಾವಂತರಿಗೆ ಮಾತ್ರ, ಗ್ರಾಮೀಣ ಪ್ರದೇಶದ ಬಡಪಾಯಿ ಮತ್ತು ಹಿಂದುಳಿದ ವರ್ಗಗಳಿಗೆ ಕೈಗೆಟುಕದಿರುವ ಗಗನ ಕುಸುಮಗಳೆಂಬ ತಪ್ಪು ತಿಳುವಳಿಕೆ ಗ್ರಾಮೀಣ ಪ್ರದೇಶದ ಬಡ ಮತ್ತು ಹಿಂದುಳಿ[illegible] ವರ್ಗಗಳ ಜನರ ಮನಸ್ಸಿನಲ್ಲಿ ಮನೆ ಮಾಡಿರುವುದು. ಇದರಿಂದ[illegible]ಗಿಯೇ ತಮ್ಮ ಮಕ್ಕಳು ಎಸ್.ಎಸ್.ಎಲ್.ಸಿ ಆದ ನಂತರ ವಿಜ್ಞಾ[illegible] ಪದವಿ ಪೂರ್ವ ಶಿಕ್ಷಣಕ್ಕೆ ಕಳುಹಿಸದೇ ಕೇವಲ ಕಲಾ ವಿಭಾ[illegible] ಅಥವಾ ವಾಣಿಜ್ಯ ವಿಭಾಗಗಳಿಗೆ ಕಳುಹಿಸುತ್ತಿರುವುದು ಇಂದು ಸ[illegible] ಸಂಗತಿ. ಅಲ್ಲದೇ ಇಂದಿನ ಪದವಿ ಪೂರ್ವ ಶಿಕ್ಷಣದ ವಿಜ್ಞಾ[illegible] ವಿಭಾಗ ಮತ್ತು ವಿಜ್ಞಾನ ಪದವಿ ವಿಭಾಗದಲ್ಲಿ ಇತ್ತೀಚಿನ ವರ್ಷಗಳ[illegible] ಗಣನೀಯವಾಗಿ ಪ್ರವೇಶ ಕಡಿಮೆಯಾ ಗುತ್ತಿದೆ ಎಂಬ ಶಿಕ್ಷಣ ಇ[illegible]ಖೆಯ ಕೊರಗು ಇದಕ್ಕೆ ಸಾಕ್ಷಿಯಾಗಿದೆ.

ಇದಕ್ಕೆ ಮುಖ್ಯ ಕಾರಣಗ ಳೆಂದರೆ ಗ್ರಾಮೀಣ ಪ್ರದೇಶ[illegible] ಜನತೆ ವಿಜ್ಞಾನ ಶಿಕ್ಷಣದ ಸಂಪೂರ್ಣ ಅರಿವಿರುವುದು, ಗ್ರಾಮೀ[illegible] ಜನತೆಯ ಅವಶ್ಯಕತೆಗೆ ತಕ್ಕ ವಿಜ್ಞಾನ ವಿಭಾಗದ ಕಾಲೇಜುಗಳಿಲ್ಲದಿ[illegible]ವುದು, ಬಡ ಮತ್ತು ಹಿಂದುಳಿದ ವರ್ಗಗಳಿಗೆ ಅದರ ಶುಲ್ಕ ಮತ್ತ[illegible] ವೆಚ್ಚ ದುಬಾರಿಯಾಗಿರುವುದು, ವಿಜ್ಞಾನ ಶಿಕ್ಷಣ ಕೇವಲ ವಿದ್ಯಾವಂತ[illegible] ಮಕ್ಕಳಿಗೆ ಮಾತ್ರವೆಂಬ ಅವಿ ದ್ಯಾವಂತರ ತಪ್ಪು ತಿಳುವಳಿಕೆ, ವಿಜ್ಞಾ[illegible] ವಿಭಾಗಗಳು ರಾಜ್ಯಾದ್ಯಂತ ಬಹುತೇಕವಾಗಿ ಇಂಗ್ಲಿಷ್ ಮಾಧ್ಯಮದ[illegible]ಲ್ಲಿದ್ದು, ಅಲ್ಲಿ ಬೋಧನೆಯೂ ಸಹ ಇಂಗ್ಲಿಷ್ ಮಾಧ್ಯಮದಲ್ಲಿರುವುದ[illegible]ರಿಂದ ಅದನ್ನು ಎದುರಿಸುವ ಶಕ್ತಿ ಗ್ರಾಮೀಣ ಯುವಜನ ತೆಗಿಲ್ಲವೆಂಬ[illegible] ಕೀಳರಿಮೆ ಭಾವನೆ ಹೊಂದಿರುವುದು. ಕನ್ನಡ ಮಾಧ್ಯಮದಲ್ಲಿ ವಿಜ್ಞಾ[illegible] ಶಿಕ್ಷಣ ಕಾಲೇಜುಗಳು ಇಲ್ಲದಿರುವುದು, ಬಡತನ, ಸರಿಯಾದ[illegible] ಸೌಲಭ್ಯಗಳ ಮಾರ್ಗದರ್ಶನದ ಕೊರತೆ ಮುಂತಾದ ಕಾರಣಗಳಿಂದ[illegible] ವಿಜ್ಞಾನ ವಿಭಾಗಕ್ಕೆ ಹೋಗುವವರ ಸಂಖ್ಯೆ ಅತಿ ಕಡಿಮೆ ಇದ್ದು ಅವ[illegible]ರಿಗೆ ಸುಲಭವಾಗಿ ಕೈಗೆಟಕುವ ಹಾಗೂ ಅರಿವಿಗೆ ಬರುವ ಕಲಾ[illegible] ಮತ್ತು ವಾಣಿಜ್ಯ ವಿಭಾಗಗಳಿಗೆ ಹೆಚ್ಚಿನ ಪ್ರವೇಶವನ್ನು ಪಡೆಯುವುದು[illegible] ಸಹಜವಾಗಿದೆ. ಇದರಿಂದಾಗಿ ವೃತ್ತಿಪರ ಶಿಕ್ಷಣದಲ್ಲಿ ಇವರು ಅತಿ[illegible] ಕಡಿಮೆ ಇದ್ದು ವಂಚಿತರಾಗುತ್ತಿದ್ದಾರೆ. ಇದು ಹಿಂದುಳಿದ ಮತ್ತು[illegible] ಶ್ರೀಮಂತ ವರ್ಗಗಳ ತಾರತಮ್ಯಕ್ಕೆ ನಾಂದಿಯಾಗುತ್ತದೆ. ಗ್ರಾಮೀಣ[illegible]

ಮಾಹಿತಿ

ಜಾಗತೀಕರಣದ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶದ ಜನತೆಯನ್ನು ಮುಖ್ಯ ವಾಹಿನಿಗೆ ತರುವ ಹೆಚ್ಚಿನ ಜವಾಬ್ದಾರಿ ರಾಜ್ಯ ಸರ್ಕಾರಗಳಿಗಿಂತ ಸ್ಥಳೀಯ ಸರ್ಕಾರಗಳದ್ದಾಗಿದೆ. ಶಿಕ್ಷಣವು ಒಬ್ಬ ವ್ಯಕ್ತಿ, ಒಂದು ದೇಶ ಹಾಗೂ ಪ್ರಪಂಚದ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಸ್ಥಳೀಯ ಸರ್ಕಾರಗಳು ಕೇವಲ ವಯಸ್ಕರ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಸಹಕರಿಸಿದರೇ ಸಾಲದು. ಶಿಕ್ಷಣದ ಪ್ರತಿ ವಿಭಾಗಗಳಿಗೂ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದ್ದು ಅನಿವಾರ್ಯವಾಗಿದೆ.

ಡಾ॥ ಯು.ಪಿ. ಚಂದ್ರಶೇಖರ್

ದೇಶದ ಜನರಲ್ಲಿ ಸುಮಾರು ಶೇ. ೭೦ ರಿಂದ ೮೦
ಷ್ಟು ಮಕ್ಕಳು ವೃತ್ತಿಪರ ಹಾಗೂ ಹೊಸ ಹೊಸ
ಂತ್ರಿಕ ವಿಷಯಗಳ ಶಿಕ್ಷಣದಿಂದ ವಂಚಿತರಾಗುತ್ತಿರು
ದು ಗಂಭೀರವಾದ ವಿಷಯ. ಇನ್ನೂ ಕೇವಲ ಶೇ.
೦ ರಿಂದ ೩೦ರಷ್ಟು ಗ್ರಾಮೀಣ ಜನತೆ ಇದರ ಅವಕಾಶ
ದುಪಯೋಗ ಪಡಿಸಿಕೊಳ್ಳುತ್ತಿರುವುದು ಸತ್ಯ. ಅದರಲ್ಲಿ
ಹುತೇಕ ಜನ ಗ್ರಾಮೀಣ ಪ್ರದೇಶದಲ್ಲಿನ ಶ್ರೀಮಂತ
ತ್ತು ವಿದ್ಯಾವಂತ ವರ್ಗದ ಮಕ್ಕಳು. ಆದರೆ ಬಡ
ತ್ತು ಹಿಂದುಳಿದ ವರ್ಗಗಳ ಮಕ್ಕಳಲ್ಲಿ ಕೇವಲ ಶೇ. ೧
ದ ೫ರಷ್ಟು ಮಾತ್ರ ವಿದ್ಯಾವಂತರ ಮಾರ್ಗದರ್ಶನ
ಡೆದು ಸೇರುತ್ತಾರೆ. ಇನ್ನುಳಿದ ಬಹುತೇಕ ಗ್ರಾಮೀಣ
ಭೆಗಳು ಅವಕಾಶ ಸಿಗದೇ ಪ್ರತಿಭೆ ಬತ್ತಿ ಹೋಗುತ್ತಿ
ವ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ.

ಆದ್ದರಿಂದ ಶಿಕ್ಷಣ ತಜ್ಞರು, ಸ್ಥಳೀಯ ಸರ್ಕಾರಗಳು
ಭೀರ ಚಿಂತನೆ ನಡೆಸಿ ಇದಕ್ಕೆ ಸೂಕ್ತ ಕ್ರಮ ತೆಗೆದು
ಳ್ಳುವ ನಿಟ್ಟಿನಲ್ಲಿ ಶ್ರಮಿಸಬೇಕಾಗಿದೆ. ಇಲ್ಲದೇ ಹೋದಲ್ಲಿ
ವಲ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳ
ಮಂತರು ಮತ್ತು ವಿದ್ಯಾವಂತ ಮಕ್ಕಳು ಮಾತ್ರ
ತ್ತಿಪರ ಶಿಕ್ಷಣದಲ್ಲಿ ಮೇಲುಗೈ ಬೃಹದಾಕಾರವಾಗಿ
ೆದು ರಾಷ್ಟ್ರೀಯ ಅಭಿವೃದ್ಧಿ ಕುಂಠಿತವಾಗಲೂ ಮತ್ತು
ಸಮಾನತೆ ಹೆಚ್ಚಲು ಕಾರಣವಾಗುತ್ತದೆ. ಆದ್ದರಿಂದ ತತ್
ಣದಲ್ಲೇ ಸ್ಥಳೀಯ ಸರ್ಕಾರಗಳು ಈ ಮಾನವ
ಪನ್ಮೂಲ ಗುರ್ತಿಸುವಿಕೆ ಹಾಗೂ ಪುರಸ್ಕಾರ ನೀಡುವಿಕೆ
ಗ್ಗೆ ಗಂಭೀರ ಚಿಂತನೆ ನಡೆಸಿ ಸೂಕ್ತ ಕ್ರಮ ಕಂಡು
ಳ್ಳಬೇಕು.

ತ್ತಿಪರ ಶಿಕ್ಷಣ ಮತ್ತು ಸ್ಥಳೀಯ ಸರ್ಕಾರಗಳು

ಇಂದು ದೇಶದಾದ್ಯಂತ ಮೂರು ಹಂತದ ಪಂಚಾ
ತ್ ರಾಜ್ ವ್ಯವಸ್ಥೆ ಜಾರಿಯಲ್ಲಿದೆ. ಗ್ರಾಮಪಂಚಾ
ತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್
ವುಗಳು ಪ್ರಮುಖ ಸ್ಥಳೀಯ ಸರ್ಕಾರಗಳಾಗಿವೆ. ಅಲ್ಲದೇ
ರಸಭೆ, ಗ್ರಾಮಸಭೆಯೂ ಇದಕ್ಕೆ ಸೇರಿಕೊಳ್ಳುತ್ತಿದೆ. ಈ
ೇಲಿನ ಪ್ರಮುಖ ಸ್ಥಳೀಯ ಸರ್ಕಾರಗಳು ಈಗಾಗಲೇ
ಮೀಣಾಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು
ಮ್ಮಿಕೊಂಡು ಕಾರ್ಯನಿರ್ವಹಿಸುತ್ತವೆ. ಅಭಿವೃದ್ಧಿ ಕ್ಷೇತ್ರ
ಾದ ಶಿಕ್ಷಣ, ಆರೋಗ್ಯ, ಪರಿಸರ ಕುಡಿಯುವ ನೀರು
ವುಗಳ ಬಗ್ಗೆ ಹೆಚ್ಚಿನ ಆದ್ಯತೆ ನೀಡಿ ಅಭಿವೃದ್ಧಿ ಪಡಿಸು
ದು ಸ್ಥಳೀಯ ಸರಕಾರಗಳು ಮಾತ್ರ ಪೂರಕ ಕಾರ್ಯ
ು ಹಾಕಿಕೊಂಡು ಶ್ರಮಿಸುತ್ತವೆ. ಆದರೆ ಪ್ರಸ್ತುತ ಚಲಾ
ಣೆಯ ಲ್ಲಿರುವ ಮಾಹಿತಿ ತಂತ್ರಜ್ಞಾನ/ನವ ತಾಂತ್ರಿಕ
ಶಲ್ಯ ಶಿಕ್ಷಣವನ್ನು ಕಡೆಗಣಿಸಿವೆ. ಅದರಲ್ಲೂ ವೃತ್ತಿಪರ
ಣಗಳ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳು
ಕೊಂಡಿಲ್ಲದಿರುವುದು ಗಮನಿ ಸಬಹುದು. ಆದ್ದರಿಂದ
ನಿಟ್ಟಿನಲ್ಲಿ ವೃತ್ತಿಪರ ಮಾಹಿತಿ ತಂತ್ರಜ್ಞಾನ/ವಿಜ್ಞಾನ ಅಳ
ಿಕೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸರ್ಕಾರಗಳು
ಕೆಳಕಂಡಂತೆ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಗ್ರಾಮಪಂಚಾಯತ್: ಇದು ತನ್ನ ವ್ಯಾಪ್ತಿಯಲ್ಲಿ ಶೈಕ್ಷ
ಕ ಮಾಹಿತಿ, ಸಲಹೆ ಮತ್ತು ತರಬೇತಿ ಕೇಂದ್ರ ಎಂಬ
ಂದು ಸಮಿತಿಯನ್ನು ರಚಿಸಿ ಅದರಡಿಯಲ್ಲಿ ವೃತ್ತಿಪರ
ಣಕ್ಕೆ ಸಂಬಂಧಿಸಿದ ಮಾಹಿತಿ, ಸಲಹೆ, ತರಬೇತಿ
ನ್ನು ಸ್ಥಳೀಯ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ
ಡಬೇಕು. ಎಲ್ಲಾ ವಿಧದ ಶಿಕ್ಷಣಗಳ ಮಹತ್ವ ಉದ್ದೇಶ,
ೇಶ ನೀತಿ, ಕಾಲೇಜು ಗಳು, ಕೋರ್ಸ್‌ಗಳ ಮಾಹಿತಿ,

> **ಶಿಕ್ಷಣ ತಜ್ಞರು, ಸ್ಥಳೀಯ ಸರ್ಕಾರಗಳು ಗಂಭೀರ ಚಿಂತನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವ ನಿಟ್ಟಿನಲ್ಲಿ ಶ್ರಮಿಸಬೇಕಾಗಿದೆ. ಇಲ್ಲದೇ ಹೋದಲ್ಲಿ ಕೇವಲ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳ ಶ್ರೀಮಂತರು ಮತ್ತು ವಿದ್ಯಾವಂತ ಮಕ್ಕಳು ಮಾತ್ರ ವೃತ್ತಿಪರ ಶಿಕ್ಷಣದಲ್ಲಿ ಮೇಲುಗೈ ಬೃಹದಾಕಾರವಾಗಿ ಬೆಳೆದು ರಾಷ್ಟ್ರೀಯ ಅಭಿವೃದ್ಧಿ ಕುಂಠಿತ ವಾಗಲೂ ಮತ್ತು ಅಸಮಾನತೆ ಹೆಚ್ಚಲು ಕಾರಣವಾಗುತ್ತದೆ. ಆದ್ದರಿಂದ ತತ್‌ಕ್ಷಣದಲ್ಲೇ ಸ್ಥಳೀಯ ಸರ್ಕಾರಗಳು ಈ ಮಾನವ ಸಂಪನ್ಮೂಲ ಗುರ್ತಿಸುವಿಕೆ ಹಾಗೂ ಪುರಸ್ಕಾರ ನೀಡುವಿಕೆ ಬಗ್ಗೆ ಗಂಭೀರ ಚಿಂತನೆ ನಡೆಸಿ ಸೂಕ್ತ ಕ್ರಮ ಕಂಡುಕೊಳ್ಳಬೇಕು.**

ಶುಲ್ಕ, ಸೌಲಭ್ಯಗಳು ವಿದ್ಯಾರ್ಥಿ ವೇತನ, ಸಾಲಸೌಲಭ್ಯ, ವಿದ್ಯಾರ್ಥಿನಿಲಯ, ಪ್ರತಿಭಾ ಪರೀಕ್ಷೆಗಳು ಮುಂತಾದ ವಿಷಯಗಳ ಸಂಪೂರ್ಣ ಮಾಹಿತಿ ಒದಗಿಸಬೇಕು. ಇದನ್ನು ಪ್ರತಿ ಶೈಕ್ಷಣಿಕ ವರ್ಷ ಪ್ರಾರಂಭಕ್ಕೆ ಮುಂಚಿತವಾಗಿ ಪ್ರತಿ ಗ್ರಾಮಪಂಚಾಯ್ತಿ ಹಂತದಲ್ಲಿ ಪೋಷಕರ ವಿದ್ಯಾರ್ಥಿಗಳ ಸಮ್ಮುಖದಲ್ಲಿ ವಿಚಾರಗೋಷ್ಠಿ, ವಿಚಾರ ಸಂಕಿರಣಗಳನ್ನು ಕಡ್ಡಾ ಯವಾಗಿ ನಡೆಸಬೇಕು ಹಾಗೂ ಗ್ರಾಮಸಭೆಯಲ್ಲೂ ಇದೊಂದು ಪ್ರಮುಖ ವಿಷಯವಾಗಿ ಚರ್ಚಿಸಬೇಕು. ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಸಾರ್ವಜನಿಕರಿಗೆ ವಯಸ್ಸಿನ, ಲಿಂಗದ, ಜಾತಿ ಧರ್ಮ, ಬಡತನ–ಶ್ರೀಮಂತರೆಂಬ ಬೇಧವಿಲ್ಲದೆ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸೂಕ್ತ ಸಲಹೆ, ಮಾರ್ಗದರ್ಶನ, ಮಾಹಿತಿ ಮತ್ತು ತರಬೇತಿ ಈ ಕೇಂದ್ರಗಳಲ್ಲಿ ನೀಡಬೇಕು. ಈ ಕೇಂದ್ರದಲ್ಲಿ ಒಬ್ಬ ಶಿಕ್ಷಣ ತಜ್ಞರು ಕೆಲಸ ನಿರ್ವಹಿಸಬೇಕು ಹಾಗೂ ಅದರ ದಾಖಲೆ ಇಡತಕ್ಕದ್ದು. ಶಿಕ್ಷಣ ವ್ಯವಸ್ಥೆಯಲ್ಲಾದ ಹೊಸ ಹೊಸ ಬದಲಾವಣೆಗಳನ್ನು ಸಾರ್ವಜನಿಕರಿಗೆ ಆ ಸಂದರ್ಭದಲ್ಲಿ ಬಿತ್ತಿ ಪತ್ರಿಕೆ, ವಿಚಾರ ಸಂಕಿರಣ, ವಿಚಾರಗೋಷ್ಠಿಗಳ ಮೂಲಕ ಹಳ್ಳಿಯ ಜನರ ಬಿಡುವಿನ ಸೂಕ್ತ ಸಮಯ ಪರಿಗಣಿಸಿ ನೀಡತಕ್ಕದ್ದು ಇದಕ್ಕೆ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಾಯ ಪಡೆಯತಕ್ಕದ್ದು.

> **ಜಿಲ್ಲಾ ಪಂಚಾಯತ್ ಕೇಂದ್ರದಲ್ಲೂ ಶೈಕ್ಷಣಿಕ ಮಾಹಿತಿ ಮತ್ತು ತರಬೇತಿ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಬೇಕು. ಇದು ಇಡೀ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೇಂದ್ರಗಳ ಮೇಲ್ವಿಚಾರಣೆ ಮತ್ತು ಸಮನ್ವಯ ನಡೆಸಬೇಕು.**

ತಾಲ್ಲೂಕು ಪಂಚಾಯತ್: ಗ್ರಾಮ ಪಂಚಾಯಿತಿ ತನ್ನ ವ್ಯಾಪ್ತಿಯಲ್ಲಿ ಶೈಕ್ಷಣಿಕ ಮಾಹಿತಿ, ಸಲಹೆ ಮತ್ತು ತರಬೇತಿ ಕೇಂದ್ರ ತೆರೆಯುವಲ್ಲಿ ಸಹಕಾರ ನೀಡುವುದು. ಹಾಗೂ ಅದಕ್ಕೆ ಸೂಕ್ತವಾದ ಸಂಪನ್ಮೂಲ ವ್ಯಕ್ತಿಗಳನ್ನು ಗುರ್ತಿಸಿ ಸಕಾಲಕ್ಕೆ ಕಳುಹಿಸಿಕೊಡುವುದು. ತಾಲ್ಲೂಕಿನ ಶೈಕ್ಷಣಿಕ ಮಾಹಿತಿಯ ಪೂರ್ಣ ಚಿತ್ರಣ ಮಾಹಿತಿ ಮತ್ತು ರಾಜ್ಯಗಳಲ್ಲಿ ಅದರ ಸ್ಥಾನ ಮಾನ ತಿಳಿಸುವುದು. ಗ್ರಾಮ ಪಂಚಾಯತಿಯ ಜನಪ್ರತಿನಿಧಿಗಳಿಗೆ ಶಿಕ್ಷಣ ವ್ಯವಸ್ಥೆ, ಶಿಕ್ಷಣದ ಆಗುಹೋಗುಗಳ ಬಗ್ಗೆ ತರಬೇತಿ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಗ್ರಾಮಪಂಚಾಯತಿಗಳ ಶೈಕ್ಷಣಿಕ ಮಾಹಿತಿ ಮತ್ತು ತರಬೇತಿ ಕೇಂದ್ರಗಳ ಮೂಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಬದಲಾದ ಶೈಕ್ಷಣಿಕ ವ್ಯವಸ್ಥೆ ಬಗ್ಗೆ ಸೂಕ್ತ ಮಾರ್ಗದರ್ಶನ, ಸಲಹೆ ಹಾಗೂ ತರಬೇತಿ, ಮತ್ತು ವ್ಯಕ್ತಿತ್ವ ವಿಕಾಸದ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಬೇಕು. ಹೆಚ್ಚಿನ ಆದ್ಯತೆ (ಸ್ಕೋಪ್) ಇರುವ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆಯ ಬಗ್ಗೆ ಪೂರ್ವಸಿದ್ಧತೆ ತರಬೇತಿ ನೀಡಬೇಕು. ಇಲ್ಲಿ ಒಬ್ಬ ಶೈಕ್ಷಣಿಕ ಅಧೀಕ್ಷಕರನ್ನು ನೇಮಿಸಬೇಕು. ಇವರಿಗೆ ಒಬ್ಬ ಉನ್ನತ ಶಿಕ್ಷಣ ಪಡೆದ ಸಹಾಯಕ ಅಧೀಕ್ಷರರಿಬೇಕು. ಇವರು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಪಂಚಾಯಿತಿಗಳಲ್ಲಿನ ಶೈಕ್ಷಣಿಕ ಸಲಹೆ ಮಾಹಿತಿ ಹಾಗೂ ತರಬೇತಿ ಕೇಂದ್ರಗಳ ಕಾರ್ಯವೈಖರಿಯ ಮೇಲ್ವಿಚಾರಣೆ ನಡೆಸಬೇಕು ಮತ್ತು ಸೂಕ್ತ ಸಲಹೆ ನೀಡಿ ಕಾರ್ಯ ನಿರ್ವಹಿಸಬೇಕು. ಸಂಪನ್ಮೂಲ ವ್ಯಕ್ತಿಗಳನ್ನು ಗುರ್ತಿಸಿ ಅವರಿಂದ ಸಾರ್ವಜನಿಕರಿಗೆ ನಿರ್ದಿಷ್ಟ ಸಮಯದಲ್ಲಿ ಸೂಕ್ತ ಮಾಹಿತಿ, ಮಾರ್ಗದರ್ಶನ ತರಬೇತಿ ಕೊಡಿಸಬೇಕು. ಈ ಕೇಂದ್ರದಲ್ಲಿ ತಾಲ್ಲೂಕಿನ ವ್ಯಾಪ್ತಿಯ ಯಾವುದೇ ಜನಪ್ರತಿನಿಧಿ ಅಥವಾ ಸಾರ್ವಜನಿಕರು ಬಂದು ಮಾಹಿತಿ ಕೇಳಿದಾಗ ಅವರಿಗೆ ಸೂಕ್ತ ಮಾಹಿತಿ ನೀಡಬೇಕು. ಈ ಕೇಂದ್ರಗಳು ಪ್ರತಿಭೆ ವೃತ್ತಿ ಕೌಶಲ್ಯ, ಅಭಿರುಚಿ ಹಾಗೂ ಪ್ರವೃತ್ತಿಗಳನ್ನು ನಿರ್ದಿಷ್ಟವಾಗಿ ಗುರ್ತಿಸುವ ಕೇಂದ್ರಗಳಾಗಬೇಕು. ಈ ಅಂಶಗಳ ಆಧಾರದಲ್ಲಿ ಅವುಗಳಿಗೆ ಸೂಕ್ತ ವೃತ್ತಿ–ಕೌಶಲ್ಯ ಕೋರ್ಸ್‌ಗಳ ಆಯ್ಕೆಯ ಸಮನ್ವಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕು.

ಜಿಲ್ಲಾ ಪಂಚಾಯತ್: ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಪಂಚಾಯಿತಿಯಲ್ಲಿರುವಂತೆ ಜಿಲ್ಲಾ ಪಂಚಾಯತ್ ಕೇಂದ್ರದಲ್ಲೂ ಒಂದು ಶೈಕ್ಷಣಿಕ ಮಾಹಿತಿ ಮತ್ತು ತರಬೇತಿ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಬೇಕು. ಇದು ಇಡೀ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೇಂದ್ರಗಳ ಮೇಲ್ವಿಚಾರಣೆ ಮತ್ತು ಸಮನ್ವಯ ನಡೆಸಬೇಕು. ಜಿಲ್ಲಾ–ರಾಜ್ಯ–ರಾಷ್ಟ್ರೀಯ ಮಟ್ಟದಲ್ಲಿ ಬದಲಾದ ಶಿಕ್ಷಣದ ನೀತಿ–ನಿಯಮಗಳು, ಶಿಕ್ಷಣ ವ್ಯವಸ್ಥೆಯ ಬಗ್ಗೆ ಎಲ್ಲಾ ಕೇಂದ್ರಗಳ ಅಧೀಕ್ಷಕರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡುವುದು. ಇದಕ್ಕೆ ಸಂಬಂಧಿಸಿದ ಕಾರ್ಯ ಕ್ರಮಗಳ ವೆಚ್ಚಗಳನ್ನು ಶಿಕ್ಷಣದ ಖರ್ಚಿನಲ್ಲಿ ಭರಿಸುವುದು ಮತ್ತು ಅದನ್ನು ಬಳಸಲು ಸುತ್ತೋಲೆ ಹೊರಡಿಸುವುದು ಹಾಗೂ ಆಯವ್ಯಯಗಳ ಮಾಹಿತಿಯ ದಾಖಲೆಯಿಡ ತಕ್ಕದ್ದು. ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಗುರ್ತಿಸುವುದು. ಅದರಲ್ಲೂ ಸ್ವಯಂಸೇವಾ ಸಂಪ ನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವುದು ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಾಯ ಪಡೆಯುವುದು ಹಾಗೂ ಇದರ

ವೆಚ್ಚಕ್ಕೆ ಅಗತ್ಯವಿದ್ದಲ್ಲಿ ಸ್ವಯಂಪ್ರೇರಿತ ದಾನಿಗಳ ಮತ್ತು ಸಂಸ್ಥೆಗಳ ವತಿಯಿಂದ ಹಣ ಸಂಗ್ರ ಹಿಸು ವುದು. ಶೈಕ್ಷಣಿಕ ಮೇಳ, ಉದ್ಯೋಗ ಮೇಳ, ಪ್ರತಿಭಾ ಪರೀಕ್ಷೆಗಳ ಮೇಳಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪೋಷಕರಿಗೆ ಮತ್ತು ವಿದ್ಯಾರ್ಥಿಗಳ ಸೂಕ್ತ ಸಮಯದಲ್ಲಿ ಹಮ್ಮಿಕೊಳ್ಳಬೇಕು. ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣ ನೀಡುವ ಜವಾಬ್ದಾರಿ ವಹಿಸಿಕೊಳ್ಳತಕ್ಕದ್ದು. ಇದಕ್ಕೆ ಒಬ್ಬ ನಿರ್ದೇಶಕರು ಸಮ ನ್ವಾಧಿಕಾರಿ, ಸೂಕ್ತ ಸಂಖ್ಯೆಯ ಆಡಳಿತ ಸಿಬ್ಬಂದಿ ಇದ್ದು ಇದಕ್ಕೆ ಸಂಬಂಧಿಸಿ ದಂತೆ ಅಧ್ಯಕ್ಷರ ಮತ್ತು ಸದಸ್ಯರ ಸಭ 'ಯಲ್ಲಿ ಅನುಮೋದನೆ ಪಡೆಯಬೇಕು. ಇಲ್ಲಿ ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪವುಂಟಾಗದಂತೆ ನಿರ್ವ ಹಿಸಿಕೊಳ್ಳಬೇಕು.

ಪುರಸಭೆ/ನಗರಸಭೆಗಳು: ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿ ಸಿದ ಮಾಹಿತಿ, ಸಲಹೆ, ತರಬೇತಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷ ವಾಗಿ ಪಾಲ್ಗೊಳ್ಳಬೇಕು. ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಸಹಕಾರದೊಂದಿಗೆ ವಿಚಾರ ಸಂಕಿರಣ, ಸಿ.ಇ.ಟಿ ಪರೀಕ್ಷಾ ತರಬೇತಿ, ವಿಷಯಗಳ ಆಯ್ಕೆಯ ಮಾಹಿತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಅಥವಾ ನಗರ ಸಭೆಯೇ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಯ ಶೈಕ್ಷಣಿಕ ಕೇಂದ್ರಗಳಲ್ಲಿ ವೃತ್ತಿಪರ ಶಿಕ್ಷಣಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅದಕ್ಕೆ ಅಲ್ಲಿನ ಕೇಂದ್ರದ ಅಧೀಕ್ಷಕರು ಸಂಪೂರ್ಣ ಸಹಕಾರ ನೀಡಬೇಕು. ಹಾಗೂ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳ ಮತ್ತು ಹಣ ಸಹಕಾರ ನೀಡುವುದು. ಹಾಗೂ ತರಬೇತಿ ಕೇಂದ್ರಗಳ ಹೊಂದಾಣಿಕೆಯಿಂದ ಕಾರ್ಯಕ್ರಮ ನಡೆಸುವುದು.

ಈ ಮೇಲ್ಕಂಡಂತೆ ಸ್ಥಳೀಯ ಸರಕಾರಗಳು ತಮ್ಮ ವ್ಯಾಪ್ತಿಯಲ್ಲಿ ಶೈಕ್ಷಣಿಕ ಮಾಹಿತಿ, ಸಲಹೆ ಮತ್ತು ತರಬೇತಿ ಕೇಂದ್ರ ತೆರೆದು ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೀತಿ-ನಿಯಮಗಳು, ಕಾಲೇಜುಗಳ ವಿವರ, ಶುಲ್ಕದ ವಿವರ, ಸೌಲಭ್ಯ ಗಳ ವಿವರ, ಪರೀಕ್ಷೆಯ ವಿಷಯಗಳ ಆಯ್ಕೆ, ಕೋರ್ಸ್‌ಗಳ ಆಯ್ಕೆಗಳ ಬಗ್ಗೆ ಪೂರ್ವ ಸಿದ್ಧತೆಯ ಬಗ್ಗೆ ತರಬೇತಿ, ಸಲಹೆ, ಮಾಹಿತಿಯನ್ನು ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಒದಗಿ ಸಲು ಸಾಧನವಾಗುವಂತಿರಬೇಕು. ಈ ಕೇಂದ್ರಗಳು ಮೂಲತಃ ಸ್ಥಳೀಯ ಪ್ರತಿಭೆಗಳನ್ನು ಗುರ್ತಿಸುವ ಕೇಂದ್ರಗಳಾಗಿ, ಈ ಪ್ರತಿಭೆಗಳ ಮೂಲಕ ಮೂಲಸಲೆಯಲ್ಲಿಯ ವೃತ್ತಿ, ಪ್ರವೃತ್ತಿ, ಆಸಕ್ತಿ ಮತ್ತು ಅಭಿರುಚಿಗಳನ್ನು ಪ್ರೋತ್ಸಾಹಿಸಿ ಆ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡಿ ಅದಕ್ಕೆ ಪೂರಕವಾದ ಹೊಸ ಹೊಸ ಕೋರ್ಸ್‌ಗಳ ಸ್ಪೆಷಲೈಸೇಷನ್‌ಗಳ ಆಯ್ಕೆಗೆ ಗ್ರಾಮೀಣ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಪ್ರೋತ್ಸಾಹಿಸುವ ಮೂಲಕ ಈ ಪ್ರತಿಭೆಗಳು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಮಾತ್ರವಲ್ಲದೇ ಅಂತಾರಾಷ್ಟ್ರೀಯ ಮುಖ್ಯವಾಹಿನಿಯೆಡೆಗೆ ಅರ್ಹಗೊಳ್ಳಲು ಸಿದ್ಧಗೊಳಿಸುವ ಸಮಯ ಈಗ ಬಂದಿದೆ.

ಈ ಕಾರ್ಯವನ್ನು ನಮ್ಮ ಸ್ಥಳೀಯ ಸಂಸ್ಥೆ/ಸರ್ಕಾರಗಳು ಆದ್ಯತೆ ಮೇಲೆ ಕೈಗೊಂಡು ಕಾರ್ಯನಿರತರಾದರೆ ಮಾತ್ರ ಗ್ರಾಮೀಣ ಪ್ರದೇಶದಲ್ಲಿನ ಪ್ರತಿಭೆಗಳು ಬೆಳಕಿಗೆ ಬಂದು ಅವರ ಪ್ರತಿಭೆ ಬೆಳಗುವುದರ ಜೊತೆಗೆ ಶ್ರೀಮಂತ ಮತ್ತು ಬಡವರ ಅಂತರ ಕಡಿಮೆ ಮಾಡಿದಂತಾಗುತ್ತದೆ. ಇದರಿಂದ ಶಿಕ್ಷಣದ ಸಕಾರಾತ್ಮಕ ಗುರಿ ಮತ್ತು ರಾಷ್ಟ್ರಾಭಿವೃದ್ಧಿ ಸಾಧಿಸಬಹುದು. □



ನೀವು ಹುಟ್ಟಿದಂತೆ ನಾನು ಹುಟ್ಟಿದ್ದೂ ಆಕಸ್ಮಿಕವೆ.
ಆಕಾಶಪ್ಪ ಇರಿದ ಜೀವೋತ್ಸಾಹದ ಮಿಂಚಿನಲಗು ಇನ್ನೂ ಮುರಿದಿಲ್ಲ.
ಭೂಮವ್ವ ಊಡಿಸಿದ ಅನುಭಾವ ಅಮೃತದಭಿರುಚಿ ಒಂದಿಷ್ಟೂ ಕೆಟ್ಟಿಲ್ಲ ಅಷ್ಟೆ. -೧

ನಾನೂ ನಿಮ್ಮಂತೆಯೆ ಎರಡು ಕಾಲಿನ ಮನುಷ್ಯ.
ನನ್ನ ಕಾಲುಗಳಿಗೆ ನದಿಯ ಮೇಲೆ ನಡೆಯುವ ಸಾಗರದೊಳಗೆ ಓಡುವ
ಪರ್ವತಗಳ ನೆತ್ತಿ ಹತ್ತಿ ಮುನ್ನೂರರವತ್ತು ಡಿಗ್ರಿಗಳ ಜಗತ್ತುಗಳಿಗೂ ಇಳಿಯುವ ತವಕ ಅಷ್ಟೆ. -೨

ನನಗೂ ನಿಮ್ಮ ಹಾಗೆ ಎರಡೆ ಕೈ
ಅವು ಒಮ್ಮೊಮ್ಮೆ ತೀರಾ ಎಡಕ್ಕೆ ವಾಲಿ ಎಡವಟ್ಟನ್ನೆ ಸೃಷ್ಟಿಸಿಬಿಡುತ್ತವೆ.
ಒಮ್ಮೊಮ್ಮೆ ಬಲಕ್ಕೆ ಹೊರಳಿ ದೀನವಾಗಿ ಎಲ್ಲಾ ಬಲ್ಲ ದೈವಕ್ಕೆ ಕೈಮುಗಿಯುತ್ತವೆ ಅಷ್ಟೆ. -೩

ನನಗೂ ನಿಮ್ಮ ಹಾಗೆ ಎರಡೆ ಕಣ್ಣು.
ಅವು ತೆರೆದ ಎಚ್ಚರದಲ್ಲು ಕನಸು ಕಾಣುತ್ತ
ಕನಸು ಕಂಡದ್ದನ್ನೆಲ್ಲ ನನಸಿಗನುವಾದಿಸುತ್ತ ಚಡಪಡಿಸುತ್ತವೆ ಅಷ್ಟೆ. -೪

ನನಗು ನಿಮ್ಮ ಹಾಗೆ ಒಂದೆ ಹೃದಯ.
ಅದು ಇಡಿ ವಿಶ್ವವನ್ನೆ ತನ್ನ ಸಂಸಾರವೆಂದು ಭಾವಿಸುತ್ತ
ಸಕಲ ಚರಾಚರಗಳನ್ನೂ ಸಂಭಾಳಿಸುವ ಹಂಬಲದಲ್ಲಿ ಲಬಲಬಿಸುತ್ತದೆ ಅಷ್ಟೆ. -೫

ನಿಮ್ಮ ಹಾಗೆ ನನಗು ಬಹುಶಃ ಇದೊಂದೆ ಬದುಕು.
ಸಾವು ಬರೆ ಪಂಚಮಹಾಭೂತಗಳಿಗೆ ನನ್ನನ್ನು ಹಂಚಿಹಾಕುತ್ತದೊ
ತಲ್ಲಣವಿಲ್ಲದ ಮುಕ್ತಿವಲಯಕ್ಕೆ ನನ್ನ ಅರಿವಿನಾಕೃತಿಯನ್ನು ಕರೆದೊಯ್ಯುತ್ತದೊ ಗೊತ್ತಿಲ್ಲ ಅಷ್ಟೆ. -೬

○ ಬಿದರಹಳ್ಳಿ ನರಸಿಂಹಮೂರ್ತಿ

ನನ್ನ ಎದೆಯೊಳಗಿಟ್ಟ
ಅವರ ಪಾದಗಳು
ಮನಸ್ಸಿನಲ್ಲಿ ಮುಳ್ಳಿನಂತೆ
ಸದಾ ಅಳುಕುತ್ತವೆ.
ಹೌದು!
ಮುಗುಳ್ನಗುತ್ತಲೇ ಇರುತ್ತಾರೆ
ಎದೆ ನಡುಗುವ ಹಾಗೆ
ಅನುಕಂಪ ಪಡುವ–
ಇವರು:
ರಕ್ತ ಕಂಡರೆ ಪ್ರಜ್ಞೆದಪ್ಪುವರು
ಹಿಡಿಗಾತ್ರದ 'ಅಹಿಂಸಾ ತತ್ವ'
ತಲೆಗೆ ಸುತ್ತಿಕೊಂಡ ರಕ್ತದಾಹಿಗಳು.
ನೆನಪಾದಗಲೆಲ್ಲ....
ಹೃದಯ ಕೈಯಲ್ಲಿ ಹಿಡಿದಿರುತ್ತೇನೆ.

ಪ್ರತಿ ಹೆಜ್ಜೆಯೂ
ಕಪ್ಪು ಗುರುತಾಗಿ
ಆಳ ಗುರುತಿಸಲಾಗದ ವೇಧನೆಯು..
ಕಣ್ಣೀರನ್ನು ಹಿಂಗಿಸಿದೆ.

ಕಾಲದ ಕಟಕಟೆಯಲ್ಲಿ
ಇಬ್ಬರೂ ಅಪರಾಧಿಗಳೇ
ಇಲಾವು ಹಿಡಿಯುವ ಹಕ್ಕು
ಅವರಿಗೆ ಮಾತ್ರ

○ ರಾಮಪ್ಪ ಮಾದರ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ದಲಿತ್ ಡೈರಿ

"ಅತ್ಯಂತ ಜನಸಂದಣಿಯಿರುವ ಕೆಲವು ಕಡೆ ಬಾಂಬ್ ಭಯಹುಟ್ಟಿಸಲಾರದು. ಆದರೆ ಹಸಿನ ಸ್ಫೋಟ ಭಯಾನಕವಾಗುತ್ತದೆ" ಎಂದು ರಿನೆ ದುಬಾಸ್ ಹೇಳಿದ್ದ. ಭಾರತವು ಅವನ ಪ್ರಕಾರ ಆ ವರ್ಗದಲ್ಲಿತ್ತು. ಆಶ್ಚರ್ಯವೆಂಬಂತೆ ೧೯೮೦ರಲ್ಲಿ ಭಾರತವು ಆ ಬೃಹತ್ ಸಾವಿನ ಅಂಚಿನಲ್ಲಿರುವಾಗ, ಅದು ೧೫.೫ ಮೆಟ್ರಿಕ್ ಟನ್ಸ್ ಗೋಧಿಯನ್ನು ಹೆಚ್ಚುವರಿಯಾಗಿ ಹೊಂದಿತ್ತು. ೧೯೬೦-೮೦ರ ನಡುವೆ ಭಾರತದ ಆಹಾರ ಉತ್ಪಾದನೆ ೧.೮ರಷ್ಟು ಬೆಳೆದರೆ, ಜನ ಸಂಖ್ಯೆಯು ೧.೫೫ರ ಸಂಖ್ಯೆಯಲ್ಲಿ ಬೆಳೆದಿತ್ತು. ಇದು ಸ್ಪಷ್ಟವಾಗಿ ಜನ ಸಂಖ್ಯಾ ಬೆಳವಣಿಗೆಯನ್ನು ಆಹಾರದ ಉತ್ಪಾದನೆ ಮೀರಿಸಿ ನಿಂತಿತ್ತು.

ಅನು: ಡೊಮಿನಿಕ್ ಡಿ

ಬೋರ್ಲಾಗ್ ಜೀವಂತ ದೇವಾರಾಗಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

೧೭೬೬ರಲ್ಲಿ ಜನ್ಮತಾಳಿದ ಥಾಮಸ್ ಮಾಲ್ಥೂಸ್ ಚರಿತ್ರೆಯಲ್ಲಿ ಕೊಳೆತ ತರಕಾರಿಯಂತೆ ಮೊದಲ ನಾಗರಿಕ ಸೂತಕ ವ್ಯಕ್ತಿ. ಆತನ ಪ್ರಕಾರ ಜನಸಂಖ್ಯೆ ರೇಖಾಗಣಿತದಂತೆ ಬೆಳೆದರೆ, ಆಹಾರ ಅಂಕಗಣಿತದಂತೆ ಉತ್ಪಾದನೆಯಾಗುತ್ತದೆ. ಆತನ ರೀತಿಯಲ್ಲಿ ಹೇಳುವುದಾದರೆ ಚರಿತ್ರೆಯಲ್ಲಿ ಇಂಗ್ಲೇಂಡ್ ದೊಡ್ಡ ಸ್ಮಶಾನವಾಗಿ ಪರಿವರ್ತನೆಗೊಳ್ಳುತ್ತದೆ. ಮಾಲ್ಥೂಸ್ ೧೮೩೪ರವರೆಗೆ ಜೀವಿಸಿದ್ದನಾದರೂ, ಇಂಗ್ಲೇಂಡ್ ಹಸಿವಿನಿಂದ ಇರದ್ದಿದ್ದರೂ ಅವನು ಭವಿಷ್ಯ ನುಡಿದಂತೆ ಅದು ಸ್ಮಶಾನವಾಗಿಬಿಟ್ಟಿತು.

ಮಾಲ್ಥೂಸ್ ಸತ್ತನಾದರೂ ಆತನ ಸಿದ್ಧಾಂತವು ಸಾಯದೆ ಉಳಿದು ಕೊಂಡಿದೆ. ಪಾಲ್ ಎರ್ಲಿಕ್ ಕಾದಂಬರಿಕಾರನೇನೂ ಅಲ್ಲ. ಆದರೂ ಆತನ **ಪಾಪ್ಯುಲೇಷನ್ ಬಾಂಬ್** (೧೯೬೮) ಕಾದಂಬರಿಯಂತೆ ಮಾರಾಟವಾಯಿತು. ರೊನಾಲ್ಡ್ ಬೇಯ್ಲಿ ತನ್ನ ಕಥಾನಕದಲ್ಲಿ ಅದ್ಭುತವಾಗಿ, ಏಪ್ರಿಲ್ ೨೨, ೧೯೭೦ರಂದು ಬಂದ ಈ **ಭೂ-ದಿನಾಚರಣೆ**ಯ ಭಾವವನ್ನು ಸೆರೆಹಿಡಿಯುತ್ತಾ, ಆ ಯಮಗಂಡ ಪ್ರವೃತ್ತಿಯನ್ನು ಹೊರಗೆಡಹಿದ.

"ಇಡೀ ಮನುಕುಲವನ್ನು ಪೋಷಿಸಲು ನಡೆಸುತ್ತಿದ್ದ ಹೋರಾಟ ಅಂತ್ಯಗೊಂಡಿದೆ," ಎಂದು ಎರ್ಲಿಕ್ ಗುಡುಗಿದ. "೧೯೮೦ರ ವೇಳೆಗೆ ಭಾರತವು ತನ್ನ ಎರಡು ಮಿಲಿಯನ್ ಜನರಿಗೆ ಆಹಾರ ಒದಗಿಸಲು ಸಾಧ್ಯವಾಗುವುದಿಲ್ಲ" ಎಂದು ಘೋಷಿಸುತ್ತಾನೆ. ಹಾರ್ವಡ್‌ನ ಜೀವ ಶಾಸ್ತ್ರಜ್ಞ ಹೀಗೆಂದು ಅಂದಾಜು ಮಾಡಿದ, "ಈ ಕ್ಷಣದಲ್ಲಿ ಕಾರ್ಯ ಪ್ರವೃತ್ತರಾಗದಿದ್ದಲ್ಲಿ ಇನ್ನೊಂದು ೧೫ ಅಥವಾ ೩೦ ವರ್ಷಗಳಲ್ಲಿ ಈ ನಾಗರೀಕತೆ ಕೊನೆಗೊಳ್ಳುತ್ತದೆ." "ಮಾನವ ಚರಿತ್ರೆಯಲ್ಲಿ ಅತಿ ದೊಡ್ಡ ಸಾಕ್ಷಿಯೆಂಬಂತೆ ಸಾಯಲಿರುವ ಅನೇಕ ಮಂದಿ ಈಗಾಗಲೇ ಜನ್ಮತಾಳಿದ್ದಾರೆ." ಎಂದು ಎರ್ಲಿಕ್ ಬರೆದಿದ್ದಾನೆ. ಅವನ ಲೆಕ್ಕಾಚಾರದಂತೆ, "೧೯೮೦ ಮತ್ತು ೧೯೮೯ರ ನಡುವೆ ಸುಮಾರು ನಾಲ್ಕು ಬಿಲಿಯನ್ ಜನ ಆ ಬೃಹತ್ ಸಾವಿನಲ್ಲಿ ಸೇರಿ ಕೊಳ್ಳುತ್ತಾರೆ; ಅವರಲ್ಲಿ ೬೫ ಮಿಲಿಯನ್ ಜನ ಅಮೆರಿಕಾದವರೂ ಇದ್ದಾರೆ." ವಿಲಿಯಂ ಮತ್ತು ಪಾಲ್ ಪ್ಯಾಡೊಕ್‌ರ ೧೯೭೫-ಕ್ಷಾಮ (೧೯೬೭) ಕೃತಿಯಲ್ಲಿ ಹೇಳಿರುವಂತೆ ಭಾರತವನ್ನು ರಕ್ಷಿಸುವುದರಲ್ಲಿ ಪ್ರಯೋಜನವೇನಿಲ್ಲ. "ಈಗಾಗಲೇ ಕಾಲ ಮಿಂಚಿಹೋಗಿದೆಯಾದ್ದರಿಂದ ಜನಸಮೂಹವನ್ನು ಹಸಿವಿನಿಂದ ತಡೆಯಲಾಗುವುದಿಲ್ಲ" ಎಂದು ಹೇಳಿದವನು ಡೆನ್ನಿಸ್ ಹೇಯಸ್. "ಅತ್ಯಂತ ಜನಸಂದಣಿಯಿರುವ ಕೆಲವು ಕಡೆ ಬಾಂಬ್ ಭಯಹುಟ್ಟಿಸಲಾರದು. ಆದರೆ ಹಸಿನ ಸ್ಫೋಟ ಭಯಾನಕವಾಗುತ್ತದೆ" ಎಂದು ರಿನೆ ದುಬಾಸ್ ಹೇಳಿದ್ದ. ಭಾರತವು ಅವನ ಪ್ರಕಾರ ಆ ವರ್ಗದಲ್ಲಿತ್ತು. ಆಶ್ಚರ್ಯವೆಂಬಂತೆ ೧೯೮೦ ರಲ್ಲಿ ಭಾರತವು ಆ ಬೃಹತ್ ಸಾವಿನ ಅಂಚಿನಲ್ಲಿರುವಾಗ, ಅದು ೧೫.೫ ಮೆಟ್ರಿಕ್ ಟನ್ಸ್ ಗೋಧಿಯನ್ನು ಹೆಚ್ಚುವರಿಯಾಗಿ ಹೊಂದಿತ್ತು. ೧೯೬ ೦-೮೦ರ ನಡುವೆ ಭಾರತದ ಆಹಾರ ಉತ್ಪಾದನೆ ೧.೮ರಷ್ಟು ಬೆಳೆದರೆ, ಜನ ಸಂಖ್ಯೆಯು ೧.೫೫ರ ಸಂಖ್ಯೆಯಲ್ಲಿ ಬೆಳೆದಿತ್ತು. ಇದು ಸ್ಪಷ್ಟವಾಗಿ ಜನ ಸಂಖ್ಯಾ ಬೆಳವಣಿಗೆಯನ್ನು ಆಹಾರದ ಉತ್ಪಾದನೆ ಮೀರಿಸಿ ನಿಂತಿತ್ತು.ಹಸಿರು ಕ್ರಾಂತಿ ಯಿಂದಾಗಿ ಕ್ಷಾಮಗಣರಾಜ್ಯವಾದ ಭಾರತವು ಆಹಾರ ರಫ್ತು ಮಾಡುವ ರಾಷ್ಟ್ರವಾಗಿ ಬದಲಾಯಿತು!

ಸಾವಿನಿಂದ ತಪ್ಪಿಸಿಕೊಂಡ ಅನೇಕ ಮಂದಿ ಭಾರತೀಯರು ಹಸಿರು ಕ್ರಾಂತಿಯನ್ನು-ದೈವ ಏನೆಂದು ಗೊತ್ತಿಲ್ಲದಿದ್ದರೂ-ದೈವದ ಕೊಡುಗೆಯೆಂದೇ ಕಾಣುತ್ತಾರೆ. ಹೀಗಿರುವಾಗ ಆತನಿಗೆ ಈ ಜನವರಿ ಯಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಬೇಕೆಂದಿರುವಾಗ ಆತ ನನ್ನು 'ಮೆಕ್ಸಿಕನ್ ವಿಜ್ಞಾನಿ'ಯೆಂದು ವರ್ಣಿಸಲಾಯಿತು. ದಡ್ಡತನ ಮತ್ತು ಕೃತಘ್ನನಾದ ಭಾರತ ಈ ಮಾರ್ಚ್ ೨೫ರಂದೂ ಸಹ ಮೌನ

ಯೇ ಇದ್ದುಬಿಟ್ಟಿತು. ಅಂದು ಯಾವುದೇ ನಾರ್‌ಗಳಾಗಲೀ, ಆಚರಣೆಗಳಾಗಲೀ ಅಥವಾ ಜನಿಕ ರ್‍ಯಾಲಿಗಳಾಗಲೀ ಇರಲಿಲ್ಲ.

"ಸೂತಕ ನುಡಿಯುವವರನ್ನು ವಿಜ್ಞಾನದಿಂದ ತ್ರ ಸೋಲಿಸ ಬಹುದು" ಎಂದು ವಿದ್ವಾಂಸ ಸಹಪಾಠಿ ಶ್ಯಾಮ್‌ಬಾಬು ಹೇಳು ತ್ತಾನೆ. "ಹೀಗೇನೂ ಡಬೇಕಾಗಿಲ್ಲ" ಎಂದು ನನ್ನ ದೆಹಲಿಯ ಲ್ಲಿರುವ ತ ವಾದಿಸುತ್ತಾನೆ. ಈತನಿಗೆ ಒಂದು ಬಿಲಿಯನ್ ಷ್ಯರನ್ನು ರಕ್ಷಿಸುವುದೆಂದರೆ ಅದು ದೈವದಿಂದ ತ್ರ ಸಾಧ್ಯ.

೯೨ನೇ ಜನ್ಮದಿನಾಚರಣೆಯಲ್ಲಿರುವ ನಾರ್ಮನ್ ರ್ಲಾಗ್ ನನ್ನು ನಾನು ಏನೆಂದು ಕರೆಯಬೇಕು ಾಗುತ್ತಿಲ್ಲ. ಬೋರ್ಲಾಗ್ ನನ್ನ ಮನೆಯ ಡಕನ್ಸ್ ಸ್ಯರನ್ನು ಉಳಿಸಿದ್ದಾನಲ್ಲದೆ, ಭಾರತದ ಮಿಲಿ ಯಗಟ್ಟಲೆ ವರನ್ನು ರಕ್ಷಿಸಿದ್ದಾನೆ. ೬೦ರ ದಶಕದ ನೆನಪುಗಳು ಕ್ರಿಯೆಯಾಗಿ ಈಗ ಕಾಣಿಸಬಹುದು. ಹಸಿವಿನಿಂದ ಾಲಾದ ಜನ ಆಲದ ಮರದ ಹಣ್ಣಿಗಾಗಿ ಳೊಡನೆ ಹೋರಾಟಕ್ಕಿಳಿ ದರೆ, ಕೆಳಗಡೆ ಪಶುಗಳು ುವ ಹಣ್ಣಿಗಾಗಿ ಕಾಯುತ್ತಿ ರುತ್ತಿದ್ದವು.

ಬೋರ್ಲಾಗ್‌ನ ಅಧಿಕ ಇಳುವರಿಯ, ರೋಗ-ೀಧಕ ಗೋಧಿ ತಳಿಯು ಮಾನವ ಮತ್ತು ಪ್ರಕೃತಿಯ ವಿನ ಸಂಬಂಧವನ್ನು ಪುನರುತ್ಥಾನಗೊಳಿಸಿದೆ. ದಿಕಾಲದಿಂದಲೂ ಮಾನವ ಆಹಾರ ಬೆಳೆ ವುದಕ್ಕಾಗಿ ಅರಣ್ಯವನ್ನು ನಾಶ ಮಾಡುತ್ತಲೇ ತ್ತಿದ್ದಾನೆ. ಅದನ್ನು ಬೋರ್ಲಾಗ್ ಶಾಶ್ವತವಾಗಿ ಬದ ಮಿಸಿದ. ಆತ ಸಾಧಿಸಿ ತೋರಿಸಿದ್ದೇನೆಂದರೆ ಬೀಜ ರಿ-ಇಂಜಿನಿಯರಿಂಗ್ ಮಾಡುವ ಮೂಲಕ ಉತ್ಪಾ ಯನ್ನು ರೇಖಾಗಣಿತ ರೀತಿಯಲ್ಲಿ ದ್ವಿಗುಣಗೊಳಿಸಿದ. ಲಿಫೋರ್ನಿಯಾದಲ್ಲಿರುವ ಸಾಕ್ಷ್ಯ ಚಿತ್ರಗಾರ ಸಲೀಲ್ ್‌ನ ಪ್ರಕಾರ, "ಈ ಅಧಿಕ ಇಳುವರಿಯ ಬೇಸಾಯ ವಾಗಿ ೧೦೦ ಮಿಲಿಯನ್ ಎಕರೆ ಭೂಮಿಯನ್ನು ವುದರಿಂದ ಉಳಿಸಿದ."

೧೯೭೦-೨೦೦೦ದ ನಡುವೆ ಜಾಗತಿಕ ಜನಸಂಖ್ಯೆ ಬಿಲಿಯನ್‌ಗೆ ಬೆಳೆಯಿತು. ಈ ಜನಸಂಖ್ಯೆಗೆ ಉಣ ಸಲಿಕ್ಕಾಗಿ ಜಗತ್ತಿನಾದ್ಯಂತ ಇದ್ದ ಹಸಿರು ಕಾಡನ್ನು ಮಾಡಲಾಗಿದೆ. ಅಲ್ಲದೆ ಮಿಲಿಯಗಟ್ಟಲೆ ಎಕರೆ ಮಿಯನ್ನು ಉಳುಮೆಮಾಡಿ, ಬೆಳೆ ತೆಗೆಯಬೇಕಾ ಅದಕ್ಕೆ ಎಷ್ಟು ಅಂತರ್‌ಜಲವನ್ನು ಬಳಸಲಾಗಿದೆ. ಜಲಕ್ಷಾಮಕ್ಕೂ ಕಾರಣವಾಗಿದೆಯಲ್ಲವೇ? ಹೀಗಿರು ಬೋರ್ಲಾಗ್ ಒಂದು ಪರ್ಯಾಯವನ್ನು ಒದಗಿಸುವ ಲಕ ತೃತೀಯ ಜಗತ್ತನ್ನು ಉಳಿಸಿದನೆನ್ನಬೇಕು. ರ್ಲಾಗ್‌ನ ಗೈರು ಹಾಜರಿಯಲ್ಲಿ ಅಮೆರಿಕಾವು ತನ್ನ ಧಿಯ ಶಕ್ತಿಯಿಂದಲೇ ಜಗತ್ತನ್ನು ಕುಣಿಸುತ್ತಿತ್ತು. ರೂ ಭಾರತದಂಥ ರಾಷ್ಟ್ರಗಳು ಆತನನ್ನು ನಮಿಸದೇ ನವಾಗಿಯೇ ಉಳಿದಿವೆ.

೧೯೧೪ರಲ್ಲಿ ಜನಿಸಿದ ಬೋರ್ಲಾಗ್‌ಗೆ ೧೯೭೦ರಲ್ಲಿ ಬಲ್ ಪಾರಿತೋಷಕವನ್ನು ನೀಡಲಾಯಿತು. ಆತ ರೋಗ ಮತ್ತು ಜಿನೆಟಿಕ್ಸ್‌ನಲ್ಲಿ ಡಾಕ್ಟರೇಟ್ ಪದವಿ ದ. ೧೯೪೪ರಲ್ಲಿ ಬ್ರೆಜಿಲ್ ಚರಿತ್ರೆಯ ಬಹುದೊಡ್ಡ ತಿಗೆ ಕಾರಣ ಪುರುಷನಂತೆ ಆತ ಬ್ರೆಜಿಲ್ ಪ್ರವೇಶಿಸು . ಎಲ್ಲಾ ದೇವರುಗಳನ್ನು ಮನುಷ್ಯನೇ ನಿರ್ಮಿಸಿದ್ದು . ಆದರೆ ಈ ಮನಷ್ಯನೇ ದೈವೀ ಪುರುಷನಾದ. ಬೋರ್ಲಾಗ್‌ನ ತಾತ ಆಕಸ್ಮಿಕವೆಂಬಂತೆ ಒಬ್ಬ ಇವಾಂಜಲಿಸ್ಟ್ ಆಗಿದ್ದ. ಅಮೆರಿಕಾದ ಟಸ್ಕಿಗೀ ವಿಶ್ವವಿದ್ಯಾಲಯದಲ್ಲಿರುವ ಸಿ.ಎಸ್. ಪ್ರಕಾಶ್ ಎಂಬ ವಿಜ್ಞಾನಿಯ ಪ್ರಕಾರ, ನಾರ್ಮನ್ ಬೋರ್ಲಾಗ್ ಭಾರತದ ಆಹಾರ ಸ್ವಾವಲಂಬನೆಗೆ ಕಾರಣನಾದ ಮಹಾನ್ ಮಾನವತವಾದಿಯಾಗಿದ್ದಾನೆ." ಇಂಥ ಶ್ರೇಷ್ಠ ವ್ಯಕ್ತಿಗೆ ಭಾರತ ರತ್ನ ಹಾಗೂ ಗೌರವ-ನಾಗರೀಕತ್ವವನ್ನು ನೀಡಿದಲ್ಲಿ ನಮ್ಮೆಲ್ಲರ ನಮನವನ್ನು ಸಲ್ಲಿಸಿದಂತಾದೀತು. ಆದ್ದ ರಿಂದ ಈ ಜಗತ್ತು ಆತನಿಗೆ ಸಲ್ಲಿಸುವ ಒಂದು ಅಲ್ಪ ಗೌರವ ಸಲ್ಲಿಸುದೆಂದರೆ ಮಾರ್ಚ್ ೨೫ರನ್ನು ಜಾಗತಿಕ ಮಾನವ ಮತ್ತು ಪರಿಸರದಿನವನ್ನಾಗಿ ಆಚರಿಸುವುದೇ ಆಗಿದೆ.

ಹಣದ ಬಣ್ಣ

ಚಿಂತನೆ ಶ್ರೀಮಂತವಾಗಿ ಹಣದ ಬಣ್ಣಸತ್ತಿದೆ, ಆದರೆ ಕೆಲವರಾದರೂ ಒಂದು ಚಳುವಳಿಯ ಮಾದರಿಯಲ್ಲಿದ್ದಾರೆ. ವಂಚಿತ ಜನರಷ್ಟೇ ಒಂದು ಚಳುವಳಿಯನ್ನು ಸೃಷ್ಟಿಸುತ್ತಾರೆ ಅಥವಾ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಈಗ ಸಾವಯವ ಆಹಾರ ನಿಜವಾಗಿಯೂ ಒಂದು ಚಳುವಳಿಯಾಗಿಬಿಟ್ಟಿದೆ.

ಆಧುನಿಕತೆಯಿಂದ ಪ್ರಚೋದನೆಗೊಂಡ ವಿಜ್ಞಾನವು ಶ್ರೀಮಂತ ಮತ್ತು ಬಡವರ ನಡುವೆ ಇದ್ದ ಶ್ರೇಣೀಕರಣವನ್ನು ಮಸುಕಾಗಿಸಿಬಿಟ್ಟಿದೆ. ಅಂದರೆ ತಿಂಗಳಿಗೆ ಒಂದು ಮಿಲಿಯನ್ ಡಾಲರ್ ಆದಾಯ ಇರುವವರು ಮತ್ತು ದಿನಗೂಲಿಯ ನಡುವೆ ಅಂತರ ಇಲ್ಲವಾಗಿ, ಇವರಿಬ್ಬರೂ ಸಹ ಅದೇ ಗೋಧಿ, ಅದೇ ಆಲೂಗೆಡ್ಡೆ ಮತ್ತು ಅನ್ನವನ್ನು ತಿನ್ನುವಂತಾಗಿದೆ.

ಈ ಶ್ರೇಣೀಕರಣದ ಗೈರುಹಾಜರಿಯಿಂದ ಕಳೆಗುಂದಿ ರುವ ಶ್ರೀಮಂತರು ಒಂದು ಮಾರ್ಗವನ್ನು ಹುಡುಕಿಕೊಂಡಿ ದ್ದಾರೆ ಅವರು ಬಡವರು ತಿನ್ನುವ ಕಾಳನ್ನು ತಿನ್ನುವುದಿಲ್ಲ.

ಹೀಗಿರುವಲ್ಲಿ ಸಾವಯವ ಆಹಾರವು ಡೆಲ್ಲಿಯಲ್ಲಿ ದುಬಾರಿ ಬೆಲೆಗೆ ಸಿಗುತ್ತದೆ. ಅದನ್ನು ಈ ಶ್ರೀಮಂತರು ತೆಗೆದು ಕೊಳ್ಳಲು ಸಮರ್ಥರಿದ್ದಾರೆ. ಫ್ಯಾಬ್‌ಇಂಡಿಯಾದಲ್ಲಿ ಸಾವಯವ ಗೋಧಿ ಹಿಟ್ಟು ಒಂದು ಕೆ.ಜಿಗೆ ರೂ.೩೫ ಇದೆ.

ಹಣವಿರುವವರು ಅದನ್ನು ಕೊಳ್ಳಲು ಹಿಂಜರಿಯರು. ಜನಸಾಮಾನ್ಯರ ಗೋಧಿ ಹಿಟ್ಟು ರೂ.೧೦ಕ್ಕೆ ಮಾರಾಟವಾಗುತ್ತದೆ. ಹಾಗೆಯೇ ಸಾವಯವ ಸೋಯಾಬೀನ್ಸ್ ಕೆ.ಜಿಗೆ ರೂ.೮೫ ಇದ್ದರೆ, ಅದೇ ಕಾಳು ಮಾರುಕಟ್ಟೆಯಲ್ಲಿ ರೂ.೧೭ಕ್ಕೆ ದೊರೆಯುತ್ತದೆ.

ಬೂಕರ್-ಪ್ರೈಜ್ ಗಳಿಸಿದವರು ಮತ್ತು ಕ್ಯಾಸಿನೋ ಆಪರೇಟರ್ಸ್ ಅದಕ್ಕಾಗಿ ಗೊಣಗುಟ್ಟುವುದಿಲ್ಲ. ಸಾವಯವ ಸಕ್ಕರೆ ಕೆ.ಜಿ.ಗೆ ರೂ.೮೫ ಇದ್ದರೆ, ಅದೇ ಸಾಮಾನ್ಯರ ಸಕ್ಕರೆ ಕೆ.ಜಿ.ಗೆ ರೂ.೨೨ ಇದೆ. ಅದೇ ರೀತಿಯಲ್ಲಿ ಸಾಮಾನ್ಯರಿಗೆ ದೊರೆಯುವ ಉಪ್ಪು ಕೆ.ಜಿ.ಗೆ ರೂ. ೧ ಆದರೆ ಫಾಬ್‌ಇಂಡಿಯಾದಲ್ಲಿ ದೊರೆಯುವ ಕಲ್ಲುಪ್ಪಿಗೆ ದುಬಾರಿಯೆಂಬಂತೆ ಕೆ.ಜಿ.ಗೆ ರೂ.೩೦೦ ಆಗಿದೆ.

ಹೀಗಿದ್ದರೂ, ಮೆಗ್ಸಾಸೇ ಪ್ರಶಸ್ತಿ ಪಡೆದವರು ಮತ್ತು ಡ್ರಗ್-ಟ್ರಾಫಿಕ್ ದಂಧೆಯಲ್ಲಿರುವವರು ರುಚಿನೋಡಲು ಬಯಸು ತ್ತಾರೆ. ಫಾಬ್‌ಇಂಡಿಯಾದಲ್ಲಿ ದೊರೆಯುವ ಸಾವಯವ ಟೀ ನೂರು ಗ್ರಾಮ್‌ಗೆ ರೂ.೧೫೦ ಇದ್ದರೆ, ಸಾಮಾನ್ಯರ ಟೀಗೆ ರೂ.೨೦ ಇದೆ. ಹಸಿರು ಚಳುವಳಿಗಾರರು ಮತ್ತು ಸಶಸ್ತ್ರ ಮಾರಾಟಗಾರರು ಫಾಬ್‌ಇಂಡಿಯಾಕ್ಕೆ ಮುಗಿಬೀಳುತ್ತಾರೆ.

ಶೇ.೩೮ರಷ್ಟು ಭಾರತೀಯರು ದಿನಕ್ಕೆ ಒಂದು ಡಾಲರ್‌ಗಿಂತ ಕಡಿಮೆ ದುಡಿಯುತ್ತಿದ್ದಾರೆ. ಹೀಗಿರುವಾಗ ಇವರೆಲ್ಲಾ ಸಾವಯವ ಊಟವನ್ನು ತಿನ್ನಲು ಬಯಸಿದರೆ, ಇಲ್ಲಿರುವ ಒಂದೇ ಒಂದು ಪರಿಹಾರವೆಂದರೆ ಕುಟುಂಬದಲ್ಲಿ ರುವ ಐದು ಮಂದಿ ಸೇರಿ ಒಬ್ಬರಿಗಷ್ಟೆ ತಿನ್ನಿಸಬಹುದಾಗಿದೆ.

ಇದು ಕೆಲವು ದಿನಗಳ ಕಾಲ ನಡೆಯುತ್ತದೆಯಾದರೂ, ಉಳಿದವರೆಲ್ಲ ಹಸಿವಿನಿಂದ ಸಾಯಬೇಕಾಗುತ್ತದೆ. ಇಂದು ಬಿಲಿಯನ್‌ರಷ್ಟಿರುವ ಭಾರತೀಯರಲ್ಲಿ ಸುಮಾರು ೫೦ರಷ್ಟು ಮಂದಿ ಈ ಸಾವಯವ ಅಂಗಡಿಗಳಿಗೆ ಭೇಟಿನೀಡುತ್ತಿರುತ್ತಾರೆ. ಇವರೆಲ್ಲಾ ಸಾವಯವ ರಾಗಲು ನಿರ್ಧರಿಸಿದ್ದಲ್ಲಿ ಒಂದು ಕೆ.ಜಿ ಸಾವಯವ ಗೋಧಿ ರೂ.೧೦೦ ಆಗಿ, ಸೋಯಾಬೀನ್ಸ್ ರೂ.೨೦೦ ಮತ್ತು ಸಕ್ಕರೆ ರೂ.೧೫೦ ಆಗುವುದರಲ್ಲಿ ಸಂಶಯವಿಲ್ಲ.

ಹೀಗಿರುವಲ್ಲಿ ಶ್ರೇಣೀಕರಣವನ್ನು ಶೋಧಿಸುತ್ತಿರುವ ಸ್ವ-ಬಂಧನಕ್ಕೊಳಗಾಗಿರುವ ಶ್ರೀಮಂತರು ಜಗತ್ತಿನಾದ್ಯಂತ ಹಸಿರು ಚಳುವಳಿದಾರರಾಗಲು ಪ್ರಯತ್ನಿಸುತ್ತಿದ್ದಾರೆ. ಆಧುನಿಕತೆಯಿಂದ ಶಮನಗೊಂಡು, ಪುರಾತನ ಮನಸ್ಸುಳ್ಳವರಾಗಿರುವ ಈ ಹಸಿರು ಚಳುವಳಿದಾರರು ಕಾಡು ಪ್ರಾಣಿಗಳಾಗುತ್ತಿದ್ದಾರೆ. ಆದ್ದರಿಂದ ಕಪಟಿಗಳಾಗಿರುವ ಈ ಹಸಿರು ಕ್ರಾಂತಿಕಾರಿಗಳು ಸಾವಯವ ತೋಟಗಳಿಗೆ ಭೇಟಿನೀಡಿ ತಮ್ಮನ್ನೇ ತೃಪ್ತಿಪಡಿಸಿ ಕೊಳ್ಳುವಾಗ, ಬಾಟ್ಲಿಯ ನೀರು ಒಯ್ಯಲು ಮರೆಯುವುದಿಲ್ಲ.

ತಮ್ಮದೇ ಆದ ನೀತಿಗಳಲ್ಲಿ ಬಳಲುತ್ತಿರುವ ಇವರು, ಸಾವಯವ ಗಿಡಗಳು ಬೆಳೆಯಲು ಬಳಸುವ ನೀರನ್ನು ಮಾತ್ರ ಕುಡಿಯಲಾರರು. ಇವರನ್ನು ನಾವು ಭಯ ಮತ್ತು ಕರುಣೆಯಿಂದ ನೋಡಬೇಕಾಗಿದೆ. ಇವರು ಜೆಟ್ ವಿಮಾನಗಳನ್ನು ಬಳಸುತ್ತಾರ ಲ್ಲದೆ ಕುದುರೆಗಾಡಿಯನ್ನು ಅಲ್ಲ. ಅಲ್ಲದೆ, ಲ್ಯಾಪ್‌ಟಾಪ್‌ಗಳನ್ನು ಬಳಸುತ್ತಾರೆ, ಸಾಂಕೇತಿಕ ಭಾಷೆಯನ್ನಲ್ಲ.

ಈ ಹಸಿರುಗಾರರು ಪರಿಸರದ ಕನ್ಯತ್ವವನ್ನು ಹುಡುಕುತ್ತಾ ಅನಾಗರೀಕ ಸ್ಥಿತಿಯಲ್ಲಿ ಆಹಾರ ಸಂಗ್ರಹಿಸುವವರಾದರೂ ಇ-ಮೇಲ್ ಮೂಲಕ ಸಂಪರ್ಕ ನಡೆಸಲು ತೀವ್ರವಾಗಿ ಬಯಸುತ್ತಾರೆ. ಹೀಗಿದ್ದರೂ ಪರಿಸರ ಮತ್ತು ಸಹಜ ಎಂದು ಆಕ್ರಮಣ ಕಾರಿಯಾಗಿ ಕೂಗುತ್ತಿರುವಾಗ ಇಲ್ಲಿ ಕಾಣದೆ ಇರುವ ಸಂಗತಿ ಯಂದರೆ ಸರ್ವನಾಶಕಾರಿ ದುಃಸಾಹಸ.

ಈ ಹಸಿರುಗಾರಲ್ಲಿರುವ ದೆವ್ವ ಆತ್ಮಾಹುತಿಯಾಗಿ ಪರಿಣಮಿಸುತ್ತದೆ. ೧೯೭೦-೨೦೦೦ದ ನಡುವೆ ಜಗತ್ತಿನ ಜನಸಂಖ್ಯೆ ೨.೫ರಷ್ಟು ಬೆಳವಣಿಗೆಯನ್ನು ಕಂಡಿತು.

ಜಾಗತಿಕ ಆಹಾರ ನಿಗಮದ ನಿರ್ದೇಶಕರಾಗಿರುವ ಡೆನ್ನಿಸ್ ಟಿ ಅವೇರಿ ಪ್ರಕಾರ, "ಇಷ್ಟು ಅಗಾಧವಾಗಿರುವ

ಜನ ಸಂಖ್ಯೆಗೆ ಆಹಾರ ಒದಗಿಸಬೇಕಾದರೆ ಇನ್ನಷ್ಟು ಅರಣ್ಯ ಜಾಗವನ್ನು ಅಂದರೆ ೧೦-೧೨ ಮಿಲಿಯನ್ ಚದುರ ಮೈಲಿ ಭೂಮಿಯನ್ನು ಅಮೆರಿಕಾ, ಯೂರೋಪ್ ಮತ್ತು ಬ್ರೆಜಿಲ್‌ಗಳಷ್ಟು ನಾಡನ್ನು ಉಳುಮೆ ಮಾಡಬೇಕಾಗುತ್ತದೆ."೨೦೪೦ರ ವೇಳೆಗೆ ಜಗತ್ತಿನ ಜನ ಸಂಖ್ಯೆಯು ೮.೫ ಬಿಲಿಯನ್ ತಲುಪುತ್ತದೆ. ಆಗ ಒಂದು ಬಿಲಿಯನ್‌ರಷ್ಟು ಜನ ಸಾವಯವ ಊಟಕ್ಕೆ ಬದಲಾದಲ್ಲಿ ಏನಾಗಬಹುದೆಂದು ಊಹಿಸಬಹುದೇ?

ಇಂದು ಜಗತ್ತಿನ ಶೇ.೩೬ರಷ್ಟು ಭೂಮಿಯನ್ನು ಕೃಷಿಗೆ ಬಳಸಲಾಗುತ್ತಿದೆ. ಬಹುಶಃ ನಾಗರಿಕತೆಯ ಒಂದು ಹಂತದಲ್ಲಿ ನಾವೆಲ್ಲಾ ಆಹಾರ ಸಂಗ್ರಹಕರಾಗಿದ್ದಾಗ ಇಡೀ ಜಗತ್ತೇ ಉಳುಮೆಯಾಗಿದ್ದಿಲ್ಲ.

ನಾವೆಲ್ಲಾ ಬೋರ್ಲಾಗ್‌ನ ಪೂರ್ವದ ದಿನಗಳಿಗೆ ಹೋದಲ್ಲಿ ಏನಾದೀತು. ೮.೫ರಷ್ಟಿರುವ ಜನಕ್ಕೆ ಆಹಾರ ಒದಗಿ ಸಲು ಇಡೀ ಭೂಮಿಯಲ್ಲಿನ ಅರಣ್ಯವನ್ನು ಉಳುಮೆಮಾಡ ಬೇಕಾದೀತು ಅಥವಾ ದಿನಕ್ಕೆ ೧೦ ಡಾಲರ್‌ಗಿಂತ ಕಮ್ಮಿ ಗಳಿಸುವವರೆಲ್ಲಾ ಸ್ವಯಂ ಆಗಿ, ಪಾಲ್ ಎರಿಕ್ನ 'ಮಹಾ ಸಾವಿನಲ್ಲಿ' ಪಾಲ್ಗೊಳ್ಳಬೇಕಾಗುತ್ತದೆ.

ಕಳೆದ ೫೦ ವರ್ಷಗಳ ಹಿಂದೆ ಬಡಜನತೆ ಹಸಿವಿನಿಂದ ಪಾರಾಗಲು ಇಲಿ ಮತ್ತು ಹುಲ್ಲು-ಕಡ್ಡಿಗಳನ್ನು ಆಶ್ರಯಿಸಬೇಕಾಗಿತ್ತು. ಅಧಿಕ ಇಳುವರಿಯ ತಳಿಯಿಂದಾಗಿ ಈಗ ಅವರೆಲ್ಲಾ ಆಹಾರ ಪಡೆಯುವಂತಾಗಿದೆ. ಹೀಗಿರುವಾಗ ಕೆಲವೇ ಮಂದಿ ಹಸಿರುಗಾರರು ತಮ್ಮ ಆಲೋಚನೆಯ ಮೇರೆಗೆ ಸಾವಯವರಾಗುವ ಅದ್ಭುತ ಸಾಮರ್ಥ್ಯಕ್ಕಾಗಿ ಈ ಭೂಮಿಯನ್ನೇಕೆ ಸರ್ವನಾಶ ಮಾಡಬೇಕು ಅಥವಾ ೫ ಬಿಲಿಯನ್ ಜನ ಸಾವಿಗೆ ತುತ್ತಾಗಬೇಕೇ?

ಎಂದು ಇವರ್ಯಾರು ವಿವರಿಸಲು ಪ್ರಯತ್ನ ಪಡಲೇ ಇಲ್ಲ ಹಾಗೂ ಆ ಸಮಸ್ಯೆಯನ್ನು ಬಗೆಹರಿಸುವ ಪರಿ ಹೇಗೆಂಬ ಗೊಡೆವೆಗೂ ಹೋಗಲಿಲ್ಲ. ಅಲ್ಲದೆ, ಯಾವಾಗ, ಏಕೆ ಮತ್ತು ಯಾರಿಗೆ ಈ ತೃತೀಯವರ್ಗವನ್ನು ತಂದು ಪಾಸು ಮಾಡಿದರು ಎಂಬುದನ್ನೂ ಸಹ ಈ ಚರಿತ್ರಾಕಾರರು ಹೇಳುವುದಿಲ್ಲ.

ಈ ಕಾಲೇಜು ಅಸ್ತಿತ್ವಕ್ಕೆ ಬರುವ ಮೊದಲು(೧೮೫೦ರ ದಶಕ) ಇಂಟರ್‌ಮೀಡಿಯಟ್ ಹಂತದಲ್ಲಿ ತೇರ್ಗಡೆಯಾಗಬೇಕಾದರೆ ಕಮ್ಮಿಯೆಂದರೆ ಶೇ.೪೦ರಷ್ಟು ಅಂಕಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕಿತ್ತು. ಅಂದರೆ ಮೊದಲ ಮತ್ತು ದ್ವಿತೀಯ ಎಂಬ ವರ್ಗಗಳಷ್ಟೆ ಚಲಾವಣೆಯಲ್ಲಿ ಇದ್ದದ್ದು.

ಭಾರತೀಯರ (ಬ್ರಾಹ್ಮಣರೆಂದು ಓದಿ) ಒತ್ತಾಯದ ಮೇರೆಗೆ ತೇರ್ಗಡೆಯಾಗುವ ಅಂಕಗಳನ್ನು ಶೇ.೩೩ ಕ್ಕೆ ಇಳಿಸಿದ್ದು. ಹೀಗೆ ತೃತೀಯ ವರ್ಗವನ್ನು ಮೊದಲಬಾರಿಗೆ ಪರಿಚಯಿಸಲಾಯಿತು. ಇದಾದ ಕೂಡಲೇ ಕಾಲೇಜಿಗೆ ಸಾಕಷ್ಟು ವಿದ್ಯಾರ್ಥಿಗಳು ತುಂಬಿಕೊಂಡು, ಕಾಲೇಜಿನ ಅಸ್ತಿತ್ವಕ್ಕೆ ಸಮರ್ಥನೆ ದಕ್ಕಿತು. ಎಲ್ಲಾ ರೀತಿಯ ಲೆಕ್ಕಾಚಾರದಲ್ಲೂ ಇದು ಅರ್ಹತೆಯ ಪಂಗಡಕ್ಕೆ ಕಳೆದ ಒಂದು ಮಿಲೇನಿಯಮ್‌ನಲ್ಲಿ ಮೊದಲ ಜಯ ದೊರಕಿತು. ನಾವಿದನ್ನು ಅರ್ಥೈಸಿ, ಅಯ್ಯೋ ಪಾಪ ಎನ್ನಬೇಕಷ್ಟೆ!

ಹೀಗೆ ನಾನು ನನ್ನ ಸಂಶೋಧನೆಗೆ ಅಗತ್ಯವಾದ ಪುರಾತತ್ವ ಇಲಾಖೆಗಳ ದಾಖಲೆಗಳನ್ನು ಸಂಗ್ರಹಿಸುವಾಗ ದೊರೆತ ಭಾರತೀಯ ವಿಶ್ವವಿದ್ಯಾಲಯಗಳ ಸಮಿತಿಯ ವರದಿಯು ಹೊಸ ಬೆಳಕನ್ನು ಅದರ ಬಗ್ಗೆ ಚೆಲ್ಲುತ್ತದೆ. ೧೯೦೧ರ ಮೆಟ್ರಿಕ್ಯುಲೇಷನ್ ಪರೀಕ್ಷೆಗಳ ಫಲಿತಾಂಶಗಳ

ಅವರು ವಿಜ್ಞಾನ ಮತ್ತು ವೈದ್ಯಕೀಯ ವಿಷಯಗ
ಅಭ್ಯಾಸ ಮಾಡಲು ಆಮಿಷ ಗಳನ್ನು ಪಡೆಯುತ್ತಿದ
ಇದಕ್ಕೆ ಮತ್ತೆ ಆ ಚರಿತ್ರಾಗಾರರಿಂದ ಉತ್ತರ ಸಿಗುವು
ಈ ಅಗಾಧ ಪ್ರಮಾಣದ ಫೇಲಾಗುವವರ ನಡುವೆ
ಬ್ರಿಟಿಷ್ ಸರ್ಕಾರ ಅವರ ನಡುವೆ ವೈಜ್ಞಾನಿಕ ಶಿಕ್ಷಣ
ಪೋಷಿಸುತ್ತಿತ್ತು.

ಸಾಮಾಜಿಕ ಬಹಿಷ್ಕಾರ ಮತ್ತು ಆರ್ಥಿಕ ವ
ನೆಯ ಬಲಿಪಶುಗಳಾದ ದಲಿತರು/ಆದಿವಾಸಿಗಳು ಶಿಕ್ಷ
ಹೊಸ ಜಗತ್ತಿಗೆ ಪ್ರವೇಶಿಸಿದಾಗ, ಅವರ್ಯಾರು ತೇರ್ಗಡ
ಅಂಕಗಳನ್ನು ಶೇ.೨೦ಕ್ಕೆ ಇಳಿಸಲು ವಿನಂತಿಸಿಕೊಳ್ಳ
ಹೀಗಿರುವಲ್ಲಿ ದಲಿ ತರು/ಆದಿವಾಸಿಗಳು ನಾಲ್ಕನೇ ವರ್ಗ
ಸೃಷ್ಟಿಗೆ ಒತ್ತಾಯವನ್ನು ಮಾಡಿದರೆ? ಅಥವಾ ಅ
ಪರೀಕ್ಷೆಗಳಲ್ಲಿ ಪದವಿಗಳನ್ನು ಪಡೆಯಲು ಮೀಸ
ಯನ್ನು ಬೇಡಿದರೆ?

ದಲಿತರು ಮೀಸಲಾತಿಗೆ ಒತ್ತಾಯಿಸಿದ್ದು ಪ
ಪ್ರವೇಶಕ್ಕೆ ಮಾತ್ರವಲ್ಲದೆ, ಮತ್ತೇನೂ ಅಲ್ಲ. ಇವ
ಅನೇಕ ಮಂದಿ ಹೆಚ್ಚು ಅಂಕ ಪಡೆದವರಿಗಿಂಥ ಚೆನ
ಪ್ರವೇಶ ಪರೀಕ್ಷೆಗಳಲ್ಲಿ ಫಲಿತಾಂಶ ಪಡೆಯುತ್ತಾರೆ.

ಅಂದರೆ ಭಾರತದ ಸಾಂಪ್ರದಾಯಿಕ ಆಳುವ ಜ
ಗಳು ಹಾಸ್ಯಾಸ್ಪದವೆಂಬಂತೆ ಮತ್ತು ದುಃಖಕರ ಸಂ
ಯಂತೆ ವಾದ ಮಂಡಿಸುವಲ್ಲಿ ಹೊಂದಾಣಿಕೆ ಇಲ್ಲದ
ಅತಾರ್ಕಿಕರಾಗಿ ವರ್ತಿಸುತ್ತಾರೆ.

ಹೀಗಿರುವಾಗ, ಈ ಮೆರಿಟ್ ವಾದಿಗಳು ಮಂಡಿ
ತ್ತಿರುವ ತರ್ಕಗಳನ್ನು ಮತ್ತು ದಲಿತರು ಮಂಡಿಸುತ್ತಿರ
ತರ್ಕಗಳನ್ನು ಪರಿಶೀಲಿಸಲು ಮಧ್ಯವರ್ತಿಯೊಬ್ಬರ

ಮೂರನೇ ವರ್ಗದ ಬಗ್ಗೆ ಕೂಗೇಕೆ?

ಯು.ಪಿ.ಎ ಸರ್ಕಾರದ ಮಂಡಲ್ ವರದಿ ಅನುಷ್ಠಾನ ಮತ್ತೊಮ್ಮೆ ಅತ್ಯಂತ ಹಿಂದುಳಿದವರ(ಎಂಬಿಸಿ) ನಿರೀಕ್ಷೆಗಳನ್ನು ಕೊಲೆಮಾಡಿದೆ. ದ್ವಿಜರು ಹಿಂದಿನಂತೆಯೇ ತಮ್ಮನ್ನೇ ದೂಷಿಸಿಕೊಳ್ಳುವುದನ್ನು ಸಮರ್ಥವಾಗಿ ಮುಂದುವರೆಸಿದ್ದಾರೆ.

ಬೇರೆಯವರ ಅರ್ಹತೆಯ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾ ಅವರು ತಮ್ಮ ಹಿಂದಿನ ಅಂದರೆ ಒಂದು ನೂರೈವತ್ತು ವರ್ಷಗಳ ಹಿಂದೆ ತಮಗಿದ್ದ ಅರ್ಹತೆಯನ್ನು ಮರೆತುಬಿಟ್ಟರು.

ಮದ್ರಾಸ್ ಕಾಲೇಜ್ ಅಸ್ತಿತ್ವಕ್ಕೆ ಬಂದದ್ದು ೧೮೫೭ರ ಸುಮಾರಿಗೆ. ಆದರೆ, ಮೊದಲಿನಿಂದಲೂ ಅದು ವಿಚಿತ್ರವಾದ ಸಮಸ್ಯೆಯನ್ನು ಎದುರಿಸುತ್ತಿದೆ. ಈ ಕಾಲೇಜ್‌ಗೆ ಅಗತ್ಯವಾದ ಎಲ್ಲಾ ಸೌಕರ್ಯಗಳು ಮತ್ತು ಇಂಗ್ಲೇಂಡಿನ ಪ್ರಾಧ್ಯಾಪಕರು ಇದ್ದಾಗ್ಯೂ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ಆಶಾದಾಯಕವೇನೂ ಆಗಿರಲಿಲ್ಲ.

ಆಧುನಿಕ ಭಾರತದ ಚರಿತ್ರೆಯ ಪ್ರತಿಯೊಂದು ಅಂಗುಲ ವನ್ನು ಅರಿತಿರುವ ಅನೇಕ ಮಂದಿ ಚರಿತ್ರಾಗಾರರು ಇದ್ದಾರೆ. ಅಲ್ಲದೆ ಅವರಲ್ಲಿ ಅನೇಕರು ಜಗತ್ತಿನ ಚರಿತ್ರೆಯನ್ನೂ ಬಲ್ಲವರಾಗಿ ದ್ದಾರೆ. ಆದರೆ ಅವರಿಗೆ ತಿಳಿಯದ ಅಥವಾ ಅರಿಯಲು ಇಷ್ಟ ಪಡದ ಸಂಗತಿ ಎಂದರೆ ಈ ಕಾಲೇಜಿನ ಕಥೆ ಅಥವಾ ಆಧುನಿಕ ಶಿಕ್ಷಣದ ಚರಿತ್ರೆ, ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏಕೆ ಕಮ್ಮಿಯಾಗಿತ್ತು ಬಗ್ಗೆ ಚರ್ಚಿಸುತ್ತಾ ಈ ಸಮಿತಿಯ ವರದಿ(೪೫ನೇ ಪುಟ) ಈ ಕೆಳಗಿನಂತೆ ಹೇಳುತ್ತದೆ: "ನಮಗೆ ಸಿಕ್ಕ ಮಾಹಿತಿಯಂತೆ ಇಂಗ್ಲಿಷ್‌ನಲ್ಲಿ ಶೇ.೩೩ರಷ್ಟು ಅಂಕಗಳನ್ನು ನಿಗದಿಪಡಿಸುವ ಬದಲು ಶೇ.೪೦ರಷ್ಟನ್ನು ಉಳಿಸಿಕೊಂಡಿದ್ದಲ್ಲಿ ಕಲ್ಕತ್ತಾದಲ್ಲಿ ೧,೪೦೦ ಮಂದಿ ವಿದ್ಯಾರ್ಥಿಗಳು ಫೇಲಾಗುತ್ತಿದ್ದರು."

ಮೆರಿಟ್ ಬಗ್ಗೆ ಮಾತನಾಡುವ ಅನೇಕ ಸಿದ್ಧಾಂತಿಗಳು ಮೆಡಿಕಲ್/ಇಂಜಿನಿಯರಿಂಗ್/ಎಂಬಿಎ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ದಲಿತ/ಆದಿವಾಸಿಗಳು ಫೇಲಾಗುತ್ತಿದ್ದಾರೆಂದು, ಇದು ಕೇವಲ ಶೇ. ೧೦ರಷ್ಟಿರಬಹುದು. ನೆಪ ಮಾಡಿಕೊಂಡು ಮೀಸಲಾತಿಯನ್ನು ತೆಗೆದು ಬಿಡಲು ಕಾರಣ ನೀಡುತ್ತಿದ್ದಾರೆ.

ಆದರೆ ಈ ಮೆರಿಟ್‌ನ ಚರಿತ್ರಾಕಾರರು ಮರೆತು ಬಿಡುವ ಸಂಗತಿಯೆಂದರೆ ತಮ್ಮ ಜನರೇ ಫೇಲಾಗುತ್ತಿದ್ದ ಶೇಕಡವಾರಿನ ಬಗ್ಗೆ ಅವರೇನೂ ಹೇಳಲಾರರು. ಭಾರತದಲ್ಲಿ ಶಿಕ್ಷಣ ಪ್ರಗತಿ (೧೯೨೨-೧೯೨೭) ಸಂಪುಟ ೧, ಪು. ೪೦ ರ ಪ್ರಕಾರ ಎಂಬಿಬಿಎಸ್ ನಲ್ಲಿ ಫೇಲಾಗುತ್ತಿದ್ದವರ ಸಂಖ್ಯೆ ಶೇ.೪೭ರಷ್ಟಾದರೆ, ಇಂಜಿನಿಯರಿಂಗ್‌ನಲ್ಲಿ ಅದು ಶೇ.೩೪ ರಷ್ಟಿತ್ತು.

ಅಲ್ಲದೆ, ೧೮೬೦ರ ಸುಮಾರಿನಲ್ಲಿ ಈ ಚರಿತಾಗಾರರ ಸಂಬಂಧಿಗಳು ವಿಜ್ಞಾನ ಮತ್ತು ಗಣಿತಶಾಸ್ತ್ರ ವಿಷಯಗಳನ್ನು ಅಭ್ಯಾಸಕ್ಕೆ ಆಯ್ದುಕೊಳ್ಳಲು ಹೆದರುತ್ತಿದ್ದರಲ್ಲದೆ,

ಉದಾಹರಣೆಗೆ ಯುನೆಸ್ಕೊ ನೇಮಿಸಿದಲ್ಲಿ, ಮೆರಿ
ವಾದಿಗಳು ಅದ್ಭುತವಾಗಿ ಸೋತು, ನಾಲ್ಕನೇ ವರ್ಗವ
ಸೃಷ್ಟಿಸಿದಲ್ಲಿ ಮಾತ್ರ ಅವರು ಡಿಗ್ರಿ ತರಗತಿಗ
ಅರ್ಹರಾಗುತ್ತಾರೆ.

ದಲಿತ ಡೈರಿಯು ಒಂದು ಸಣ್ಣ ಸವಾಲ
ಮುಂದಿಡಲು ಬಯಸುತ್ತದೆ-ಪ್ಲಸ್‌ಟು ಹಂತದಲ್ಲಿ ಅಥ
ಅಂಥ ಯಾವುದೇ ಪ್ರವೇಶ ಪರೀಕ್ಷೆಯಲ್ಲಿ ೫೦% ಮ
೭೦% ನಡುವೆ ಎಂಥ ವ್ಯತ್ಯಾಸವಿರುತ್ತದೆ?

ಶೇ.೭೦ರಷ್ಟು ಅಂಕ ಪಡೆದವರು ಶೇ.೫೦ರ
ಪಡೆದವರಿಗಿಂತ ಬುದ್ಧಿಯಲ್ಲಿ ಜಾಣರೆಂದು ಯಾರಾದರ
ಹೇಳಲು ಸಾಧ್ಯವೇ?

ಕೆಲಸದ ಜಾಗಗಳಲ್ಲಿ ಪ್ರಥಮ ಶ್ರೇಣಿಯವರಿಗಿ
ದ್ವಿತೀಯ ದರ್ಜೆಯಲ್ಲಿ ಪದವಿ ಪಡೆದವರು ಉತ್ತ
ರೆಂದು ಯಾರಾದರೂ ಹೇಳಲು ಸಾಧ್ಯವೇ?

ಇದಕ್ಕೆ ಉತ್ತರ ಸಾಧ್ಯವಿಲ್ಲವಾದರೆ ಇನ್ನು ಮುಂ
ದರೂ ತಮ್ಮನ್ನು ತಾವೇ ಹೀಯಾಳಿಸಿಕೊಳ್ಳುವುದನ
ಮತ್ತು ಆತ್ಮವಂಚನೆ ಮಾಡಿಕೊಳ್ಳುವ ತರ್ಕವನ್ನು ದ್ವಿಜ
ನಿಲ್ಲಿಸಬೇಕಾಗುತ್ತದೆ.

ಕಲಿಕಾ ಕೇಂದ್ರಗಳಲ್ಲಿ ದಲಿತರು/ಆದಿವಾಸಿಗ
ಅತ್ಯಂತ ಹಿಂದುಳಿದವರು ಮತ್ತು ಕೆಳಜಾತಿಯ ಮು
ಮರು ಇಲ್ಲವಾದಲ್ಲಿ ಭಾರತವು ಅಪೂರ್ಣವಾಗಿಯೆ
ನಿಲ್ಲುತ್ತದೆ.

ಪ್ರಧಾನ ಮಂತ್ರಿಗಳಿಗೆ ಧನ್ಯವಾದಗಳು, ಆದರೆ....

ಮಾನ್ಯ ಮನಮೋಹನ ಸಿಂಗ್‌ರವರೆ,

ನಿಮ್ಮ ಏಪ್ರಿಲ್ ೧೮ರ ಪ್ರಬುದ್ಧ ಭಾಷಣಕ್ಕೆ ನಾನು ವಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ತಾವು ದು ಚಾರಿತ್ರಿಕ ದಿಟ್ಟ ಹೆಜ್ಜೆಯನ್ನು ಸರಿಯಾಗಿಯೇ ಟ್ಟು ಮುಂದುವರೆದಿದ್ದೀರಿ: "ವೈವಿಧ್ಯತೆಯ ಮೌಲ್ಯವನ್ನು ಪನಿಗಳು ನಮ್ರವಾಗಿ ಒಪ್ಪಿಕೊಳ್ಳುವ ಸೂಕ್ತ ಮಯವಿದು."

ನಿವೃತ್ತರಾಗುತ್ತಿರುವ ಪ್ರತಿ ೧೦ ಮಂದಿ ದಲಿತರಿಗೆ ವಲ ೨ ಮಾತ್ರ ಸರ್ಕಾರಿ ಉದ್ಯೋಗಗಳನ್ನು ಪಡೆಯು ತ್ತಾರೆ. ಈ ರೇಟಿನಲ್ಲಿ ಸಾಗುವುದಾದರೆ ೨೦೨೫ರ ತ್ತಿಗೆ ದಲಿತ/ಆದಿವಾಸಿಗಳ ಕನಸು ಕಮರಿ ಹೋಗು . ನಿಮ್ಮ ಈ ನಡಿಗೆಯಿಂದ ಕಳೆದುಹೋದ ಅವಕಾಶ ನ್ನು ಮತ್ತೆ ಪುನರುಜ್ಜೀವಗೊಳಿಸಿದಂತಾಗುತ್ತದೆ. ೋಯಿಂಗ್ ಮತ್ತು ಜೆಟ್ ವಿಮಾನಗಳು ಹಾಗೂ ಕ್ರೋಸಾಫ್ಟ್‌ನ ಸೃಷ್ಟಿಕರ್ತರಾಗಿ ರುವ ಲೋಕ್ಹೀಡ್ ರ್ಟಿನ್ ಶ್ರಮಶಕ್ತಿಯಲ್ಲಿ ವೈವಿಧ್ಯತೆಯನ್ನು ಅಳವಡಿಸಿ ಂಡಿದ್ದರಾದರೆ, ಭಾರತೀಯ ಕೈಗಾರಿಕಾ ಉದ್ಯಮ ಕೆ ಅಳವಡಿಸಿಕೊಳ್ಳಬಾರದು?ಈ ಶ್ರೇಷ್ಠ ಪಾಲಿಸಿ ಹೇಳಿ ು ಹೊರತಾಗಿಯು ನಿಮ್ಮ ಭಾಷಣದ ಬಗ್ಗೆ ನನಗೆ ಪ್ಪ ಬರಿಸಿದ ಕೆಲವು ಸಂಗತಿಗಳಿವೆ. ವೈವಿಧ್ಯತೆಯ ಬಗ್ಗೆ ವು ಮಾತನಾಡುತ್ತಾ, "ಸಾಕಾರಾತ್ಮಕ ರೀತಿಯಲ್ಲಿ ಕೆಳ ರ್ಗಗಳಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕ ಅವಕಾಶಗಳನ್ನು ಸಲು ನಾನು ಕೈಗಾರಿಕೋದ್ಯಮವನ್ನು ಒತ್ತಾಯಿ ತೇನೆ." ಎಂದಿದ್ದೀರಿ.

ನೀವು ಎಲ್ಲಿ ಮುಗಿಸಿದ್ದೀರೋ ಅಲ್ಲಿಂದಲೇ ಸಮ ೂ ವೈವಿಧ್ಯತೆಯ ನೀತಿಯು ಉದ್ಯೋಗ ಮತ್ತು ಣದಲ್ಲಿ ಕೆಲವು ಅನುಕೂಲಗಳನ್ನು ಸಕಾರಾತ್ಮಕ ಮಯ ಮೂಲಕ ಕಲ್ಪಿಸುತ್ತಲೂ ಸುತ್ತಿಕೊಂಡಿದೆ. ದ್ಯೋಗ ಮತ್ತು ಶಿಕ್ಷಣದಲ್ಲಿ ಅವಕಾಶಗಳನ್ನು ಸೃಷ್ಟಿಸು ು ಬಹು ಮುಖ್ಯ ಸಂಗತಿಗಳಾದರೂ, ವೈವಿಧ್ಯತೆಯ ಯು ರಾಷ್ಟ್ರಕಟ್ಟುವ ಯೋಜನೆಯಲ್ಲಿ ಮತ್ತಷ್ಟು ದೊಡ್ಡ ಗತಿಯಾಗಿದೆ.

ತಪ್ಪಾಗಿ ಅರ್ಥೈಸಲಾದ ಶಿಕ್ಷಕನಂತಾದರೂ ಸರಿ, ಧ್ಯತೆಯ ನೀತಿಯು ರಾಷ್ಟ್ರದ ಆರ್ಥಿಕತೆಯಲ್ಲಿ ವೈವಿಧ್ಯ ಯು ಸಾಮಾಜಿಕ ಮುಖಗಳನ್ನು ಬಿಂಬಿಸಬೇಕಾಗುತ್ತದೆ. ಅಂಶವನ್ನು ಬಿಟ್ಟರೆ, ನಿಮ್ಮ ಭಾಷಣವು ಅತ್ಯುತ್ಕೃತ್ತ ವಾಗಿತ್ತು: "ತೀವ್ರವಾದ ಆರ್ಥಿಕ ಬೆಳವಣಿಗೆಯ ಲಾಭ ಲ್ಲಿ ಯಾವುದೇ ಗುಂಪು ಕಳೆದುಕೊಳ್ಳದಂತೆ ನಾವು ರವಹಿಸಬೇಕಾಗುತ್ತದೆ." ಎಂದು ನೀವು ಹೇಳಿದ್ದು ಸ್ತವಾದುದು.

ಮಾನ್ಯ ಪ್ರಧಾನಿಗಳೇ, ಇಲ್ಲಿ ನಾನೊಂದು ಅಂಶ ಹೇಳಲು ಬಯಸುತ್ತೇನೆ. ಉದ್ಯಮ/ವಾಣಿಜ್ಯ/ವ್ಯಾಪಾ ರಲ್ಲಿ ಅವಕಾಶವಿಲ್ಲದೆ 'ತೀವ್ರವಾದ ಆರ್ಥಿಕ ಬೆಳವಣಿ ಯ ಲಾಭವನ್ನು' ಈ ಜಗತ್ತಿನ ಯಾವುದೇ ಭಾಗದ ಪಡೆಯಲು ಸಾಧ್ಯವೇ? ಮತ್ತೊಂದು ರೀತಿಯಲ್ಲಿ ಳುವುದಾದರೆ, ದಲಿತರು/ಆದಿವಾಸಿಗಳು 'ತೀವ್ರವಾದ ರ್ಕ ಬೆಳವಣಿಗೆಯ ಲಾಭವನ್ನು ಪಡೆಯಲು ಸಾಧ್ಯ ಬೇಕಾದರೆ, ಅವರು ಆರ್ಥಿಕ ಚಟುವಟಿಕೆಗಳಾದ ಉತ್ಪಾದನೆ, ಸರಬರಾಜು, ವ್ಯಾಪಾರ, ಡೀಲರ್ಸ್, ಮಾರುಕಟ್ಟೆಯ ಮಧ್ಯವರ್ತಿಗಳಾಗಿ ಪಾಲ್ಗೊಳ್ಳಬೇಕಲ್ಲವೇ?



ದಲಿತ/ಆದಿವಾಸಿ ಉದ್ಯಮಿಗಳನ್ನು ಕೋಟ್ಯಾದಿಪತಿಗಳನ್ನಾಗಿ ಪರಿವರ್ತಿಸುವ ದಿಗ್ವಿಜಯ್ ಸಿಂಗ್ ಯೋಜನೆಯನ್ನು ಪರಿಗಣಿಸಿ. ದಲಿತ ಬುದ್ಧಿಜೀವಿಗಳ ಧ್ವನಿಗೆ ಕಿವಿ ಗೊಟ್ಟ ದಿಗ್ವಿಜಯ್ ಸಿಂಗ್ ಸರಬರಾಜು ವೈವಿಧ್ಯತೆಯನ್ನು ಅನುಷ್ಠಾನಗೊಳಿಸಿದರು. ಸುಮಾರು ೨೦೦೦ ಮಂದಿ ದಲಿತ/ಆದಿವಾಸಿಗಳು ಮ.ಪ್ರದೇಶದ ವಾಣಿಜ್ಯದಲ್ಲಿ ಬರುವಂತಾಗಿ, ರೂ.೩೨೦ ಮಿಲಿಯನ್ ಬೆಲೆಯ ಪದಾರ್ಥಗಳನ್ನು ಸರಬರಾಜು ಮಾಡುವಂತಾಯಿತು.

ನಿಮ್ಮ "ಉದ್ಯೋಗ ಮೀಸಲಾತಿಯ ಯೋಜನೆ" ಯಲ್ಲಿ ಉದಾಹರಣೆಗೆ ಹಿಂದೂಸ್ತಾನ್ ಲಿವರ್ ಲಿಮಿಟೆಡ್‌ನಲ್ಲಿ ೪೩,೦೦೦ ಇರುವ ಶ್ರಮಶಕ್ತಿಯಲ್ಲಿ ೧೦,೦೦೦ ಜನ ದಲಿತರು/ಆದಿವಾಸಿಗಳು ಉದ್ಯೋಗ ಪಡೆಯಬಹುದು. ಇದು ದಲಿತರನ್ನು ಮತ್ತು ಆದಿವಾಸಿಗಳನ್ನು ಆ ಕಂಪನಿಯ ಆರ್ಥಿಕತೆಯಲ್ಲಿ ತೊಡಗಿಸಿಕೊಂಡಂತಾಗುತ್ತದೆಯೇ?

ಹಿಂದೂಸ್ತಾನ್ ಲಿವರ್ ಲಿಮಿಟೆಡ್ ಕಂಪನಿಯ ವಾರ್ಷಿಕ ಆದಾಯ ರೂ.೧೧,೩೦೦ ಕೋಟಿಗಳಾಗಿದ್ದು, ದೇಶಾದ್ಯಂತ ೨೦೦,೦೦ ಡೀಲರ್ಗಳನ್ನು ಹೊಂದಿದೆ. ನಮ್ಮ ಯೋಜನೆಯನ್ನು ತಾವು ಒಪ್ಪುವುದಾದರೆ ಹಿಂದೂಸ್ತಾನ್ ಲಿವರ್ ಲಿಮಿಟೆಡ್‌ನಲ್ಲಿ ೪೫,೦೦೦ ದಲಿತರು ಮತ್ತು ಆದಿವಾಸಿಗಳು ಡೀಲರ್‌ಗಳಾಗಬಹುದು. ಅವರಲ್ಲಿ ೧೦,೦೦೦ ಮಂದಿ ಕೇವಲ ಅರ್ಧ ದಶಕದಲ್ಲಿ ಕೋಟ್ಯಾದಿಪತಿಗಳಾಗುತ್ತಾರೆ.

ಪ್ರಧಾನಿಗಳೇ, ನಾನು ನಿಮ್ಮ ವಾಣಿಜ್ಯ ಜ್ಞಾನದ ಗ್ರಾಮರನ್ನು ಪ್ರಶ್ನಿಸದೆ, ಈ ಸಂಗತಿಯ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ ಒಂದು ವಸ್ತುವನ್ನು ತಯಾರಿಸಲು ಒಂದು ಕಂಪನಿಗೆ ೧೦ ಮಂದಿ ಕೆಲಸದವರು ಅಗತ್ಯವಾದರೆ, ೧೦೦ ಮಂದಿ ಡೀಲರ್ಸ್ ಮತ್ತು ಹಂಚಿಕೆದಾರರು ಬೇಕಾಗುತ್ತದೆ. ಈ ವಹಿವಾಟಿನ ಸರಪಳಿಯಲ್ಲಿ ದಲಿತರು ಮತ್ತು ಆದಿವಾಸಿಗಳು ಸಮಗ್ರವಾಗಿ ತೊಡಗದಿದ್ದಲ್ಲಿ "ತೀವ್ರವಾದ ಆರ್ಥಿಕ ಬೆಳವಣಿ ಗೆಯ ಲಾಭ"ದ ಫಲವನ್ನು ಅನುಭವಿಸಲಾಗದು.

ಸರ್, ಅಮೆರಿಕನ್ ಸಮಾಜದ ಬಗ್ಗೆ ತಮ್ಮ ತಿಳುವಳಿಕೆ ಯನ್ನು ಪ್ರಶ್ನಿಸದೆ ನಾನು ಮೂರು ಮುಖ್ಯ ಸಂಗತಿಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ ಉದ್ಯಮದಲ್ಲಿ ಶ್ರಮಶಕ್ತಿ/ ಸರಬರಾಜು/ ಡೀಲರ್‌ಶಿಪ್ ಸಂಗತಿಗಳು ಕಪ್ಪುಜನರಲ್ಲಿ ಹೊಸ ಯುಗವನ್ನೇ ಪ್ರಚೋದಿಸಿತು. ಎಫ್ ೧೬ ಜೆಟ್ ಅನ್ನು ಸೇರಿದಂತೆ ಅಮೆರಿಕಾದಲ್ಲಿ ಯಾವುದೇ ವಸ್ತುವೂ ಸಹ ಕಪ್ಪುಜನರ ಉತ್ಪಾದನಾ ಸಹಾಯವನ್ನು ಬಯಸುತ್ತದೆ. ಫೋರ್ಡ್ ಮತ್ತು ಜಿ.ಎಂ ಕಾರುಗಳನ್ನು ಒಳಗೊಂಡಂತೆ ಎಲ್ಲಾ ಪದಾರ್ಥಗಳೂ ಸಹ ಕಪ್ಪು ಜನರ ಡೀಲರ್‌ಶಿಪ್ ಅನ್ನು ಹೊಂದಿರುತ್ತದೆ.

ಈ ಮೂರು ಆಯಾಮಗಳ ವೈವಿಧ್ಯತೆಯಿಂದಾಗಿ ಕಪ್ಪು ಜನರ ಕೊಳ್ಳುವ ಶಕ್ತಿ ವಾರ್ಷಿಕವಾಗಿ $೭೨೩ ಬಿಲಿಯನ್ ಆಗಿದೆ. ಅಂದರೆ ಅದು ಭಾರತದ ಒಟ್ಟಾರೆ ತಲಾದಾಯಕ್ಕೆ ಸಮನಾದುದು. ಹೀಗೆ ಕಪ್ಪು ಜನರ ಆರ್ಥಿಕ ಶಕ್ತಿಯು ಅಮೆರಿಕಾದ ಆರ್ಥಿಕತೆ ಮುನ್ನಡೆಗೆ, ತಾವು ಗಳಿಸಿದನ್ನು ವ್ಯಯಿಸುವಂತೆ ಮಾಡುತ್ತಿದೆ.

ಉದ್ಯಮದಲ್ಲಿ ಶ್ರಮಶಕ್ತಿ/ ಸರಬರಾಜು/ ಡೀಲರ್‌ಶಿಪ್ ಈ ಮೂರೂ ಸಂಗತಿಗಳಲ್ಲಿ ಪಾಲ್ಗೊಂಡ ದಲಿತರು ಮತ್ತು ಆದಿವಾಸಿಗಳು ಮೊದಲ ಅಥವಾ ಎರಡನೇಯ ತಲೆಮಾರಿನವ ರಾಗಿರುವುದರಿಂದ, ಗಳಿಸಿದ್ದನ್ನೆಲ್ಲಾ ಖರ್ಚು ಮಾಡುತ್ತಾರೆ.

ದಲಿತ/ಆದಿವಾಸಿ ಉದ್ಯಮಿಗಳನ್ನು ಕೋಟ್ಯಾದಿಪತಿಗಳನ್ನಾಗಿ ಪರಿವರ್ತಿಸುವ ದಿಗ್ವಿಜಯ್ ಸಿಂಗ್ ಯೋಜನೆಯನ್ನು ಪರಿಗಣಿಸಿ. ದಲಿತ ಬುದ್ಧಿಜೀವಿಗಳ ಧ್ವನಿಗೆ ಕಿವಿಗೊಟ್ಟ ದಿಗ್ವಿಜಯ್ ಸಿಂಗ್ ಸರಬರಾಜು ವೈವಿಧ್ಯತೆಯನ್ನು ಅನುಷ್ಠಾನಗೊಳಿಸಿದರು. ಸುಮಾರು ೨೦೦೦ ಮಂದಿ ದಲಿತ/ಆದಿವಾಸಿಗಳು ಮ.ಪ್ರದೇಶದ ವಾಣಿಜ್ಯದಲ್ಲಿ ಬರುವಂತಾಗಿ, ರೂ.೩೨೦ ಮಿಲಿಯನ್ ಬೆಲೆಯ ಪದಾರ್ಥಗಳನ್ನು ಸರಬರಾಜು ಮಾಡುವಂತಾಯಿತು. ಸರ್, ಬಿಕ್ಕಟ್ಟು ಮತ್ತು ಸಾಮಾಜಿಕವಾಗಿ ವಿಘಟನೆಗೊಂಡಿರುವ ಭಾರತ ಒಂದು ಸಾಮಾಜಿಕ ನಾಶದತ್ತ ವಾಲುತ್ತಿದೆ. ಆಧುನಿಕ ಮನಸ್ಸಿನವರಾದ ತಾವು ಈ ಬಿಕ್ಕಟ್ಟನ್ನು ಅವಕಾಶವಾಗಿ ಬದಲಾಯಿಸಬಹುದು. ದಲಿತ/ಆದಿವಾಸಿ ಫಲಶ್ರುತಿಗಳೊಡನೆ ನಿಮ್ಮ ಹೊಸ ಆರ್ಥಿಕತೆ ಹೊಸ ಸಾಮಾಜಿಕ ಗೆಳೆತನವನ್ನು ಸಂಪಾದಿಸಿದಂತಾಗಿ ಆರ್ಥಿಕತೆಯನ್ನು ಕ್ರಾಂತಿ ಕಾರಿಯನ್ನಾಗಿಸುತ್ತದೆ.

ತಮ್ಮ ವಿಶ್ವಾಸಿ,

ಚಂದ್ರಭಾನ್ ಪ್ರಸಾದ್. □

ದೇವರಿಗಿಂತ ಮಿಗಿಲು ಅಪಾಯಕಾರಿ ನಿರ್ದೇಹಿ ಆತ್ಮ

ಬುದ್ಧಾಯಣ

೧೧

ಆತ್ಮದ ನಂಬಿಕೆಯನ್ನು ಒಂದು ಪಕ್ಷ ಒಪ್ಪಿಕೊಂಡಿದ್ದೆ ಆದರೆ ಅದಕ್ಕೆ ಸಂಬಂಧಿಸಿದ ಇನ್ನಿತರ ಅಸಂಬದ್ಧ ನಂಬಿಕೆಗಳನ್ನೂ, ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ಗೊಂದಲವನ್ನು ಗಮನಿಸುಃ ಆತ್ಮ ಎನ್ನುವುದು ಶರೀರಕ್ಕಿಂತ ಭಿನ್ನವಾದ ವಸ್ತು. ಜೀವಿಯ ಗರ್ಭದೊಂದಿಗೆ ಅದು ಸಹಜವಾಗಿ ಬೆಳೆಯುವುದಿಲ್ಲ. ಜೀವಿ ಹುಟ್ಟಿದ ನಂತರ ಹೊರಗಿನಿಂದ ಅದು ಅವತರಿಸಿ ದೇಹವನ್ನು ಒಕ್ಕುತ್ತದೆ. ಆಗ ಆತ್ಮವು ಜೀವಾಂತವಾಗುತ್ತದೆ. ಕಾರ್ಯ ರೂಪಕ್ಕೆ ಬರುತ್ತದೆ.

ಸಿ.ಎಚ್.ರಾಜಶೇಖರ್

ಬುದ್ಧನನ್ನು ಸಂಧಿಸಿ ತನ್ನ ಗೌರವವನ್ನು ಸೂಚಿಸಿದ ಪೂಜ್ಯ ಮಹಾಲಿಯು ತನ್ನನ್ನು ಬಹುದಿನಗಳಿಂದಲೂ ಕಾಡುತ್ತಿದ್ದ. ದೇವರು, ಆತ್ಮ, ಅರಿವು ಮುಂತಾದ ಮೂಲಭೂತ ಪ್ರಶ್ನೆಗಳ ಬಗ್ಗೆ ಹೀಗೆ ಪ್ರಶ್ನಿಸತೊಡಗಿದ. "ಗುರುದೇವಾ, ದೇವರ ಅಸ್ತಿತ್ವವನ್ನು ಸ್ಪಷ್ಟವಾಗಿ ನಿರಾಕರಿಸುವ ತಾವು ಆತ್ಮನ ಅಸ್ತಿತ್ವದ ಬಗ್ಗೆ ತಮ್ಮ ನಿಲುವು ಏನು?"

"ಪೂಜ್ಯ ಮಹಾಲಿಯೇ, ಆತ್ಮದ ಅಸ್ತಿತ್ವ, ದೇವರ ಅಸ್ತಿತ್ವಕ್ಕಿಂತ ಭಿನ್ನವಲ್ಲ. ಈ ಎರಡೂ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಮೊದಲನೆಯದಾಗಿ ಮನಸ್ಸು ಆತ್ಮದಿಂದ ಭಿನ್ನವಾಗಿದೆಯೇ ಹೊರತು, ದೇವರು ಮತ್ತು ಆತ್ಮ ವಿಭಿನ್ನವಾಗಿಲ್ಲ ಎಂಬುದನ್ನು ಮನಗಾಣಬೇಕು. ಏಕೆಂದರೆ ಆತ್ಮ ಅಗೋಚರ, ಅಸ್ತಿತ್ವದಲ್ಲಿ ಇಲ್ಲದ ವಸ್ತು. ಅದನ್ನು ಯಾರೂ ನೋಡಿಲ್ಲ. ಅದರೊಂದಿಗೆ ಸಂಭಾಷಿಸಿಲ್ಲ. ಅದು ಮೌಢ್ಯವನ್ನಲ್ಲದೆ ಮತ್ತೇನನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆತ್ಮದ ನಂಬಿಕೆಯ ಮೇಲೆ ನಿಂತ ಧರ್ಮ ಊಹೆಯ ಮೇಲೆ ನಿಂತ ಧರ್ಮವಲ್ಲವೆ? ಇದರಿಂದ ಬಹುಜನರ ಹಿತಾಸಕ್ತಿ ಹೇಗೆ ಸಾಧ್ಯ?"

"ಗುರುದೇವಾ, ಆತ್ಮಕ್ಕೆ ದೇಹ ಬಾಹ್ಯ ಕವಚವಲ್ಲವೆ? ಆತ್ಮವಿಲ್ಲದ ದೇಹ ಜಡವಲ್ಲವೆ? ಅದನ್ನೆ ಅಲ್ಲವೇ ಜೀವಾತ್ಮ ಎಂದು ಕರೆಯುವುದು? ವೈದಿಕಧರ್ಮ ನಿಂತಿರುವುದೇ ಆತ್ಮ ಸಿದ್ಧಾಂತದ ಮೇಲಲ್ಲವೆ? ಹಾಗಿರುವಾಗ ತಾವು ಏಕಾಂಗಿಯಾಗಿ ಪ್ರವಾಹದ ವಿರುದ್ಧ ಈಜುವಂತೆ "ಅನಾತ್ಮ" ಸಿದ್ಧಾಂತವನ್ನು ಪ್ರತಿಪಾದಿಸಲು ಇರುವ ಸತ್ಯ ಸಂಗತಿಗಳೇನು?"

"ಪೂಜ್ಯ ಮಹಾಲಿಯೇ, ಆತ್ಮದ ನಂಬಿಕೆಯನ್ನು ಒಂದು ಪಕ್ಷ ಒಪ್ಪಿಕೊಂಡಿದ್ದೆ ಆದರೆ ಅದಕ್ಕೆ ಸಂಬಂಧಿಸಿದ ಇನ್ನಿತರ ಅಸಂಬದ್ಧ ನಂಬಿಕೆಗಳನ್ನೂ, ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ಗೊಂದಲವನ್ನು ಗಮನಿಸುಃ ಆತ್ಮ ಎನ್ನುವುದು ಶರೀರಕ್ಕಿಂತ ವಾದ ವಸ್ತು. ಜೀವಿಯ ಗರ್ಭದೊಂದಿಗೆ ಅದು ಸಹಜವಾಗಿ ಯುವುದಿಲ್ಲ. ಜೀವಿ ಹುಟ್ಟಿದ ನಂತರ ಹೊರಗಿನಿಂದ ಅದು ರಿಸಿ ದೇಹವನ್ನು ಒಕ್ಕುತ್ತದೆ. ಆಗ ಆತ್ಮವು ಜೀವಾಂತವಾಗು ಕಾರ್ಯ ರೂಪಕ್ಕೆ ಬರುತ್ತದೆ. ಅದು ಆ ಜೀವಿ ಸಾಯುವತನಕ ಅವನ ನೆರಳಿನಂತೆ, ಚೇತನದಂತೆ, ಸಾಕ್ಷಿಯಂತೆ, ಪ್ರಜ್ಞೆಯಂತೆ, ಅರಿವಿನಂತೆ ಆತನೊ ಕಾರ್ಯನಿರ್ವಹಿಸುತ್ತದೆ ಎನ್ನುತ್ತಾರೆ. ಆ ಜೀವಿ ಸಹಜವಾಗಿ ಸ ಶರಣಾಗುತ್ತಿದ್ದಂತೆ ಈ "ಆತ್ಮ" ಕೂಡ ಸಹಜವಾಗಿ ಸಾ ಅಪ್ಪುವುದಿಲ್ಲ! ಬದಲಿಗೆ ಮತ್ತೆ ಜಡದೇಹದಿಂದ ಹೊರಬರು ಆದರೂ ಅದು ಜೀವಂತವಿರುತ್ತದೆ. ಈ ಎಲ್ಲ ಪ್ರಕ್ರಿಯೆ ನಂಬಿಕೆಯೊಂದೆ ಆಧಾರ. ಇಲ್ಲಿ ಕಾರಣತಾ ಸಂಬಂಧಕ್ಕಾ ಮೂಲವಸ್ತುಗಳ ಸಂಯೋಜನೆಗಾಗಲಿ, ಯಾವುದೇ ಸ ಪ್ರಕ್ರಿಯೆಗಾಗಲಿ, ಘಟನೆಗಾಗಲಿ, ಕಾರಣಕ್ಕಾಗಲಿ, ಪರಿಣಾಮಕ ಸಂಬಂಧವೇ ಇಲ್ಲ! ಎಲ್ಲಕ್ಕೂ ನಂಬಿಕೆಯೇ ಆಧಾರ. ಈ ವ ವನ್ನೆ ಜ್ಞಾನವೆಂದು ಒಪ್ಪಿಕೊಂಡರೂ ಕೂಡ ನಿರ್ದೇಹಿಯಾದ ಆ ಬಗ್ಗೆ ನಾನಾ ಪ್ರಶ್ನೆಗಳು ಮತ್ತೂ ಉದ್ಭವಿಸುತ್ತವೆ. ಅವೆಂದರೆಃ ಎಂದರೆ ಏನು? ಅದು ಎಲ್ಲಿಂದ ಬಂತು? ದೇಹ ಜಡವಾ ಅದು ಏನಾಯಿತು? ಎಲ್ಲಿಗೆ ಹೋಗುತ್ತದೆ? ಇಹದ ನಂತರ ಯಾವ ರೂಪ ತಳೆಯುತ್ತದೆ? ಆ ರೂಪದಲ್ಲಿ ಎಷ್ಟು ಕಾಲ ಯಿತ್ತದೆ? ಆತ್ಮದ ಆಕಾರ ಮತ್ತು ಗಾತ್ರ ಹೇಗಿದೆ?"

"ಗುರುದೇವಾ, ತಮ್ಮ ವಾದದಲ್ಲಿ ಸತ್ಯಾಂಶವಿದೆ. ಆ ನನ್ನಲ್ಲಿ ಉತ್ತರವಿಲ್ಲ. ಆದರೂ ಆತ್ಮದ ಅಸ್ತಿತ್ವದಲ್ಲಿ ನಾನಾ ವಿಧಗ



ಸಿಕೊಂಡಿದ್ದಾರೆ. ಮಹಾಋಷಿಮುನಿಗಳು ಆತ್ಮದ ಬಗ್ಗೆ ಮ್ಮ ವಾದವನ್ನು ಹೀಗೆ ಮಂಡಿಸುತ್ತಾರೆಃ ಆತ್ಮಕ್ಕೆ ಆದಿ ಲ್ಲ. ಅಂತ್ಯವಿಲ್ಲ. ಅದು ಸೂಕ್ಷ್ಮ, ಅಗೋಚರ, ಆದರೂ ಪಕ್ಕೆ ರೂಪವಿದೆ ಎನ್ನು ತ್ತಾರೆ. ನಾಮವಿದೆ ಎನ್ನುತ್ತಾರೆ? ಕರ್ತವ್ಯವೇ ಕರ್ಮಸಿದ್ಧಾಂತದ ಮೊತ್ತವೆನ್ನುತ್ತಾರೆ.

"ಪೂಜ್ಯ ಮಹಾಲಿಯೆ, ನೀನು ಯಾವುದರ ವಾಗಿ ವಾದಿ ಸುತ್ತಿಯೋ ಅಂತಹ ನಿವರ್ಯರಲ್ಲಿಯೇ ಆತ್ಮದ ಅಸ್ತಿತ್ವದ ಬಗ್ಗೆ ಾಭಿಪ್ರಾಯವಿಲ್ಲ. ಆತ್ಮವು ಸಂಪೂರ್ಣ ಾತನಾಮಯವಾದದ್ದು ಎಂದರು ಕೆಲವರು. ಇನ್ನೂ ವರು ಅದು ಸಂತೋಷಕರವಾದದ್ದ ಎಂದರು. ಮತ್ತೆ ವರು ಈ ಎರಡನ್ನೂ ಅಲ್ಲಗಳೆಯುತ್ತಾರೆ. ಹಾಗಾದರೆ ಹ ಜಡವಾದ ಬಳಿಕ ದೇಹದಿಂದ ಹೊರಬರುವ ಆತ್ಮ ತರ ಸಂತೋಷವನ್ನು ಅನುಭವಿಸುತ್ತದೋ, ಖವನ್ನು ಅನುಭವಿಸುತ್ತದೋ? ಏನನ್ನಾದರೂ ಂದಬೇಕಾದರೆ ಅಥವಾ ಅನುಭವಿಸಬೇಕಾದರೆ ಅದು ಂದ್ರಿಯಾಜನ್ಯವಾಗಿರಬೇಕಲ್ಲವೆ? ಆತ್ಮ ಅಗೋಚರವೂ ದು, ಇಂದ್ರಿಯಾಜನ್ಯವೂ ಹೌದು ಎನ್ನುವುದಾ ದರೆ ದು ಗೊಂದಲವಲ್ಲದೆ ಮತ್ತೇನು? ದ್ವಂದ್ವವಲ್ಲದೇ ತ್ತೇನು? ಇದು ಮೌಢ್ಯವನಲ್ಲದೆ ಮತ್ತೇನನ್ನು ಬಿಂಬಿತುಪಡಿಸುತ್ತದೆ? ಇದು ದೇವರ ಅಸ್ತಿತ್ವದಂತೆಯೇ ಚರ್ಚೆಯು ನಷ್ಟಕರವಲ್ಲವೆ? ಇದು ಸಮ್ಮದಿಷ್ಠಿಯ ನವಣಿಗೆಯ ವಿರೋಧಿ ಅಲ್ಲವೆ? ವಾಸ್ತವ ದೃಷ್ಟಿಕೋನದಲ್ಲಿ ದೇವರ ಅಸ್ತಿತ್ವದ ನಂಬಿಕೆಗಿಂತಲೂ ಆತ್ಮದ ಅಸ್ತಿತ್ವದಲ್ಲಿನ ನಂಬಿಕೆ ಹೆಚ್ಚು ಅಪಾಯಕಾರಿ ಅಲ್ಲವೆ? ಇದು ಪುರೋಹಿತಶಾಹಿ ಯನ್ನು ಸೃಷ್ಟಿಸುವುದಿಲವ್ಲೇ? ಮೂಢನಂಬಿಕೆಗಳಿಗೆ ಮೂಲನೆಲೆ ಯನ್ನು ಒದಗಿಸಿಕೊಡುವುದರ ಜೊತೆಗೆ ಹುಟ್ಟಿನಿಂದ ಸಾವಿನವರೆಗೆ ಮನುಷ್ಯನ ಮೇಲೆ ಸಂಪೂರ್ಣ ಹತೋಟಿಯನ್ನು ಪುರೋಹಿತ ವರ್ಗಕ್ಕೆ ವಹಿಸಿಕೊಟ್ಟಂತಲ್ಲವೆ? ಇದು ಅಮಾನುಷ್ಯವಲ್ಲವೆ? ಪುರೋ ಹಿತಶಾಹಿಗಳ ಕಪಿಮುಷ್ಠಿಯಲ್ಲಿ ಸಿಕ್ಕಿದ ಯಾವ ಜನಾಂಗವಾದರೂ ನೆಮ್ಮದಿಯಲ್ಲಿ ಬಾಳಿದ ಉದಾಹರಣೆ ಈ ಜಗತ್ತಿನಲ್ಲಿ ಇರುವುದೇ?"

"ಗುರುದೇವಾ, ಒಂದು ಕಡೆ ಪುರೋಹಿತಶಾಹಿ ವರ್ಗ ಆತ್ಮಕ್ಕೆ ನಾಮರೂಪವನ್ನು ಪ್ರಬಲವಾಗಿ ಆರೋಪಿಸುತ್ತಾರೆ. ಸಾಲದ್ದಕ್ಕೆ ಆತ್ಮವೇ ಅರಿವು ಅಥವಾ ಅರಿವಿನ ಮೂಲ ಎಂದು ವಾದಿಸುತ್ತಾರೆ ಇದರ ಒಳಾರ್ಥವೇನು?"

"ಪೂಜ್ಯ ಮಹಾಲಿ, ನಂಬಿಕೆ ಆರೋಪ ಮತ್ತು ಊಹೆಯ ಮೇಲೆ ನಿಂತ ಧರ್ಮ ಧರ್ಮವಲ್ಲ. ಧರ್ಮದಲ್ಲಿ ಯಾವುದೇ ಗುಟ್ಟು, ರಹಸ್ಯ, ಒಳಾರ್ಥಗಳಿಗೆ ಎಡೆ ಇಲ್ಲ. ಒಂದು ಪಕ್ಷ ಆತ್ಮದ ಅಸ್ತಿತ್ವಕ್ಕೆ ನಾಮರೂಪವನ್ನು ಆರೋಪಿಸುವುದೇ ಆದರೆ, ಅದೊಂದು ಹಾಸ್ಯಾಸ್ಪದವಲ್ಲವೆ? ಏಕೆಂದರೆ, ಆತ್ಮವು ಒಂದು ವಸ್ತುವಲ್ಲ. ಇಂದ್ರಿಯ ಗ್ರಾಹ್ಯವಲ್ಲ. ವ್ಯಕ್ತಿ ಅಲ್ಲ. ನಾಮರೂಪ ಆರೋಪಿಸುವುದು ಪರಿಜ್ಞಾನವುಳ್ಳ ವ್ಯಕ್ತಿಗಲ್ಲವೆ? ಪರಿಜ್ಞಾನ ಎಂಬುದು ಅದರದೇ ಆದ ತತ್ವದ ಮೇಲೆ ನಿಂತಿದೆ. ಅದೆಂದರೆ ಪರೀಕ್ಷೆ, ಹರಿತವಾದ ಅಥವಾ ಸೂಕ್ಷ್ಮವಾದ ಜ್ಞಾನ, ಕಠಿಣ ವಿಶ್ಲೇಷಣೆಯ ವಿಭಾಜ್ಯದ ಅನ್ವಯಿಕ ಫಲವಲ್ಲವೆ? ಅಂದರೆ ನಾಮ ರೂಪಕ್ಕೆ ಜೀವಂತ ಇರುವಿಕೆ ಅಗತ್ಯ ಎಂದಾಯಿತಲ್ಲವೆ? ಈ ವಾದದ ಮುಂದುವರಿದ ಭಾಗವೆಂದರೆ ಕೆಲವು ಭೌತಿಕ ಮೂಲಾಂಶಗಳ ಮತ್ತು ಕೆಲವು ಮಾನಸಿಕ ಮೂಲಾಂಶಗಳ ಸಂಯುಕ್ತ ವಸ್ತುವುಳ್ಳದಾಗಿದೆ. ಅದನ್ನು ಖಂದಗಳೆಂದು ಕರೆಯುತ್ತಾರೆ"

"ಗುರುದೇವಾ, ಖಂದಗಳೆಂದರೆ ಏನು? ಅದರಲ್ಲಿ ಎಷ್ಟು ವಿಧ? ಅದು ಯಾವ ಮೂಲಾಂಶಗಳಿಂದ ಕೂಡಿದೆ ? ಆತ್ಮಕ್ಕೂ, ಅರಿವಿಗೂ ಸಂಬಂಧವಿದೆಯೇ? ಆ ಎರಡೂ ಒಂದೇ ವಸ್ತುವೇ? ಅಥವಾ ವಿಭಿನ್ನವೆ? ಇವುಗಳ ಸ್ವರೂಪವೇನು? ಸಂಯೋಜನೆ ಏನು? ಪರಿಣಾಮವೇನು?"

"ಪೂಜ್ಯ ಮಹಾಲಿ, ನಾಮರೂಪದಲ್ಲಿ ಎರಡು ವಿಧ. ನಾಮಖಂದ ಮತ್ತು ರೂಖಂದ ಎಂದು. ಈ ನಾಮಖಂದವನ್ನು "ವಿನಾನ" ಅಥವಾ "ಅರಿವು" ಎನ್ನುತ್ತಾರೆ. ಇದು ಮೂರು ಮಾನಸಿಕ ಮೂಲಾಂಶಗಳಿಂದ ಕೂಡಿದೆ. ಅದೆಂದರೆ, 'ವಿದಾನ' ಎಂದರೆ ಆರು ಇಂದ್ರಿಯಗಳು ಪ್ರಪಂಚದ ಜೊತೆಯಲ್ಲಿ ಸಂಪರ್ಕಗೊಂಡಾಗ ಉಂಟಾಗುವ ಸಂವೇದನೆ. 'ಸನ್ನ' ಎಂದರೆ ಗ್ರಹಿಕೆ. 'ಸಂಖರ' ಎಂದರೆ ಮನಸ್ಥಿತಿಗಳು. 'ಚೇತನ' ಎಂದರೆ "ಪ್ರಜ್ಞೆ"

"ರೂಪಖಂದ ಎಂಬುದು ಭೂಮಿ, ನೀರು, ಬೆಂಕಿ ಮತ್ತು ಗಾಳಿ ಎಂಬ ಭೌತಿಕ ಮೂಲಾಂಶದಿಂದ ಕೂಡಿದ್ದು, ಇವು ದೇಹ ಅಥವಾ ರೂಪವನ್ನು ನಿರ್ಮಿಸುತ್ತವೆ. ಈ ಮೂಲಧಾತುಗಳ ಸಂಯೋಜನೆಯ ಫಲವೇ ವ್ಯಕ್ತಿಯ ಅಸ್ತಿತ್ವ. ಆದರೆ ಮಹಾಲಿ ಈ ಯಾವ ಮೂಲಧಾತುವಿನ ಸಂಯೋಜನೆಯೇ ಇಲ್ಲದ "ಆತ್ಮ" ಕೇವಲ ಕಲ್ಪನೆ ಅಲ್ಲವೆ? ಎಲ್ಲಿ ರೂಪ ಮತ್ತು ಕಾಯ ಇದೆಯೋ ಅದನ್ನು ಅನುಸರಿಸಿ "ಅರಿವು" ಇರುತ್ತದೆ. ಇದನ್ನೆ ನಾನು ಪರಿಜ್ಞಾನ ಎನ್ನುವುದು. ಅರಿವಿನ ಮೂಲಗ್ರಹಿಕೆ, ಭಾವನಾತ್ಮ ಕತೆ ಮತ್ತು ಇಚ್ಛಾ ಪೂರ್ವಕವಾದದು. ಈ ಅರಿವು ಮೂಡಿದಾತನೇ ಜೀವಂತ ವ್ಯಕ್ತಿ. ಇದರ ಹಿಂದೆ ಕ್ರಿಯೆ ಇದೆ! ಆದರೆ ಹೇಳು ಮಹಾಲಿಯೇ, ನೀನು ಪ್ರತಿಪಾದಿಸುವ ಆತ್ಮಕ್ಕೆ ಕ್ರಿಯೆ ಇದೆಯೇ? ಅಸ್ತಿತ್ವ ಇದೆಯೇ? 'ಕ್ರಿಯೆ' ಇಲ್ಲದ ಆತ್ಮ ಅನರ್ಥಕಾರಿ ಅಲ್ಲವೆ? ಬಹುಜನರ ಶೋಷಣೆಗಾಗಿ ನಾವೇ ಸೃಷ್ಟಿಸಿ ಪುರೋಹಿತಶಾಹಿ ವರ್ಗದ ಕೈಗೆ ಒಪ್ಪಿಸಿದ ಆಯುಧವಲ್ಲದೆ ಮತ್ತೇನು? ಧರ್ಮದ ಮೂಲ ಸಕಲರಿಗೂ ನೀಡುವ ಹಿತ, ಜ್ಞಾನ, ಸತ್ಯ ಮತ್ತು ಅರಿವಲ್ಲವೆ? ಎಂದ ಬುದ್ಧ. ಆತ್ಮದ ಅಸ್ತಿತ್ವದ ಎಲ್ಲ ಮಗ್ಗುಲು, ಮುಖಗಳನ್ನು ಸಮಗ್ರವಾಗಿ ಅರಿತ ಮಹಾಲಿಯು ಬುದ್ಧನನ್ನು ಉದ್ದೇಶಿಸಿ ಹೀಗೆ ಕೃತಜ್ಞತೆಯನ್ನು ಸಲ್ಲಿಸಿದಃ

"ಹೌದು ಗುರುದೇವಾ, ಆತ್ಮದಲ್ಲಿ ನಂಬಿಕೆ ಇಡುವುದು ಧರ್ಮವಲ್ಲ...! ದೇವರು, ಆತ್ಮ ಮತ್ತು ಧರ್ಮಕ್ಕಿಂತ ಅರಿವೇ ಮೊದಲು...!! ಆಗ ಮಾತ್ರ ಮನುಕುಲಕ್ಕೆ ಪುರೋಹಿತಶಾಹಿ ವರ್ಗದಿಂದ ಶಾಶ್ವತ ಬಿಡುಗಡೆ..!!!" ಎಂದು ಬುದ್ಧನಿಗೆ ಮತ್ತೊಮ್ಮೆ ನಮಿಸಿದ. □

ಯೋಗ್ಯವಲ್ಲವು ಯಜ್ಞ

ಪಂಡಿತನಾದ ಉಜ್ಜಯನು ಬುದ್ಧನನ್ನು ಉದ್ದೇಶಿಸಿ ಗೆ ಹೇಳಿದನು:

"ಗೌತಮರೆ, ತಾವು ಯಜ್ಞವನ್ನೇಕೆ ಮಾನ್ಯ ಮಾಡು ದಿಲ್ಲ? ಪ್ರಶಂಸಿಸುವುದಿಲ್ಲ?"ಎಂದು ಪ್ರಶ್ನಿಸಿದ. ಅದಕ್ಕೆ ತಮ ಕೊಟ್ಟ ಉತ್ತರ ಹೀಗಿತ್ತು:

"ಎಲೈ ಉಜ್ಜಯನೇ, ಯಾವ ಯಜ್ಞವು ಪ್ರಾಣಿಬಲಿ ಂದ, ಜೀವರಾಶಿಗಳ ನಾಶದಿಂದ. ಕೇವಲ ನಂಬಿಕೆ ಂದ, ಲೌಕಿಕದಲ್ಲಿಯ ಪದವಿ ಮತ್ತು ಸುಖ ಭೋಗದ ಲಸೆಯಿಂದ ಕೂಡಿರುತ್ತದೋ, ಹಾಗೆಯೋ ಅಲೌಕಿಕದ ನೆಗೆ ಬಲಿಯಾಗಿರುತ್ತದೋ ಅಂತಹ ಯಜ್ಞವನ್ನು ನು ಮಾನ್ಯ ಮಾಡುವುದಿಲ್ಲ. ಹಾಗೂ ಎಂದಿಗೂ ಶಂಸಿಸುವುದಿಲ್ಲ."

"ಗೌತಮರೆ, ತಾವು ಹಾಗೇಕೆ?"

"ಎಲೈ ಉಜ್ಜಯನೇ, ಎಲ್ಲಿ ಹಿಂಸೆ ಮತ್ತು ಢ್ಯವೇ ಪ್ರಧಾನ್ಯವಾಗಿರುತ್ತದೋ ಅಲ್ಲಿ ಯೋಗ್ಯರೂ ಳಿಯುವುದಿಲ್ಲ. ಎಲ್ಲಿ ಯೋಗ್ಯರ ಪಾತ್ರ ಇರುವು ಲ್ಲವೋ ಅದು ಯೋಗ್ಯ ಮಾರ್ಗವಲ್ಲ. ಯಾವುದು ೋಗ್ಯ ಮಾರ್ಗ ಅಲ್ಲವೋ ಅದು ಅಧರ್ಮದಿಂದ ಡಿರುತ್ತದೆ. ಹಾಗಾಗಿ!"

"ಗೌತಮರೆ, ಯೋಗ್ಯ ಮಾರ್ಗ ಯಾವುದು?"

"ಎಲೈ ಉಜ್ಜಯನೇ, ಯಾವ ಯಜ್ಞದಲ್ಲಿ ಗೋವು ಸಂಹಾರವಾಗುವುದಿಲ್ಲವೋ, ಯಾವ ಯಜ್ಞದಲ್ಲಿ ವರಾಶಿಗಳು ಸಂಹಾರ ಆಗುವುದಿಲ್ಲವೋ ಯಾವ ಜ್ಞ ಕುಂಡವು ಕಸಾಯಿಖಾನೆಯಾಗಿ ಮಾರ್ಪಡುವುದಿಲ್ಲವೋ ಅದೇ ಯೋಗ್ಯ ಮಾರ್ಗ!"

"ಗೌತಮರೆ, ತಾವು ಏನನ್ನು ಪ್ರಶಂಸಿಸುತ್ತೀರಿ?"

"ಎಲೈ ಉಜ್ಜಯನೇ, ಸತ್ಯ ಮಾರ್ಗವನ್ನು ವಾಸ್ತವ ದೃಷ್ಟಿಕೋನವನ್ನು ಸಕಲ ಜೀವರಾಶಿಗಳ ಹಿತವನ್ನು, ಕುಟುಂಬದ ಸೌಖ್ಯಕ್ಕೆ ದೀರ್ಘಕಾಲದಿಂದ ನಡೆದು ಬಂದಿರುವ ನ್ಯಾಯಯುತ ದಾನವನ್ನು ಮತ್ತು ನೈವೇದ್ಯವನ್ನು ನಾನು ಪ್ರಶಂಸಿಸುತ್ತೇನೆ. ಇದನ್ನೆ ನಾನು ಯೋಗ್ಯ ಮಾರ್ಗ ಎಂದದ್ದು"

"ಗೌತಮರೆ, ಹೀಗೇಕೆ? ಇದರ ಪರಿಣಾಮ ವೇನು?"

"ಎಲೈ ಉಜ್ಜಯನೇ, ಸತ್ಯ ಪಥದತ್ತ ಚಲಿಸುವವರೇ, ಪಂಡಿತರು, ಜ್ಞಾನಿಗಳು, ಪರಿಶುದ್ಧರು ಮತ್ತು ಪರಿಪೂರ್ಣರು ಅವರೇ ಯೋಗ್ಯರು! ಅವರು ನಡೆವ ಹಾದಿಯೇ ಯೋಗ್ಯ ಮಾರ್ಗ. ನಾವುಗಳು ಅವರನ್ನೆ ಮಾರ್ಗದರ್ಶಕರನ್ನಾಗಿ ಪಡೆಯಬೇಕು. ಆದ್ದರಿಂದ ಯಾವ ಯಜ್ಞಯಾಗವು ಕಸಾಯಖಾನೆಯಾಗಿ ಏರ್ಪಟ್ಟಿಲ್ಲವೋ ಅತ್ತ ಕಡೆ ಯೋಗ್ಯರು ಸುಳಿಯುತ್ತಾರೆ. ಇದೇ ಒಳಿತಿನ ಸೂಚನೆ. ಹಾಗಾಗಿ, ಇದರ ಪರಿಣಾಮವೇ ಲೋಕ ಹಿತ. ಕೆಲವರ ಹಿತವೇ ಯಜ್ಞ ಎನ್ನುವುದಾದರೆ ಅದು ಧರ್ಮ ಹೇಗಾದೀತು?"

"ಹೌದು ಗೌತಮರೇ, ನಿಮ್ಮ ವಾದ ಯೋಗ್ಯ ವಾದದ್ದು! ನಿಮ್ಮ ಮಾರ್ಗ ಯೋಗ್ಯವಾದದ್ದು!! ನಿಮ್ಮ ಧರ್ಮ ನಿಜಕ್ಕೂ ಮಾನವ ಧರ್ಮವೇ ಸರಿ!!!" ಎಂದು ಉಜ್ಜಯನು ಬುದ್ಧನನ್ನು ವಂದಿಸಿದ.

'SAMVADA' Kannada Monthly, JUNE 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

* ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ. ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ
  ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟ ಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲೆ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು
  ರಾತ್ರಿ ವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ-ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ
Karnataka Information